ಸಂಪುಟ 22 ಸಂಚಿಕೆ 35-36
ಸೆಪ್ಟೆಂಬರ್ 3, 2000 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಪ್ರೇಕ್ಷಾರಂಗ




ಆಂಧ್ರದಲ್ಲಿ ರಕ್ತದೋಕುಳಿ

ಕೋಲಾರದಲ್ಲಿ ರೇಷ್ಮೆ ಬೆಳೆಗಾರರ ದುಸ್ಥಿತಿ



ರಸಗೊಬ್ಬರದ ಕರ್ಮಕಾಂಡ



ರಾಜ್: ಮುಂದುವರಿದ ಆತಂಕ

ಆಘಾತಕಾರಿ ವಿದ್ಯುತ್ ದರ ಏರಿಕೆ

ಜನಸಾಮಾನ್ಯರು ಬೆಲೆಏರಿಕೆ ಬವಣೆಗಳಿಂದ ತತ್ತರಿಸುತ್ತಿದ್ದಾರೆ. ರೈತರು ಬೆಳೆದ ಬೆಲೆಗೆ ಬೆಲೆಯಿಲ್ಲದೇ, ಅಘಾತಕಾರಿಯಾದ ಕೇಂದ್ರ ಸರ್ಕಾರದ ಆಮದು ನೀತಿಗೆ ಬಲಿಯಾಗಿ ದಿವಾಳಿಯಾಗುತ್ತಿದ್ದಾರೆ. ಸಾಲ ತೀರಿಸಲಾಗದೇ ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿದ್ಯುತ್ ದರಗಳನ್ನು ಬೇಕಾಬಿಟ್ಟಿಯಾಗಿ ಹೆಚ್ಚಿಸಲು ಮುಂದಾಗಿವೆ.

ಉದಾರೀಕರಣದ ಪ್ರಕ್ರಿಯೆಯಲ್ಲಿ ಇವೆಲ್ಲಾ ಸಹಜವೆಂದು ಸರ್ಕಾರ ಸಮಜಾಯಿಷಿ ಹೇಳುತ್ತಿದೆ. ಕಳೆದ ಕೆಲವು ವರ್ಷಗಳಿಂದ ವಿಶ್ವಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಒತ್ತಡಕ್ಕೆ ಮಣಿದು ತರಲಾಗುತ್ತಿರುವ ಈ ನೀತಿಗಳು ಇಂತಹ ಅದರಲ್ಲಿಯೂ ಮುಖ್ಯವಾಗಿ ವಿದ್ಯುತ್ ಶಕ್ತಿಯ ಮಂಡಳಿಗಳನ್ನೇ ನಾಶಮಾಡಿವೆ. ವಿದ್ಯುತ್‌ನ ಉತ್ಪಾದನೆ, ಪ್ರಸರಣ ಹಾಗೂ ವಿತರಣೆಯ ಪ್ರತಿ ಹಂತವನ್ನು ವಿಭಜಿಸಿ ಖಾಸಗಿಯವರಿಗೆ ನೀಡಲಾಗುತ್ತಿದೆ. ಇಂತಹ ಕ್ರಮ ಕೈಗೊಂಡಿದ್ದ ಆಂಧ್ರ ಪ್ರದೇಶದಲ್ಲಿ ಆವೆಲ್ಲವು ನಷ್ಟವನ್ನು ತಂದಿರುವ ಅನುಭವ ಕಣ್ಣೆದುರಿಗೆ ಇದೆ.

ನಮ್ಮಲ್ಲಿನ ಜಲ ಸಂಪನ್ಮೂಲ ಬಳಸಿ ಹೈಡ್ರೋ ಎಲೆಕ್ಟ್ರಿಸಿಟಿ ಮೂಲಕ ವಿದ್ಯುತ್ ಉತ್ಪಾದಿಸಲು ಸರ್ಕಾರಗಳಿಗೆ ಬೇಕಿಲ್ಲ. BHEL ನಂತಹ (ಭಾರತ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್) ದೇಶ ವಿದೇಶಗಳಲ್ಲಿನ ಪ್ರಖ್ಯಾತಿ ಹೊಂದಿರುವಂತಹ ಈ ಸಾರ್ವಜನಿಕ ವಲಯದ ಉದ್ದಿಮೆಯನ್ನು ಬಳಸಿಕೊಳ್ಳುತ್ತಿಲ್ಲ ತಮ್ಮ ಜನಪ್ರಿಯ ಯೋಜನೆಗಳಿಗಾಗಿ (ಪುಕ್ಕಟ್ಟೆ ವಿದ್ಯುತ್) ಬಳಸಿಕೊಂಡ ವಿದ್ಯುತ್‌ನ ಹಣ ವನ್ನು ಸರ್ಕಾರಗಳು ಪಾವತಿ ಮಾಡುತ್ತಿಲ್ಲ. ಕೈಗಾರಿಕೋದ್ಯಮಿಗಳು ಕಟ್ಟಬೇಕಾದ ವಿದ್ಯುತ್ ಬಾಕಿ ಬಿಲ್ ಸಂಗ್ರಹಿಸದೇ ಬಿಡಲಾಗಿದೆ. ಇದಕ್ಕೆ ಸರ್ಕಾರದ ಕ್ರಮವಿಲ್ಲ. ಅಧಿಕಾರಿಗಳ ದುಂದು ವೆಚ್ಚಗಳಿಗೂ ಕಡಿವಾಣವಿಲ್ಲ.

ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ವಿದ್ಯುತ್ ದರಗಳನ್ನು ಎಗ್ಗಿಲ್ಲದೇ ಹೆಚ್ಚಿಸಲು ಜನರ ಮೇಲೆ ಹೊರೆ ಹಾಕಲು ನಿರ್ಧರಿಸಿದೆ. ಮತ್ತೆ ರಾಜ್ಯ ಸರ್ಕಾರಗಳು ಜಾರಿಗೊಳಿಸುವಂತೆ ತೀವ್ರ ಒತ್ತಡ ಹೇರುತ್ತಿದೆ. ಈ ಸುಲಿಗೆಗೆ ಒಳಗಾಗುವವರು ಎಲ್ಲಾ ವಿಭಾಗದ ಜನ. ಜನಸಾಮಾನ್ಯ ಗ್ರಾಹಕರು, ರೈತರು, ಸಣ್ಣ ಕೈಗಾರಿಕೆಗಳ ಉದ್ದಿಮೆದಾರರು... ಹೀಗೆ ಎಲ್ಲರೂ.

ಸಂಪಾದಕೀಯ


ವಾಜಪೇಯಿ ಸರ್ಕಾರ ವಿದ್ಯುತ್‌ಚ್ಛಕ್ತಿ ರಂಗವನ್ನು ಖಾಸಗೀಕರಿಸಲು ಮುಂದಾಗುತ್ತಿದೆ. ಮುಖ್ಯವಾಗಿ ವಿದೇಶಿ ಕಂಪನಿಗಳು ವಿದ್ಯುತ್ ಮಂಡಳಿ ಆಸ್ತಿಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಹಲವು ವರ್ಷಗಳಿಂದ ವಿದ್ಯುತ್ ರಂಗದಲ್ಲಿ ಸಾರ್ವಜನಿಕ ಹಣಹೂಡಿಕೆಯನ್ನು ಕಡಿತಗೊಳಿಸುತ್ತಾ ಬರುತ್ತಿರುವುದರಿಂದ ವಿದ್ಯುತ್ ಉತ್ಪಾದನೆಯನ್ನು ವಿಸ್ತರಿಸಲಾಗುತ್ತಿಲ್ಲ

ಕೇಂದ್ರದ ನೀತಿಗಳನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳಲ್ಲಂತೂ ಸ್ಥಿತಿ ಗಂಭೀರವಿದೆ. ಅದರಲ್ಲಿಯೂ ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಸರ್ಕಾರದ ನಿರ್ಧಾರಗಳು ಅತ್ಯಂತ ಹಾನಿಕಾರಕ ಅಸಹನೀಯ. ಸಾಮಾನ್ಯ ಕುಟುಂಬವು ತನ್ನ ಸಾಮಾನ್ಯ ಬಳಕೆಗೂ ಮೂರು ಅಥವಾ ನಾಲ್ಕು ಪಟ್ಟು ಹೆಚ್ಚಿಗೆ ವಿದ್ಯುತ್ ದರ ತೆರಬೇಕಾಗಿದೆ. ಈ ಹಿಂದೆ ಮೊದಲ 200 ಯೂನಿಟ್ ಬಳಕೆಗ ರೂ 165/- ಇದ್ದದ್ದು ಜೂನ್ 3,2000 ದಿಂದ ರೂ 510/- ಕ್ಕೆ ಏರಿದೆ. ಅಂದರೆ ಶೇ. 209 ರಷ್ಟು. ಇದು ಆರಂಭದ ಅಂಶ ಮಾತ್ರ. ಮಹಾರಾಷ್ಟ್ರ ಸರ್ಕಾರದ್ದು ಸಹ ಇಂತಹದ್ದೆ. 1998 ರಲ್ಲಿ ಹೆಚ್ಚಿಸಿದ ನಂತರದಲ್ಲಿ ಮತ್ತೆ ಈಗ ರೂ 497.50ಕ್ಕೆ ಹೆಚ್ಚಿಸಿದೆ. ಬಹುರಾಷ್ಟ್ರೀಯ ಕಂಪನಿ ಎನ್ರಾನ್‌ಗೆ ಶೇ. 16 ರ ಲಾಭದ ಗ್ಯಾರಂಟಿ ನೀಡಿದೆ. ಒರಿಸ್ಸಾದಲ್ಲಿ 1995 ರಿಂದಲೇ ವಿದ್ಯುತ್ ಮಂಡಳಿಯನ್ನ ಕಳಚಿ ಹಂತ ಹಂತವಾಗಿ ದರಗಳನ್ನು ಹೆಚ್ಚುಸುತ್ತಾ ಈಗ ರೂ 160 ರಿಂದ ರೂ 310ಕ್ಕೆ ಏರಿಸಿದೆ. ಉತ್ತರ ಪ್ರದೇಶದಲ್ಲಿ ಶೇಕಡ 18 ರಷ್ಟು ಹೆಚ್ಚಿಸಲು ನಿರ್ಧರಿಸಿದೆ. ಹರಿಯಾಣದ್ದೂ ಇದೇ ಹಾದಿ. ಕರ್ನಾಟಕವು ಸಹ ಈಗಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವನ್ನು (ಕೆ.ಇ.ಆರ್.ಸಿ) ರಚಿಸಿ ಹೊಸ ಶಿಫಾರಸ್ಸುಗಳನ್ನು ಸರ್ಕಾರದ ಮುಂದಿರಿಸಿದೆ. ದರಗಳ ವಿಷಯದಲ್ಲಿ ಹೆಚ್ಚಳದ ಸೂಚನೆಯನ್ನು ನೀಡತೊಡಗಿದೆ. ಇತರ ರಾಜ್ಯಗಳಿಗಿಂತ ತಾವೇನೂ ಕಡಿಮೆ ಇಲ್ಲ ಎಂದು ತೋರಿಸುವ ಆತುರದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ.

ಆಂಧ್ರ ಚಂದ್ರಬಾಬು ನಾಯ್ಡು ಸರ್ಕಾರ ಜನರ ಮೇಲೆ ಹೇರಿರುವ ಹೊರೆಯ ವಿರುದ್ಧ ಎಡಪಕ್ಷಗಳು ಸಲಾಗಿ ರಾಜ್ಯಾದ್ಯಂತ ಕಳೆದ ಎರಡು ತಿಂಗಳುಗಳಿಂದ ಪ್ರತಿಭಟಿಸುತ್ತಾ ಬಂದಿವೆ. ಆದರೆ ಚಂದ್ರಬಾಬು ನಾಯ್ಡುರವರು ಜನರ ಬವಣೆಗಳು ಬೇಡಿಕೆಗಳನ್ನು ಪರಿಶೀಲಿಸದೇ ಅತ್ಯಂತ ಕ್ರೂರವಾಗಿ ಚಳುವಳಿ ಕಾರರನ್ನು ದಮನಮಾಡತೊಡಗಿದ್ದಾರೆ. ವಿಪರೀತ ಧಾಳಿ, ಪೋಲೀಸ್ ದಬ್ಬಾಳಿಕೆ ಮಿತಿಮೀರಿ ನಡೆಯತೊಡಗಿವೆ. ಸಾವಿರಾರು ಕಾರ್ಯಕರ್ತರು ಅನೇಕ ಪ್ರಮುಖ ನಾಯಕರು ತೀವ್ರ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಪಕ್ಷದ ಕಛೇರಿಗಳ ಮೇಲೆ ಧಾಳಿ ನಡೆಯತೊಡಗಿದೆ. ಸುಳ್ಳು ಮೊಕದ್ದಮೆಗಳನ್ನು ಹೂಡಲಾಗಿದೆ. ಆದರೂ ಇವುಗಳಿಗೆ ಸೊಪ್ಪು ಹಾಕದೇ ಚಳುವಳಿ ಮುಂದುವರೆದಿದೆ. ಹಾಗೂ ವಿಸ್ತರಿಸುತ್ತಿದೆ. ಈ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆ ಎತ್ತಿದ ವಿರೋಧಪಕ್ಷಗಳ ಶಾಸಕರನ್ನು ಕಲಾಪಗಳಿಂದ ಅಮಾನತ್ತು ಗೊಳಿಸಲಾಗಿದೆ. ವಿರೋಧಪಕ್ಷಗಳೇ ಇಲ್ಲದೆ ಕಲಾಪಗಳನ್ನು ನಡೆಸುವ ಪ್ರಜಾತಂತ್ರ ವಿರೋಧಿ, ಸರ್ವಾಧಿಕಾರದ ಕ್ರಮ ಅನುಸರಿಸುತ್ತಿದ್ದಾರೆ. ಈ ನೀತಿಗಳು ಖಂಡನೀಯ. ಹಾಗೂ ಹೋರಾಟಗಾರರಿಗೆ ಸೌಹಾರ್ದ ಅಗತ್ಯ.

ಹಿಂದಿನ ಸಂಚಿಕೆಯಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾದ ಇ.ಎಂ.ಎಸ್. ಸರ್ಕಾರದ ಕಗ್ಗೊಲೆ ಬಗ್ಗೆ ಓದಿರುವಿರಿ ಈ ಸಂಚಿಕೆಯಲ್ಲಿ ಭಾರತ-ಚೀನಾ ಗಡಿ ವಿವಾದದ ಹೆಸರಿನಲ್ಲಿ ಹುತಾತ್ಮರ ಸ್ಮಾರಕಕ್ಕೆ ಕಾಂಗ್ರೆಸ್ ಅಗೌರವ ತೋರಿಸಿದ ಬಗೆ ಹಾಗೂ ಕಮ್ಯುನಿಸ್ಟರ ಮೇಲಿನ ಅಪಪ್ರಚಾರದ ಬಗ್ಗೆ ಓದಿ.....

ಚೀನಾ- ಭಾರತ ಕಹಿ ಸಂಬಂಧ



1959ರ ನವೆಂಬರ್ ಭಾರತ ಮತ್ತು ಚೀನಾ ನಡುವೆ ಗಡಿ ವಿಷಯವಾಗಿ ಸಮಸ್ಯೆ ಶುರುವಾಯಿತು. ಇಂಥ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಮಾತ್ರ ಪರಿಹರಿಸಿಕೊಳ್ಳಬಹುದು, ಬೇರೆ ಯಾವುದೇ ದಾರಿಯಿಲ್ಲ ಎಂನು ನಮ್ಮ ಪಕ್ಷ ಪತ್ರಿಪಾದಿಸುತ್ತ ಬಂದಿದೆ.

ಎರಡು ಸೇನೆಗಳ ನಡುವೆ ಕನಿಷ್ಠ 25 ಮೈಲುಗಳ ಅಂತರ ಇರಬೇಕೆಂಬ ಪ್ರಸ್ತಾವವನ್ನು ನವೆಂಬರ್ ಐದರಂದು ಮಂಡಿಸಲಾಯಿತು. ಗಡಿ ಸಮಸ್ಯೆಗೆ ಯಾವುದಾದರೂ ಪರಿಹಾರ ಕಂಡು ಕೊಳ್ಳುವವರೆಗೆ ಈ ಯಥಾ ಸ್ಥಿತಿಯನ್ನು ಮುಂದುವರಿಸಬೇಕಿತ್ತು. ಆಡಳಿತಾತ್ಮಕ ವಿಷಯುಗಳನ್ನು ಇತ್ಯರ್ಥಪಡಿಸುವ ಸಲುವಾಗಿ, ಆ ಪ್ರದೇಶದಲ್ಲಿ ಎರಡೂ ದೇಶಗಳು ನಾಗರಿಕ ಅಧಿಕಾರಿಗಳು ಮತ್ತು ಶಸ್ತ್ರರಹಿತ ಪೊಲೀಸರನ್ನು ಇಡುವುದೆಂದು ಪ್ರಸ್ತಾವಿಸಲಾಯಿತು. ಚೀನಾ ಪ್ರಧಾನಿ ಚೌ ಎನ್ ಲ್ಯಾ ಈ ಪ್ರಸ್ತಾಪವನ್ನು ಮುಂದಿಟ್ಟರು. ಪ್ರಧಾನಿ ನೆಹರೂ ಈ ಪ್ರಸ್ತಾವವನ್ನು ಒಪ್ಪುವಂತೆ ಕಂಡು ಬಂತು. ಆದರೆ ಇತರ ಕೆಲವು ಪ್ರಭಾವಿ ನಾಯಕರು ಮತ್ತು ಸಚಿವರು ಒತ್ತಡ ಹೇರಿ ಪ್ರಸ್ತಾವವನ್ನು ತಿರಸ್ಕರಿಸುವಂತೆ ಮಾಡಿದರು. ಸಂಸತ್ತಿನ ಎರಡೂ ಸದನಗಳಲ್ಲಿ ವಿಷಯ ಪ್ರಸ್ತಾವವಾಯಿತು. ಆದರೆ ನೆಹರೂ ತಮ್ಮ ನಿಲುವನ್ನು ವಿವರಿಸಲಿಲ್ಲ.

ನೆಹರೂ ಮತ್ತು ಚೌ ಎನ್ ಲ್ಯಾ ತಕ್ಷಣವೇ ಚರ್ಚೆ ನಡೆಸಬೇಕೆಂದು ನವೆಂಬರ್ 14 ರಂದು ಮೀರತ್‌ನಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿ ಅಧಿವೇಶನ ಆಗ್ರಹಪಡಿಸಿತು. ಈ ಬೇಡಿಕೆಯನ್ನು ಮುಂದಿಟ್ಟು ಕಮ್ಯೂನಿಸ್ಟ್ ಪಕ್ಷ ಮತ್ತು ಫಾರ್ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್) ನವೆಂಬರ್ 22 ರಂದು ಕಲ್ಕತ್ತ ಮೈದಾನದಲ್ಲಿ ಬೃಹತ್ ರ್‍ಯಾಲಿ ನಡೆಸಿದವು. ಅದನ್ನುದ್ದೇಶಿಸಿ ನಾನು ಮಾತನಾಡಿದೆ.

ಮರುದಿನ ಭಾರತ -ಚೀನಾ ವಿಷಯವಾಗಿ ವಿಧಾನಸಭೆಯಲ್ಲಿ ನಡೆದ ಚರ್ಚೆಗಳಲ್ಲಿ ಭಾಗವಹಿಸಿ ನಾನು ಮಾತನಾಡಿದೆ. ಕೆಲವು ಪ್ರತಿಗಾಮಿ ಶಕ್ತಿಗಳು ಗಡಿವಿವಾದದ ಪ್ರಯೋಜನ ಪಡೆಯುತ್ತಿದ್ದಾರೆನ್ನುವದನ್ನು ದೇಶದ ಜನತೆ ಅರಿಯಬೇಕು. ಸಮಾಲೋಚನೆ ನಡೆಸಿ ಪರಿಹಾರ ಕಂಡು ಕೊಳ್ಳುವುದೊಂದೇ

ಪುಟ 6 ಕ್ಕೆ

ಮಾಧ್ಯಮ (ಟಿ.ವಿ) ಕ್ಷೇತ್ರದಲ್ಲೊಂದು ಹೊಸ ಗಾಳಿ

ಮಲಯಾಳಂ ಭಾಷೆಯ "ಕೈರಳಿ"

ದಿನಾಂಕ 16-8-2000 ಅಂದು ಕೇರಳದಲ್ಲಿ ರೈತರೆಲ್ಲರೂ ಸಡಗರದಿಂದ ಆಚರಿಸುವ ಹಬ್ಬ ಚಿಂಗಂ. ಆದರೆ ಅದು ಭಾರತದ ಜನರೆಲ್ಲ ಆಚರಿಸಬೇಕಾದ ಉತ್ಸವದದಿನವಾಗಿ ಬಿಟ್ಟಿದೆ. ಅಂದು ಕೇರಳದ ತಿರುವನಂತಪುರದಲ್ಲಿ "ಕೈರಳಿ" ಎಂಬ ಮಲೆಯಾಳಂ ಭಾಷೆಯ ಟಿ.ವಿ. ಛಾನೆಲ್ ಉದಯವಾಯಿತು.

ಅದರಲ್ಲೇನು ವಿಶೇಷ ಇಂದು ಭಾರತದಲ್ಲಿರುವ ನೂರಾರು ಟಿ.ವಿ. ಛಾನೆಲ್‌ಗಳಲ್ಲಿ ಮತ್ತೊಂದು ಅಷ್ಟೇ ಅಲ್ಲವೆ. ಕನ್ನಡದಲ್ಲಂತೂ ಇದ್ದಕ್ಕಿದ್ದಂತೆ ನಾಲ್ಕಾರು ಛಾನೆಲ್‌ಗಳ ಉಗಮ ವಾಗಿಲ್ಲವೇ? ' 'ಉದಯ' ' ಚಂದನ' ' ಉಷಾ' ಸುಪ್ರಭಾತ, ಕಾವೇರಿ, ಎಂದು ಈ ಟಿವಿಯವರ ಮತ್ತೊಂದು ಛಾನೆಲ್ ನ ಹೆರಿಗೆಯಾಗುವುದರಲ್ಲಿದೆ,

ಹತ್ತರ ಜೊತೆಗೆ ಮತ್ತೊಂದು ಎನ್ನುವಂತಹ ಛಾನೆಲ್ ಅಲ್ಲ ಇದು ಈ ಗಾಗಲೇ ಭಾರತದ ಜನರ ಮನಸ್ಸುಗಳನ್ನು ಕುಡಿತ, ಕುಣಿತ, ಕೇಕೆಗಳ ಮತ್ತಿನಲ್ಲಿ ಮುಳುಗಿಸುತ್ತಿರುವ ಟಿ.ವಿ. ಛಾನೆಲ್‌ಗಳ ಪರಂಪರೆ ಗೆಸೇಂದ ಮತ್ತೊಂದು ಛಾನೆಲ್ ಅಲ್ಲ ಈ ಕುಸಂಸತಿಯ ವಿರುದ್ಧ ಬೀಸುವ ಹೊಸ ಸುಳಿಗಾಳಿ ' ಕೈರಳಿ'.

ಎಲ್ಲಕ್ಕಿಂತ ಮಿಗಿಲಾಗಿ 'ಕೈರಳಿ' ವಿದೇಶಿ ಮತ್ತು ದೇಶಿಯ ಡೊಳ್ಳು ಹೊಟ್ಟೆಯ ಬಂಡವಾಳಗಾರರ ಹಣ ಮಾಡುವ ಕಾಯಕಕ್ಕೆ ಆಸರೆಯಾಗದ ಛಾನೆಲ್. ಕೀಳು ಅಭಿರುಚಿಯ ಟಿ.ವಿ. ಕಾರ್ಯಕ್ರಮಗಳನ್ನು ನೋಡಿ ಬೇಸತ್ತ ಮಲೆಯಾಳಿ ಜನ ಸಮುದಾಯ ರೂಪಿಸಿದ, ಜಗತ್ತಿನಲ್ಲೇ ಪ್ರಥಮ ಎನ್ನಬಹುದಾದ ಸಾಹಸ ಕೇರಳದ ಜನತೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭ ದಲ್ಲಿ ಪ್ರಭಾತಂ, ಮಾತೃ-ಭೂಮಿ ಪತ್ರಿಕೆ ಗಳನ್ನು ರೂಪಿಸಿದಂತೆ ಸ್ವಾತಂತ್ರ್ಯಾ ನಂತರ ದೇಶಾಭಿಮಾನಿ ಪತ್ರಿಕೆಯನ್ನು ರೂಪಿಸುತ್ತಿರುವಂತೆ ಜನರ ಸೃಷ್ಠಿಯಾಗಿ ಉದಿಯಿಸಿದೆ 'ಕೈರಳಿ' ಕೇರಳದ ಜನತೆಗೆ ಮಾತ್ರ ಸಾಧ್ಯವಿರುವ ನಿಸ್ಸೀಮ ಸಾಹಸ.

ಕೇರಳದ ಸಂಸತಿಯ ಜನಪ್ರಿಯ ಪ್ರತಿಬಿಂಬಗಳಾದ ಉತ್ತಮನಟ ಮಮ್ಮುಟ್ಟಿಯಂತಹ ಪ್ರತಿಭಾವಂತ ನಟರ ಸಾರಥ್ಯದಲ್ಲಿ ಕೇರಳದ ಮೂರು ಸಾವಿರ ಕಲಾವಿದರು ಪಾಲ್ಗೊಂಡ ಸಮಾರಂಭದಲ್ಲಿ 'ಕೈರಳಿ ಜಗತ್ತಿನ ಮುಂದೆ ಅವತರಿಸಿದೆ.

'ಕೈರಳಿ' ಬೆಳಗಲಿ, ಬಾಳಲಿ. ಭಾರತದ ಎಲ್ಲೆಡೆ ಹಬ್ಬಿ ಜನ ಸಮುದಾಯದ ಸಂಸತಿ ಹೊಸ ಪರಂಪರೆಯ ಹರಿಕಾರನಾಗಲಿ ಎಂದು ದುಡಿಯುವ ಜನರ ಪ್ರಾಣಮಿತ್ರ " ಐಕ್ಯರಂಗ" ಮನದುಂಬಿ ಹಾರೈಸುತ್ತದೆ.

-ಸಂಪಾದಕ

ಕಣ್ಣು ತೆರೆದಿರುವ ಜನತೆಯ

ದೂರದರ್ಶನ ಚಾನಲ್ - ಕೈರಳಿ

ಹೊಸ ಕಣ್ಣೋಟದಲ್ಲಿ, ವ್ಯತ್ಯಸ್ಥ ಅನುಭವಗಳಿಂದ ಜನಪರ ಹೋರಾಟಕ್ಕೆ ಹೊಸ ಅನುಭವ ನೀಡುವ ಉದ್ದೇಶದಿಂದ ತಿರುವನಂತಪುರದ ಚಂದ್ರಶೇಖರನ್ ನಾಯರ್ ಕ್ರೀಡಾಂಗಣದಲ್ಲಿ ಕೈರಾಲ್-ದೂರದರ್ಶನ ಚಾನಲ್ ಸಪ್ತ ಜ್ಯೋತಿ ಬೆಳಗುವುದರ ಮೂಲಕ ಮಲೆಯಾಳಂ ಜನತೆಯ ರೈತ ದಿನವಾದ ಚಿಂಗಂರಂದು(16.8.2000) ಉದ್ಘಾಟಿಸಲಾಯಿತು. ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್, ಕೇರಳ ಚಲನಚಿತ್ರ ಮಂಡಳಿಯ ಚೇರ್ಮನ್ ಗೋವಿಂದ ಪಿಳ್ಳೆ, ಪ್ರಸಿದ್ಧ ಸಾಹಿತಿ ಓ.ಎನ್.ವಿ.ಕುರುಪ್, ಜನಪ್ರಿಯ ಹಿನ್ನೆಲೆ ಗಾಯಕ ಕೆ.ಜೆ.ಏಸುದಾಸ್, ಜನಪ್ರಿಯ ನಟರಾದ ಮೋಹನ್‌ಲಾಲ್, ಮುಮಟ್ಟಿ, ಹೆಸರಾಂತ ಕ್ರೀಡಾಪಟು ಚಿನ್ನದ ಬಾಲೆ ಪಿ.ಟಿ.ಉಷಾ ಮುಂತಾದ ರಾಜಕೀಯ, ಕಲೆ, ಸಾಹಿತ್ಯ, ಸಿನಿಮಾ, ಕ್ರೀಡೆ ಹೀಗೆ ವಿವಿಧ ರಂಗಗಳ ಪ್ರಮುಖರ ಸಮ್ಮುಖದಲ್ಲಿ ಕೈರಾಲ್ ಚಾನಲ್ ದಾಖಲೆಯಾಗಿದೆ. ಎರಡು ಲಕ್ಷ ಮಲೆಯಾಳಂ ಜನತೆಯ ಒಡೆತನದಲ್ಲಿ ಹುಟ್ಟಿದೆ ಈ 'ಕೈರಾಲ್' ಚಾನಲ್.

ಸಂಜೆ 7 ಗಂಟೆಗೆ ಕ್ರೀಡಾಂಗಣದಲ್ಲಿ ಉದ್ಘಾಟನೆ ಕಾರ್ಯಕ್ರಮಕ್ಕೆ ಬೃಹತ್ ವೇದಿಕೆಯನ್ನು ನಿರ್ಮಿಸಲಾಗಿತ್ತು. 400 ಅಡಿ ಉದ್ದ, 30 ಅಡಿ ಅಗಲದ ಎರಡು ಪರದೆಗಳನ್ನು ನಿರ್ಮಿಸಿ ಹಾಜರಿದ್ದ ಎಲ್ಲಾ ಜನತೆಗೆ ಕಾರ್ಯಕ್ರಮ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು. 40 ಸಾವಿರ ಜನ ಕಾರ್ಯಕ್ರಮಕ್ಕೆ ಹಾಜರಿದ್ದರು.

3 ಸಾವಿರ ಕಲಾವಿದರು ಈ ಸಮಾರಂಭದಲ್ಲಿ ಸಾಂಸ ತಿಕ ಕಾರ್ಯಕ್ರಮ ನೀಡಿದರು. ಉದ್ಘಾಟನಾ ಸಮಾರಂಭದಲ್ಲಿ ಮತಮೈತ್ರಿಯ ಸಂದೇಶವಾಗಿ ಆ ಪ್ರದೇಶದ ಮಸೀದಿ, ಚರ್ಚ್, ದೇವಸ್ಥಾನಗಳಲ್ಲಿ ದೀಪಾಲಂಕಾರ ಮಾಡಲಾಗಿತ್ತು. ಉದ್ಘಾಟನೆಗೆ ಮುಂಚೆ ಜನಪರ ಹೋರಾಟಗಳಲ್ಲಿ ಪ್ರಾಣ ತೆತ್ತ ಹುತಾತ್ಮರಿಗೆ ಶ್ರದ್ಧಾಂಜಲಿಯಾಗಿ 'ಸಾರೆ ಜಹಾಂಸೆ ಅಚ್ಛಾ' ಗೀತೆಯನ್ನು 1500 ವಿದ್ಯಾರ್ಥಿಗಳು ಹಾಡಿದರು.


ಉದ್ಘಾಟನಾ ಸಮಾರಂಭದ ಜನೋತ್ಸವ

ಉದ್ಘಾಟನೆಯಾಯಿತು.

ಅಪಾರ ಜನತೆಯ ಪಾಲುದಾರಿಕೆಯಿಂದ ಹುಟ್ಟಿದ ಈ ಚಾನಲ್ ಇಂದಿನ ಪ್ರಸಾರ ಮಾಧ್ಯಮಗಳ ಚಾನಲ್‌ಗಳ ಚರಿತ್ರೆಯಲ್ಲೆ ಒಂದು ಐತಿಹಾಸಿಕ

ಕೇರಳದಲ್ಲಿರುವ ಹಾಗೂ ರಾಜ್ಯದ ಹೊರಗೆ ವಾಸವಾಗಿರುವ ಎರಡು ಲಕ್ಷ ಮಲೆಯಾಳಂ ಜನತೆಯಿಂದ ಸಂಗ್ರಹಿಸಲಾದ 50 ಕೋಟಿ ರೂಪಾಯಿ ಬಂಡವಾಳದಿಂದ

ಪುಟ 3 ಕ್ಕೆ

ಕರ್ನಾಟಕ ಈ ವಾರ

ಎಸ್.ವೈ.ಗುರುಶಾಂತ್

ಬಿಡುಗಡೆಗೊಳ್ಳದ ಡಾ. ರಾಜ್ ಕಾಡುಗಳ್ಳರ ಹೊಸಬೇಡಿಕೆಗಳು

ಎರಡನೆಯ ಬಾರಿ ಕಾಡಿಗೆ ಹೊಕ್ಕ ಸಂಧಾನಕಾರ ನಕ್ಕೀರನ್ ಗೋಪಾಲನ್ ಡಾ. ರಾಜ್ ರವರನ್ನು ಕರೆದು ತರಲಿಲ್ಲ. ಅಲ್ಲಿಂದ ಹೊರ ಬಂದಿದ್ದು ಕ್ಯಾಸೆಟ್‌ಗಳು ಮಾತ್ರ. ಡಾ। ರಾಜ್ ಬಿಡುಗಡೆ ಆಗಿಯೇ ಬಿಡುತ್ತಾರೆ ಎಂದು ಕಾತರದಿಂದ ಕಾದವರಿಗೆ ಮತ್ತೇ ಉಳಿದದ್ದು ಕಾಯುವುದು ಮಾತ್ರ. ಆದರೆ ಈ ಬಾರಿ ಉಂಟಾದ ದುಗುಡ ಇಮ್ಮಡಿಯುದು.

ಈಗಿನ ಕ್ಯಾಸೆಟ್‌ಗಳಲ್ಲಿ ಮತ್ತೆ ಹೊಸ ಬೇಡಿಕೆಗಳು ಬಂದಿರಬಹುದು. ಒಂದೊಂದು ಬಾರಿಗೂ ಒಂದೊಂದು ಥರಹದ ಬೇಡಿಕೆಗಳು ಕಂತು ಕಂತಾಗಿ ಬರುತ್ತಿವೆ. ಆ ನರಹಂತಕ, ಕಾಡುಗಳ್ಳ ವೀರಪ್ಪನ್ ಗುಂಪು ಈ ಸಮಯವನ್ನೇ ಪೂರ್ಣವಾಗಿ ಬಳಸಿಕೊಳ್ಳಲು ನಿಂತಿದೆ. ಈ ಅಪಹರಣ ಹಿಂದಿನಂತಲ್ಲಾ. ಅತ್ಯಂತ ಪ್ರಸಿದ್ದಿಯ, ಜನಾನು ರಾಗಿ ರಾಜ್‌ರವರನ್ನು ಹಿಡಿದಿಟ್ಟು ಕೊಂಡಿದ್ದಾರೆ. ಇದಕ್ಕಿಂತ ಒಳ್ಳೇ ಅವಕಾಶ ಅವರಿಗೆ ಮುಂದೆ ಸಿಗಲಾರದು ಎಂದು ಭಾವಿಸಿರಬಹುದು. ಅದಕ್ಕಾಗಿಯೇ ಈ ಎಲ್ಲಾ ಒತ್ತಡ, ಥರ ಥರದ ಆಟ.

ಇಬ್ಬರು ಮುಖ್ಯಮಂತ್ರಿಗಳಿಗೆ ಈಗ ಬಂದಿರುವ ಮೂರು ಕ್ಯಾಸೆಟ್‌ಗಳು ಭಿನ್ನ ಭಿನ್ನದ್ದು ಎಂಬ ವರದಿಯಿದೆ. ಎರಡೂ ಸರ್ಕಾರಗಳ ಮುಖ್ಯಮಂತ್ರಿಗಳು, ಗೃಹ ಸಚಿವರು, ಅಧಿಕಾರಿಗಳು ಮತ್ತೆ ಮತ್ತೆ ಸಮಾಲೋಚನೆ ನಡೆಸಿದ್ದಾರೆ, ಆದರೆ ಏನವು ಬೇಡಿಕೆ? ಎಂಥಾ ಸ್ವರೂಪದವು? ಎಂಬುದು ಮಾತ್ರ 'ಈ' "ಪಾರದರ್ಶಕ" ಆಡಳಿತಗಾರರಿಂದ ಜನರಿಗೆ ತಿಳಿಯುತ್ತಿಲ್ಲ.. ಆದರೆ ಮಾಹಿತಿ ಪಡೆಯುವ ಹಕ್ಕಿನ ಸುಗ್ರಿವಾಜ್ಞೆ ಶಾಸನವಾಗಿ, ಪ್ರಕಟವಾಗಿ ಬಿಡುತ್ತದೆ. ಇಂತಹ ಕಾನೂನುಗಳನ್ನು ಮಾಡ ಬಹುದು. ಉದ್ಘೋಷಗಳೂ ಮೊಳಗ ಬಹುದು. ಆದರೆ ಕಾರ್ಯಗತವಾಗ ಬೇಕೆಂದೇನೂ ಇಲ್ಲವಲ್ಲ! ಪ್ರಜೆಗಳು ಬಾಯಿ ತೆರದೇ ಇರಬೇಕಾದ ಬೆಪ್ಪಗಳು....! ಎಂದು ಆಳುವವರು ಭಾವಿಸಿದ್ದಾರೆ.

ಈ ಬಾರಿ ರಾಜ್ ಮಾಡಿದ ಮನವಿಯಲ್ಲಿ ಹೆಚ್ಚಿನ ಒತ್ತು ಚಿತ್ರ ಕೈಗಾರಿಕೆ ಪುನರ್ ಕೆಲಸ ಆರಂಭಿಸಬೇಕು, ಇಲ್ಲವಾದರೆ ಕಾರ್ಮಿಕರ ಜೀವನಕ್ಕೆ ತೊಂದರೆಯಾಗುತ್ತದೆ ಎಂಬ ಕಳಕಳಿ ನುಡಿಗಳು.

ರಾಜ್ ಅಪಹರಣವಾಗಿರುವು ದರಿಂದ ಪೋಲೀಸಕಾಯ್ದೆಯಂತೆ ನಿಷೇದಾಜ್ಞೆ ವಿಧಿಸಲಾಗಿರುವುದರಿಂದ ತಮ್ಮ ಬದುಕಿನ ಬವಣೆಗಳ ಬಗ್ಗೆ, ದೇಶದ ಸಂಪನ್ಮೂಲ, ಸ್ವಾತಂತ್ರ್ಯ ಅಪಹರಣವಾಗುತ್ತಿರುವುದನ್ನು ಪ್ರತಿಭಟಿಸುವ ಹಕ್ಕು ಜನರಿಗೆ ಇಲ್ಲವೆಂದು ಅರಚುವ ಪೋಲೀಸ್ ಅಧಿಕಾರಿಗಳು ಡಾ। ರಾಜ್‌ರವರ ಮಾತಿನಿಂದ ಸ್ವಲ್ಪವಾದರೂ ಕಲಿಯಬೇಕು. ಆದರೆ ಈ ನಿಷೇದಾಜ್ಞೆಗಳು ಜಪಾನಿನ ಪ್ರಧಾನಿಗಳ ಆಗಮನಕ್ಕೆ ಅಡ್ಡಿಯಾಗುವುದಿಲ್ಲ.. ಹೇಗಾದರೂ ಅವರು ಬಂಡವಾಳ ಹೂಡುವವರು ತಾನೇ? ಬೇಡುವ ಸರ್ಕಾರ ಎಲ್ಲದಕ್ಕೂ ಮುಕ್ತ ಮನಸ್ಸಿನದಾಗಿರಬೇಕು ಅಲ್ಲವೇ?!

ಒಟ್ಟಾರೆ ಡಾ।। ರಾಜ್ ಬಿಡುಗಡೆ ಅಷ್ಟು ಸುಲಭದ್ದೂ ಅಲ್ಲ ಎನ್ನಿಸುತ್ತಿದೆ. ಅತ್ಯಂತ ಸೂಕ್ಷ್ಮವಾಗಿ, ಜಾಗೃತೆಯಿಂದ ವರ್ತಿಸಿ ಡಾ।। ರಾಜ್ ಹಾಗೂ ಸಂಗಡಿಗರನ್ನು ಕರೆತರಬೇಕು. ಜನತೆ ಸಂಯಮ, ಸೌಹಾರ್ದತೆ, ಶಾಂತಿಯಿಂದ ವರ್ತಿಸಬೇಕು.

ಉದಾರೀಕರಣದ ಹುಚ್ಚಾಟದಲ್ಲಿ ಬಗ್ಗುತ್ತಿರುವವರು

ಜಪಾನ್‌ನ ಪ್ರಧಾನಿ ಯೊಶೀರೋ ಮೋರಿ, ಬೆಂಗಳೂರಿಗೆ ಬಂದರು, ದೆಹಲಿಗೆ ಹೋಗಿ ಜಪಾನಿಗೂ ವಾಪಾಸಾದರು. ಹಿಂದೆ ಹೈದ್ರಾಬಾದ್‌ಗೆ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಭೇಟಿ. ಅಲ್ಲಿಗೆ ಆತ ಬಂದದ್ದು ತಮ್ಮ ಭಾಗ್ಯವೆಂದು ಬಗ್ಗಿ ಹಿಗ್ಗಿದವರು ಚಂದ್ರಬಾಬುನಾಯ್ಡು. ಅಮೇರಿಕಾದ ಅಧ್ಯಕ್ಷರು ಬೆಂಗಳೂರಿಗೆ ಬರದಿದ್ದರೇನಂತೆ...? ನೋಡಿ ಇನ್ನೊಂದು ಸಿರಿವಂತ ರಾಷ್ಟ್ರದ ಪ್ರಧಾನಿಯೇ ಕರ್ನಾಟಕಕ್ಕೆ ಅಡಿ ಇಟ್ಟಿದ್ದಾರೆ...

ನಾವೇನೂ ಕಮ್ಮಿ ಅಲ್ಲ.... ಮುಂದೆ ಅಕ್ಟೋಬರ್‌ನಲ್ಲಿ ವಿಶ್ವ ಬ್ಯಾಂಕಿನ ಅಧ್ಯಕ್ಷರನ್ನೇ ಕರೆಸುತ್ತಿದ್ದೇವೆ ಎಂದು ಬೀಗುತ್ತಿದ್ದಾರೆ. 'ಸಾಲ ಎತ್ತಲು ಈ ಸರದಾರನೇ ಸೈ, ಎನ್ನಿಸಿಕೊಳ್ಳಬಯಸುವ ಎಸ್.ಎಂ, ಕೃಷ್ಣ. ಈ ಉದಾರೀಕರಣದ ಹುಚ್ಚಾಟದಲ್ಲಿ ದೇಶ ಹಾಗೂ ಜನರನ್ನು ಮಾರಲು ತಾಮುಂದು ನಾಮುಂದು ಎಂದು ಸ್ಪರ್ಧೆ ಮಣೆಹಾಕುತ್ತಿದ್ದಾರೆ ಎಷ್ಟೆಷ್ಟು ಅಡವು ಇಡಲಾಗಿದೆ? ಏನನ್ನು ಮಾರಲಾಗಿದೆ, ಎಷ್ಟು ಬಗ್ಗಲಾಗಿದೆ ಎಂಬುದು ಬಹಿರಂಗಗೊಳ್ಳಬೇಕಾದ ಸತ್ಯ.

ಬೈವಾಟರ್ ಗುತ್ತಿಗೆ: ಒಳ ಒಪ್ಪಂದಗಳು

ಮಲೇಶಿಯಾ ಮೂಲದ ಬೈವಾಟರ್ ಸಂಸ್ಥೆ ಮತ್ತೇ ಸುದ್ದಿಯಲ್ಲಿದೆ. ಹಿಂದೆ ಜೆ.ಹೆಚ್. ಪಟೇಲರು ಮುಖ್ಯಮಂತ್ರಿ ಯಾಗಿದ್ದಾಗ, ಬೆಂಗಳೂರಿನ ಕುಡಿಯುವ ನೀರಿನ ಒಟ್ಟು ವ್ಯವಹಾರಗಳನ್ನು ಈ ಖಾಸಗೀ ಕಂಪನಿಗೆ ಒಪ್ಪಿಸುವ ನಿರ್ಧಾರ ಪ್ರಕಟವಾದಾಗ ಈ ವ್ಯವಹಾರದಲ್ಲಿ ಅತ್ಯಂತ ಅನುಮಾನ, ಆತಂಕ ಪಡುವಂತಹ ಅವ್ಯವಹಾರ ಗಳು ನಡೆದಿವೆಯೆಂದು ಬೊಬ್ಬೆಹೊಡೆದಿದ್ದ ಕಾಂಗ್ರೆಸ್ ಪಕ್ಷವೇ ಈಗ ಮತ್ತೆ ಅದೇ ವಿವಾದಿತ ಬೈವಾಟರ್ ಕಂಪನಿಯೊಂದಿಗೆ ಮರುಸಂಧಾನಕ್ಕೆ ಮುಂದಾಗಿದೆ. ನಿರ್ಮಾಣ-ನಿರ್ವಹಣೆ-ಹಸ್ತಾಂತರ (ಬೂಟ್) ಆಧಾರದ ಮೇಲೆ ಬೆಂಗಳೂರು ನಗರಕ್ಕೆ ಕಾವೇರಿ ಎರಡನೇ ಹಂತ-ನಾಲ್ಕನೇ ಘಟ್ಟದ ಯೋಜನೆಯಲ್ಲಿ ಸುಮಾರು 270 ದಶಲಕ್ಷ ನೀರು ಸರಬರಾಜು ಮಾಡಲು 1300 ಕೋಟಿ ವ್ಯವಹಾರವನ್ನು ಈ ಸಂಸ್ಥೆಯೊಂದಿಗೆ ಗುತ್ತಿಗೆ ಒಪ್ಪಂದಕ್ಕೆ ಮುಂದಾಗಲಿದೆ. ನಮ್ಮ ನೀರು ನಮಗೆ ಕುಡಿಸುವ ಈ ಕಂಪನಿ ವಿಧಿಸುವ ದರಗಳು

(ಅಂದಾಜು1000 ಲೀಟರ್‌ಗೆ ರೂ 26.ಗಳು) ಬಿಲ್ ಪಾವತಿ ಮಾಡಲಾಗದೇ, ನಿರೂ ಗಂಟಲಲ್ಲಿ ಇಳಿಯದೇ, ಜನಸಾಮಾನ್ಯರು ಕೊನೆಯುಸಿರೆಳೆಯುವುದರಲ್ಲಿ ಅನುಮಾನವೇ ಇಲ್ಲ. (ಸಾಮಾನ್ಯ [illegible] ತೆರಬೇಕಾಗಬಹುದು) ವಿರೋಧ ಪಕ್ಷವಿದ್ದಾಗ ವಿರೋಧಿಸಿ ಅಧಿಕಾರಕ್ಕೆ ಬಂದ ನಂತರ ಆ ಕಂಪನಿಯೊಂದಿಗೆ ಸಂಧಾನಕ್ಕೆ ಹಾತೊರೆದ ಕಾಂಗ್ರೆಸ್ ನಾಯಕರು ಗಳಿಸಿದ್ದೇನು ಎಂಬುದು ಅನುಮಾನಾಸ್ಪದ ವಿಷಯ. ಹಿಂದೆ ಪ್ರತಿಭಟಿಸು ವಾಗಲೇ ಮುಂದೆ (ಕಮಿಷನ್) ಒಪ್ಪಂದ ಮಾಡೋಣ ಎಂದು ಮಾತುಕತೆ ಆಗಿತ್ತೇ? ಸೈಬರ್ ಕೃಷ್ಣರವರ ವೆಬ್‌ಸೈಟ್‌ನಲ್ಲಿ ಇದಕ್ಕೆ ಉತ್ತರ ಕಾಣುತ್ತಿಲ್ಲ...? ಕಾಣುತ್ತಿರುವುದು ದೊಡ್ಡ ದೊಡ್ಡ ಕಪ್ಪು, ಕಪ್ಪು ಚುಕ್ಕಿಗಳು ಮಾತ್ರ.

ಎತ್ತಂಗಡಿಯಾಗುತ್ತಿರುವ ಹುದ್ದೆಗಳು

ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನೂ ಕಡಿತಗೊಳಿಸುವ ಮಾತನ್ನು ಮತ್ತೇ ಸರ್ಕಾರ ಆಡಿದೆ. ಖಾಲಿ ಹುದ್ದೆಗಳಿಗೆ ನೇರ ನೇಮಕಾತಿ ರದ್ದತಿಯನ್ನು ಪ್ರಕಟಿಸುತ್ತಲೇ, ವಿಶ್ವ ಬ್ಯಾಂಕ್‌ನ ನಿರ್ದೇಶನದಂತೆ ಸರ್ಕಾರ ನಿರ್ವಹಣೆ ವೆಚ್ಚವನ್ನು ಸರಿದೂಗಿಸಲೆಂದೇ ಈ ಕ್ರಮವೆಂದು ನಾಚಿಕೆಯಿಲ್ಲದೇ ಪ್ರಸ್ತಾಪಿಸಿದೆ. ಕರ್ನಾಟಕದಲ್ಲಿ 1 ಲಕ್ಷ 5 ಸಾವಿರ ಹುದ್ದೆಗಳು ಖಾಲಿ ಇದ್ದು, ಹಂತ ಹಂತವಾಗಿ ತುಂಬಿ ದಕ್ಷತೆಯಿಂದ ಜನಸಾಮಾನ್ಯರಿಗೆ ಸೇವೆ ಒದಗಿಸುವ ಬದಲು, ಶೇ 5 ರಿಂದ ಆರಂಭಿಸಿ ಶೇ 35 ರವರೆಗೂ ಹುದ್ದೆ ಕಡಿತ ಗೊಳಿಸುವ ಬಗೆಯನ್ನು ಸರ್ಕಾರ ರೂಪಿಸಿದೆ. ಹೀಗಾಗಿ ಅನೇಕ ಇಲಾಖೆಗಳೆ ಎತ್ತಂಗಡಿಯಾಗಲಿವೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗದ ಭರವಸೆ ನೀಡಿದ್ದ ಪ್ರಧಾನಿ ಕೈಕೊಟ್ಟಿರುವುದಲ್ಲದೇ, ದುಡಿಯುವ ಕೈಗಳನ್ನೇ ಮುರಿಯುತ್ತಿರುವ ಪ್ರಧಾನಿ ವಾಜಪೇಯಿಯವರ ಜತೆ ಇಂದಿನ ಕೃಷ್ಣರವರೂ ಸಹ ಕೈಜೋಡಿಸುತ್ತಿದ್ದಾರೆ.

ನಕಲಿ ಛಾಪಾಕಾಗದಗಳ ವಂಚನೆ ಜಾಲ

ನಕಲಿ ಮುಂದ್ರಾಂಕಗಳು, ಹಾಗೂ ಛಾಪಾ ಕಾಗದಗಳ ಭಾರೀ ಅವ್ಯವಹಾರ ಗಳ ವಂಚನಾ ಜಾಲವೊಂದು ಪತ್ತೇ ಆಗಿದೆ. ಈಗ ಬೇಧಿಸಿದಂತೆ ದೊರೆತ ಕಾಗದಗಳು 10 ಕೋಟಿ ಮೌಲ್ಯಗಳದ್ದು. ಸಿಕ್ಕ ನಗದು ಹಣ 35.30 ಲಕ್ಷ ರೂಪಾಯಿಗಳು. ಮಾರುತ್ತಿದ್ದದ್ದು ಬೆಂಗಳೂರಿನಿಂದ ಬೆಳಗಾಂವರೆಗೆ. ನಕಲಿ ಪತ್ರಗಳು ಸರಬರಾಜು ಆಗಿದ್ದು ಬಾಂಬೆಯಿಂದ. ಈ ವ್ಯವಹಾರ ನಿನ್ನೆ ಮೊನ್ನೆಯದಲ್ಲ ಹಲವಾರು ವರ್ಷಗಳಿಂದ ಈ ದಂಧೆ ನಡೆದೇ ಇದೆ. ಅನೇಕ ಬ್ಯಾಂಕ್‌ಗಳು, ಸಂಸ್ಥೆಗಳು, ಗೃಹ ನಿರ್ಮಾಣ ಮಂಡಳಿ ಕಛೇರಿಗಳು ಹೀಗೆ ಈ ನಕಲಿ ಪತ್ರಗಳನ್ನೇ ಖರೀದಿಸಿದ್ದಾರೆ, ಬಳಸಿದ್ದಾರೆ. ಇಷ್ಟು ವರ್ಷಗಳಿಂದ ನಡೆದ ಈ ಮೋಸವನ್ನು ಗುರುತಿಸದೇ ಹೋಗಿದ್ದು ಸೋಜಿಗ. ಹಿಂದೆ ಕೊಡಗಿನ ವಕೀಲರ ಸಹಕಾರ ಸಂಘದಲ್ಲಿ ನಕಲಿ ಸ್ಟಾಂಪ್ ಪತ್ರಗಳು ಮಾರಾಟ ಆದ ಬಗ್ಗೆ ವರದಿಯಿತ್ತು. ಆಗಲೇ ಸರ್ಕಾರ ಎಚ್ಚೆತ್ತುಕೊಳ್ಳಬೇಕಿತ್ತು. ಈಗಲಾದರೂ ಈ ಜಾಲವನ್ನು ಭೇಧಿಸಿ, ಕೈವಾಡ ಇರುವವರನ್ನೆಲ್ಲಾ ಮಟ್ಟಹಾಕಬೇಕು. ತಾತ್ಕಾಲಿಕ ಉಪಶಮನವನ್ನು ನಿಲ್ಲಿಸಬೇಕು.



ಅಂಧ್ರ ಪೋಲಿಸ್ ದೌರ್ಜನ್ಯದ ವಿರುದ್ದ ಬೆಂಗಳೂರಿನಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಕಾರ್ಯಕರ್ತರು ಆಂಧ್ರ ಮು.ಮಂತ್ರಿ ಚಂದ್ರಬಾಬು ನಾಯ್ಡು ಪ್ರತಿಕೃತಿ ದಹಿಸುತ್ತಿರುವುದು.

ದೂರದರ್ಶನ ಚಾನಲ್ - ಕೈರಳಿ

ಪುಟ 2 ರಿಂದ

ಆರಂಭಿಸಲಾಗಿರುವ 'ಕೈರಾಲ್' ಚಾನಲ್ ಯಾವುದೇ ಮುಚ್ಚುಮರೆಯಿಲ್ಲದೆ ಆರಂಭಿಸಲಾಗಿದೆ. ಈ ಚಾನಲ್ ಮಲೆಯಾಳಂ ಕಮ್ಯುನಿಕೇಷನಲ್ ಎಂಬ ನೊಂದಾಯಿತ ಕಂಪನಿ ಮೂಲಕ ಜನರಿಂದ ಸಂಗ್ರಹಿಸಲಾದ ಶೇರು ಹಣದ ವಹಿವಾಟನ್ನು ಕಾನೂನು ರೀತಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ ಮೂಲಕ ನಡೆಸಲಾಗಿದೆ.

ಟಿ.ವಿ. ಚಾನಲ್ ರಂಗದಲ್ಲಿ ವಿವಿಧ ಅನುಭವವಿರುವ ನೂರಕ್ಕೂ ಹೆಚ್ಚು ಜನರನ್ನು ಒಗ್ಗೂಡಿಸಿ ಚರ್ಚಿಸಿ, ವಿಷಯ ವಿನಿಮಯ ಮಾಡಿ, ಪೂರ್ವ [illegible] ಚಾನಲ್‌ನಲ್ಲಿ ಕಾರ್ಯಕ್ರಮಗಳು ಮೂಡಿ ಬರುತ್ತವೆ. ಪ್ಲ್ಯಾಶ್ ನ್ಯೂಸ್ ಬಿಟ್ಟು ಪ್ರತಿದಿನ ಮೂರು ಬಾರಿ ವಾರ್ತೆಗಳು ಪ್ರಸಾರವಾಗಲಿವೆ.

ಜನರಿಂದ ಸಂಗ್ರಹಿಸಿದ ಹಣದಿಂದ ಆರಂಭವಾದ 'ಕೈರಳಿ' ಚಾನಲ್ ಒಂದು ಜಾತ್ಯಾತೀತ, ಪ್ರಜಾಪ್ರಭುತ್ವವಾದದ ಆಧಾರದಲ್ಲೇ ಜನರ ಮಾಧ್ಯಮವಾಗಿ ಕೆಲಸ ನಿರ್ವಹಿಸಲಿದೆ. ವಿಶ್ವದಲ್ಲೇ ಮೊಟ್ಟ ಮೊದಲಾಗಿ ಸಾಮಾನ್ಯ ಜನತೆಯಿಂದ ಹಣ ಸಂಗ್ರಹಿಸಿ, ಜನ ಸಾಮಾನ್ಯರ ಭಾಗವಹಿಸಿಕೆಯಿಂದ ಆರಂಭವಾದ ಈ ದೃಶ್ಯ ಮಾಧ್ಯಮ 'ಕೈರಳಿ' ಒಂದು ದಾಖಲೆಯಾಗಿದೆ.

ಅಕ್ಟೋಬರ್ 16, ವಿನಾಶಕಾರಿ ನೀತಿಗಳೆದುರು ಜಿಲ್ಲಾ ಮಟ್ಟದ ಪಿಕೆಟಿಂಗ್

ಕರ್ನಾಟಕದಲ್ಲಿ ಮುಚ್ಚಿರುವ ಸಣ್ಣ ಕೈಗಾರಿಕೆಗಳು ಸುಮಾರು 75 ಸಾವಿರ. ಇದರಿಂದಾಗಿ ಕೆಲಸ ಕಳೆದು ಕೊಂಡವರು 4 ಲಕ್ಷದ 20 ಸಾವಿರ ಕ್ಕೂ ಅಧಿಕ ಎಂಬುದು ಸರ್ಕಾರ ಒಪ್ಪಿಕೊಂಡಿರುವ ಸಂಗತಿ. ಕಾರ್ಖಾನೆಗಳು ಮುಚ್ಚುವ, ಕಾರ್ಮಿಕರು ಬೀದಿಪಾಲಾಗುವ ಪ್ರಕ್ರಿಯೆ ನಿಲ್ಲದಾಗಿದೆ. ಜೊತೆಗೆ ಕೃಷಿ ರಂಗವು ದಿವಾಳಿಯಾಗಿ ಭತ್ತ, ಕಬ್ಬು, ತೊಗರಿ, ಎಣ್ಣೆಕಾಳು, ಕಾಫಿ, ಟೀ, ಅಡಿಕೆ, ತೆಂಗು, ರೇಷ್ಮೆ ಹೈನುಗಾರಿಕೆಗಳಲ್ಲಿ ತೊಡಗಿರುವ ರೈತರು ಕಂಗಾಲಾಗಿದ್ದಾರೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರದ ಆಮದು ನೀತಿ (ಎಕ್ಸಿಂ ಪಾಲಿಸಿ) ಜೊತೆಗೆ ಜನಸಾಮಾನ್ಯರು ಬಳಸುವ ಆಹಾರ ವಸ್ತುಗಳ ಬೆಲೆಗಳು ಹೆಚ್ಚಿ, ವಿದ್ಯುತ್, ನೀರು, ಶಿಕ್ಷಣ, ಆರೋಗ್ಯದ ಸೇವೆಗಳು ದುಬಾರಿಯಾಗಿ, ಇದ್ದ ಪೆಡಿತರ ವ್ಯವಸ್ಥೆಯನ್ನು ನಾಶಪಡಿಸುತ್ತಿರುವ ದುರಂತದ ಚಿತ್ರಣ ಇಂದಿನದು.

ಎಲ್ಲಾ ದಿಕ್ಕುಗಳಿಂದಲೂ ನಡೆಯುತ್ತಿರುವ ಈ ದಾಳಿಯ ವಿರುದ್ಧ ಜನರನ್ನು ಜಾಗೃತಗೊಳಿಸಿ ಪ್ರತಿಭಟನೆಗೆ ಅಣಿ ನೆರೆಸಲು ಸಿಪಿಐ(ಎಂ)ನ ರಾಜ್ಯ ಸಮಿತಿಯು ನಿರ್ಧರಿಸಿದೆ. ಮೊದಲ ಹಂತವಾಗಿ ತಾಲ್ಲೂಕುಗಳಲ್ಲಿ ವಿವಿಧ ಜನ ವಿಭಾಗಗಳ ಸಮಾವೇಶಗಳು, ಪ್ರಚಾರ ಜಾಥಾ- ಸಭೆಗಳು, ಕೊನೆಯದಾಗಿ ಅಕ್ಟೋಬರ್-16 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ, ಸಭೆ ಹಾಗೂ ಕೇಂದ್ರ ಸರ್ಕಾರದ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ, ಪಿಕೆಟಿಂಗ್ ನಡೆಸಲಾಗುವುದು.

ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳ ಸಮಾವೇಶಗಳು ಅತ್ಯಂತ ಯಶಸ್ವಿಯಾಗಿ ನಡೆದಿವೆ. ಈ ಸಮಾವೇಶ ಹಾಗೂ ಪ್ರಚಾರಾಂದೋಲನದಲ್ಲಿ ಜನತೆಯು ಅಪೂರ್ವವಾಗಿ ಸ್ಪಂಧಿಸಿದೆ. ಈ ಹಿಂದೆ ಬಿಜೆಪಿಯನ್ನು ಬೆಂಬಲಿಸಿದ, ಕೃಷ್ಣ ಸರ್ಕಾರದ ಬಗ್ಗೆ ಆಸೆ ಇರಿಸಿಕೊಂಡ ಜನರೂ ಸಹ ನೀತಿಯನ್ನು ಅರಿಯತೊಡಗಿದ್ದಾರೆ. ಅಕ್ಟೋಬರ್ ರ‍್ಯಾಲಿಯಲ್ಲಿ ಸಾವಿರ ಸಾವಿರ ಜನ ತಮ್ಮ ಪ್ರತಿಭಟನೆಯ ಧ್ವನಿಯನ್ನು ಮೊಳಗಿಸಲಿದ್ದಾರೆ.

ಆನೇಕಲ್‌ನಲ್ಲಿ ಸಿಪಿಐ(ಎಂ) ನ ಸಂಘಟನಾ ಸಮಾವೇಶದ ಚಿತ್ರ



ಕೋಲಾರದಲ್ಲಿ ರೇಷ್ಮೆ ಬೆಳೆಗಾರರ ದುಸ್ಥಿತಿ

ಜಿ.ಸಿ.ಬಯ್ಯಾರೆಡ್ಡಿ

ಅಂದು 30,000 ಕಾರ್ಮಿಕರೊಂದಿಗೆ ಚಿನ್ನವನ್ನು ಉತ್ಪಾದಿಸುತ್ತಾ ವಿಶ್ವಖ್ಯಾತಿ ಪಡೆದು ಮಿಂಚುತ್ತಿದ್ದ ಶತಮಾನಕ್ಕೂ ಮೀರಿದ ಭವ್ಯ ಇತಿಹಾಸವುಳ್ಳ ಕೋಲಾರ ಚಿನ್ನದ ಗಣಿ, ಇಂದು ಕೇವಲ 3,000 ಕಾರ್ಮಿಕರೊಂದಿಗೆ ರೋಗ ಗ್ರಸ್ತವಾಗಿ ಮುಚ್ಚಲು ಅನುಮತಿಗಾಗಿ ಎದುರು ನೋಡುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಕಾರ್ಮಿಕರು ಬೀದಿ ಪಾಲಾಗಲಿದ್ದಾರೆ. ಜಾಗತೀಕರಣ, ಖಾಸಗೀಕರಣದ ಭೂತಗಳ ಅಪಾಯವಿದ್ದರೂ ಸದ್ಯದಲ್ಲಿ ಉತ್ತಮವಾಗಿ ಸುಮಾರು 4000 ಕಾರ್ಮಿಕರೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಬಿ.ಇ.ಎಂ.ಎಲ್. ಕಾರ್ಖಾನೆಯನ್ನು ಹೊರತುಪಡಿಸಿದರೆ ಕನಿಷ್ಠ ಒಂದು ನೂರು ಕಾರ್ಮಿಕರಿಗೆ ಕೆಲಸ ನೀಡಬಹುದಾದ ಕಾರ್ಖಾನೆ ಜಿಲ್ಲೆಯಲ್ಲಿ ಬೇರೊಂದಿಲ್ಲ. ಇರುವ ಸಣ್ಣ ಪುಟ್ಟ ಕಾರ್ಖಾನೆಗಳು ಸಹ ಜಾಗತೀಕರಣದ ನೀತಿಗಳ ಪರಿಣಾಮವಾಗಿ ಉಸಿರು ಕಟ್ಟಿ ಸಾಯಲು ಸಿದ್ಧವಾಗುತ್ತಿವೆ.

ಇಂತಹ ಸ್ಥಿತಿಯಲ್ಲಿ ಜಿಲ್ಲೆಯ ಶೇ 80 ರಷ್ಟು ಜನ ಕೃಷಿ ಆಧಾರಿತ ಜೀವನವನ್ನೆ ನಡೆಸುವುದು ಅನಿವಾರ್ಯ.

ಒಟ್ಟು ವಿಸ್ತೀರ್ಣ 7.79.467 ಹೆಕ್ಟೇರು ಇದೆ. ಕಮ್ಯುನಿಸ್ಟ್ ಪಕ್ಷ ಮತ್ತು ಪ್ರಾಂತ ರೈತ ಸಂಘದ ನಾಯಕತ್ವದಲ್ಲಿ ನಡೆದ ಸಮರಧೀರ ಚಳುವಳಿಗಳ ಫಲವಾಗಿ ಸಾವಿರಾರು ಬಡ ಕುಟುಂಬಗಳಿಗೆ ಭೂಮಿ ಸಿಕ್ಕದೆ ಆದರೂ ಶೇ 46 ರಷ್ಟು ಭೂ ಹೀನರು. ಕೂಲಿಕಾರರಿದ್ದಾರೆ. ಆದರೆ ಕೃಷಿಗೆ ಅತಿ ಅಗತ್ಯ ವಿರುವ ನೀರಾವರಿ ಸೌಲಭ್ಯವಿಲ್ಲ. ಯಾವುದೇ ನದಿ ನಾಲೆಯಂತಹ ಖಾಯಂ ನೀರಾವರಿ ಯೋಜನೆಯಿಲ್ಲದೆ ಜಿಲ್ಲೆಯ ಕೃಷಿಕರು ಸಂಪೂರ್ಣವಾಗಿ ಮಳೆಯನ್ನೇ ಆಧಾರಿಸಿ ಕೃಷಿಯಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿಯೇ ಅತಿ ಹೆಚ್ಚು 17081 ಕೆರೆಗಳಿವೆ. ಅವುಗಳಲ್ಲಿ ಬಹುತೇಕ ಹೂಳು ತುಂಬಿ ಮುಚ್ಚಿವೆ. ಹೂಳು ತೆಗೆಯಲು ಸರ್ಕಾರಗಳು ಹಲವು ಕೋಟಿ ರೂಗಳ ಯೋಜನೆಗಳನ್ನು ಜಾರಿಮಾಡಿವೆ ಆದರೆ ಕೋಟಿಗಳು ಖಾಲಿಯಾಗಿವೆ. ಕೆರೆಗಳಲ್ಲಿ ಮರಳು ಮಾತ್ರ ಖಾಲಿಯಾಗಿಲ್ಲ. ಇನ್ನು ಕೋಟ್ಯಾಂತರ ರೂಗಳ ವೆಚ್ಚದಲ್ಲಿ ರೈತರು ತೆಗೆಸಿದ ಸಾವಿರಾರು ಭಾವಿಗಳುಲ್ಲಿ ಅಂತರಜಲ ತೀರ ಕೆಳಗೆ ಇಳಿದು ಕಳೆದ 2 ದಶಕಗಳಲ್ಲಿ ಮಾಯಾವಾಗಿವೆ.

ಜಿಲ್ಲೆಯಲ್ಲಿ ಅಂತರಜಲ ಮಟ್ಟ ವರ್ಷದಿಂದ ವರ್ಷಕ್ಕೆ ಪಾತಳಕ್ಕೆ ಇಳಿಯುತ್ತಿದೆ. ಹೀಗೆ ಮುಂದುವರಿದರೆ ಒಂದೆರಡು ದಶಕಗಳಲ್ಲಿ ಬರಡಾಗುತ್ತದೆಯೆಂದು ಉಪಗ್ರಹ ಸಮೀಕ್ಷೆಗಳು ಹೇಳುತ್ತಿವೆ ಅಂತರಜಲ ಮಟ್ಟವನ್ನು ಉತ್ತಮ ಪಡಿಸಲು 500 ಕೋಟಿ ರೂಗಳ ಯೋಜನೆಯನ್ನು ಸಿದ್ಧ ಪಡಿಸುತ್ತಿರುವುದಾಗಿ ಜಿಲ್ಲೆಯ ಉಸ್ತುವಾರಿ ಸಚಿವರು ಹೇಳಿಕೊಂಡು ತಿರುಗುತ್ತಿದ್ದಾರೆ.

ಇಂತಹ ಸ್ಥಿತಿಯಲ್ಲಿ ಜಿಲ್ಲೆಯ ಕೃಷಿಕರು ಒಂದೆರಡು ಎಕರೆ ಭೂಮಿಗೆ ನೀರನ್ನು ಹರಿಸಲು ಸರಾಸರಿ 450-500 ಅಡಿ ಕೊಳವೆಬಾವಿ, ಅದಕ್ಕೆ ವಿದ್ಯುತ್ ಸಂಪರ್ಕ ಇತ್ಯಾದಿಗಳಗೆಂದು ಕನಿಷ್ಠ 1-1.25 ಲಕ್ಷ ರೂ ಗಳನ್ನು ವೆಚ್ಚ ಮಾಡಿ ಕೃಷಿಯಲ್ಲಿ ತೊಡಗಿದ್ದಾರೆ. ಬಹು ಸಂಖ್ಯಾತರು ಈಗಲೂ ನೇರ ಮಳೆ ನೀರನ್ನೇ ಆಧಾರಿಸಿ ಒಣ ಬೇಸಾಯದಲ್ಲಿ ನಿರತರಾಗಿದ್ದಾರೆ.

ಹೀಗೆ ಲಕ್ಷಾಂತರ ರೂ ಖರ್ಚು ಮಾಡಿ ಮೇಲೆತ್ತಿದ ನೀರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಸ ಆರ್ಥಿಕ, ಕೃಷಿ ನೀತಿಗಳ ಪರಿಣಾಮವಾಗಿ ವಿಪರೀತ ದುಬಾರಿಯಾಗಿರುವ ಬೀಜ ರಸಗೊಬ್ಬರ, ಕೀಟ ನಾಶಕ, ವಿದ್ಯುತ್ ಇತ್ಯಾದಿ ಕೃಷಿ ಸಾಮಗ್ರಿಗಳನ್ನು ಉಪಯೋಗಿಸಿ ಬತ್ತ, ರಾಗಿ ಬೆಳೆದರೆ ಹಾಕಿದ ಬಂಡವಾಳ ಕೈಗೆ ಬರುವುದಿಲ್ಲವೆಂದು ಈರುಳ್ಳಿ ಟಮೋಟೋದಂತಹ ತರಕಾರಿಗಳನ್ನು ಬೆಳೆದು, ಬಂಡವಾಳಶಾಹಿ ಮಾರುಕಟ್ಟೆಗಳ ಅವಾಂತರಗಳಿಂದ ಬೆಲೆಗಳಲ್ಲಿ ಉಂಟಾಗುವ ವಿಪರೀತ ಏರು ಪೇರುಗಳಿಂದ ಕೈ ಸುಟ್ಟುಕೊಂಡು ಬಹುತೇಕ ಬೆಲೆಗಳಲ್ಲಿ ಸ್ಥಿರ ವಿರುವ ರೇಷ್ಮೆ ಮತ್ತು ಹಾಲು ಉತ್ಪಾದನೆಯಲ್ಲಿ ಜಿಲ್ಲೆಯ ರೈತರು ದೊಡ್ಡ ಪ್ರಮಾಣದಲ್ಲಿ ತೊಡಗಿದ್ದಾರೆ. ಕೇವಲ ಶ್ರೀಮಂತ ರೈತರಲ್ಲದೆ ಗ್ರಾಮೀಣ ಬಡವರು ಸಹ ಗಣನೀಯವಾಗಿ ರೇಷ್ಮೆ ಮತ್ತು ಹೈನುಗಾರಿಕೆಯಲ್ಲಿ ಪಾಲುಗೊಳ್ಳುತ್ತಿದ್ದಾರೆ.

ರಾಜ್ಯದ ಒಟ್ಟು ಉತ್ಪಾದನೆಯಾದ 9230 ಮೆಟ್ರಿಕ್‌ಟನ್ ರೇಷ್ಮೆಯಲ್ಲಿ ಶೇ 35 ರಷ್ಟು ಉತ್ಪಾದನೆ ಕೋಲಾರ ಜಿಲ್ಲೆಯ ಕೃಷಿಕರದ್ದು. ಮತ್ತು ಇದೇ ರೀತಿಯಲ್ಲಿ ರಾಜ್ಯದ ವಿವಿಧ ಹಾಲು ಒಕ್ಕೂಟಗಳಿಂದ ಪ್ರತಿ ದಿನ ಶೇಖರಣೆಯಾಗುತ್ತಿರುವ ಸುಮಾರು 20

ಪಾಲು 5 ಲಕ್ಷ ಲೀಟರ್ ಅಂದರೆ ಶೇ 25 ರಷ್ಟು. ಇದನ್ನು ಗಮನಿಸಿದರೆ ಜಿಲ್ಲೆಯ ಕೃಷಿಕರು ಎಷ್ಟು ವ್ಯಾಪಕವಾಗಿ ಈ ಎರಡು ಕ್ಷೇತ್ರಗಳಲ್ಲಿ ತೊಡಗಿದ್ದಾರೆಂಬ ಅರಿವಾಗುತ್ತದೆ. "ಸಿಲ್ಕ್ ಅಂಡ್ ಮಿಲ್ಕ್" ಕೋಲಾರ ಜಿಲ್ಲೆಯ ರೈತನಿಗೆ ವರದಾನವೆಂದು ಬಾವಿಸಿ ರೇಷ್ಮೆ ಹೈನುಗಾರಿಕೆಯಲ್ಲಿ ಹೆಚ್ಚು ಹೆಚ್ಚು ಪಾಲಗೊಳ್ಳುತ್ತಿದ್ದಾನೆ. ಈ ಪ್ರಕ್ರಿಯೆ ಇನ್ನಷ್ಟು ವ್ಯಾಪಕಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ ಇಡೀ ರೇಷ್ಮೆ ಮತ್ತು ಹೈನು ಗಾರಿಕೆಯನ್ನು ಸಂಪೂರ್ಣವಾಗಿ ನಾಶ ಮಾಡಿ ಲಕ್ಷಾಂತರ ಜನರನ್ನು ನಿರುದ್ಯೋಗ, ಹಸಿವಿನಿಂದ ಸಾಯುವಂತಹ ಸ್ಥಿತಿಯನ್ನು ಸರ್ಕಾರಗಳು, ತನ್ನ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ದೋರಣೆಗಳಿಂದ ನಿರ್ಮಾಣ ಮಾಡುತ್ತಿವೆ. 'ಪ್ರತಿ ವರ್ಷ ಕೋಟಿ ಉದ್ಯೋಗ, ಸ್ವದೇಶಿ 'ಸ್ವಾವಲಂಬನೆ' ಇತ್ಯಾದಿ ಘೋಷಣೆಗಳೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ನಾಯಕತ್ವದ ಎನ್.ಡಿ.ಎ. ಸರ್ಕಾರ ಈ ಧೋರಣೆಗಳನ್ನು ಇನ್ನಷ್ಟು ವೇಗವಾಗಿ ಜಾರಿಗೊಳಿಸುತ್ತಿದೆ.

ಈ ಜನ ವಿರೋಧಿ ನೀತಿಗಳನ್ನು ಜಾರಿಗೊಳಿಸುವ ವಿಚಾರದಲ್ಲಿ ದೇಶದ ಪ್ರಮುಖ ಭೂಮಾಲೀಕ ಬಂಡವಾಳ ಶಾಹಿ ಪಕ್ಷಗಳಾದ ಬಿ.ಜೆ.ಪಿ. ಕಾಂಗ್ರೆಸ್ ಜೆ.ಡಿ.(ಯು) ಒಂದಾಗಿವೆ. ಇದೇ ರೀತಿಯಲ್ಲಿ ಸಾಮಾನ್ಯ ರೈತ ಕೂಲಿಕಾರರು ಪಕ್ಷತೀತವಾಗಿ ಒಗ್ಗಟ್ಟಾಗಿ ಈ ದೋರಣೆಗಳನ್ನು ಹಿಮ್ಮೆಟ್ಟಿಸಬೇಕಾಗಿದೆ.

ರೇಷ್ಮೆ ಕೃಷಿ ಮತ್ತು ಉದ್ದಿಮೆ

ಜಗತ್ತಿನ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಚೀನಾ ದೇಶದ್ದು ಸಿಂಹಪಾಲು. 72,000 ಮೆಟ್ರಿಕ್ ಟನ್ ರೇಷ್ಮೆಯನ್ನು ಚೀನಾ ಉತ್ಪಾದಿಸುತ್ತಿದೆ. ಇದು ಜಗತ್ತಿನ ಒಟ್ಟು ಉತ್ಪಾದನೆಯಲ್ಲಿ ಶೇ 72 ರಷ್ಟು ಚೀನದ ನಂತರ ಭಾರತ ಶೇ 14 ರಷ್ಟು ಅಂದರೆ 14.000 ಮೆಟ್ರಿಕ್ ಟನ್‌ಗಿಂತ ಹೆಚ್ಚು ಕಚ್ಚಾ ರೇಷ್ಮೆಯನ್ನು ಉತ್ಪಾದಿಸುತ್ತಾ ಜಗತ್ತಿನಲ್ಲಿ ಎರಡನೇಯ ಸ್ಥಾನವನ್ನು ಗಳಿಸಿದೆ.

ನಮ್ಮ ದೇಶದಲ್ಲಿ ರೇಷ್ಮೆ ಕೃಷಿ ಮತ್ತು ಉದ್ದಿಮೆ



ರೇಷ್ಮೆಯನ್ನೇ ಅವಲಂಬಿಸಿರುವ ಸಾವಿರಾರು ಕುಟುಂಬಗಳು

ಪ್ರಬಲ ಅಂತರಿಕ ಬೇಡಿಕೆಯೊಂದಿಗೆ ವೇಗವಾಗಿ ವಿಸ್ತರಣೆಯಾಗುತ್ತಿದೆ. ಈಗ ದೇಶದ ಸುಮಾರು 5 ಲಕ್ಷ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಉತ್ಪಾದಿಸುವ ರೇಷ್ಮೆ ಗೂಡನ್ನು ಆಧಾರಿಸಿದ ಈ ಉದ್ದಿಮೆ, ಸುಮಾರು 50 ಲಕ್ಷ ಜನರಿಗೆ ಉದ್ಯೋಗವನ್ನು ಸೃಷ್ಟಿಸಿದೆ. ನಮ್ಮ ರಾಜ್ಯದ 3.5

ರೀಲರ್ಸ್ ಸೇರಿದಂತೆ ಸುಮಾರು 35 ಲಕ್ಷ ಜನ ವಿವಿಧ ಹಂತಗಳಲ್ಲಿ ದುಡಿಯುತ್ತಿದ್ದಾರೆ. 1997-98 ರಲ್ಲಿ ನಮ್ಮ ದೇಶದ ಅಂತರಿಕ ಬೇಡಿಕೆ 20,000 ಮೆಟ್ರಿಕ್ ಟನ್‌ನಷ್ಟು ಆಗಿದ್ದರೆ, ನಮ್ಮ ಕಚ್ಚಾ ರೇಷ್ಮೆ ಉತ್ಪಾದನೆ 14,000 ಮೆಟ್ರಿಕ್‌ಟನ್. ಇದರಲ್ಲಿ ನಮ್ಮ ರಾಜ್ಯದ ಪಾಲು 9.230 ಮೆಟ್ರಿಕ್ ಟನ್ ಇದು ಒಟ್ಟು ಉತ್ಪಾದನೆಯಲ್ಲಿ ಶೇ 65 ರಷ್ಟು.

ಕೋಲಾರ ಜಿಲ್ಲೆಯ ಸುಮಾರು 31.000 ಕುಟುಂಬ 85-90 ಸಾವಿರ ಎಕರೆಗಳಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿ ಸುಮಾರು 3500 ಮೆಟ್ರಿಕ್ ಟನ್‌ನಷ್ಟು ರೇಷ್ಮೆಯನ್ನು ಉತ್ಪಾದನೆ ಮಾಡುತ್ತಿದ್ದಾರೆ. ಇದು ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಸುಮಾರು ಶೇ 35 ರಷ್ಟು. ರೇಷ್ಮೆ ಕೃಷಿ ಮತ್ತು ಉದ್ದಿಮೆ ಪ್ರಬಲ ಉದ್ಯೋಗ ಸೃಷ್ಟಿಸುವ ಕ್ಷೇತ್ರವಾಗಿದ್ದು ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ಸುಮಾರು 4-5 ಲಕ್ಷ ದಷ್ಟು ರೈತ ಕೂಲಿಕಾರರು, ವ್ಯಾಪಾರಸ್ಥರು, ರೀಲರಗಳು, ಕಾರ್ಮಿಕರಿಗೆ ಜೀವನಾಧಾರವಾಗಿದೆ. ರೇಷ್ಮೆ ಕೃಷಿ ಮತ್ತು ಉದ್ದಿಮೆಗೆ ಸಂಬಂಧಿಸಿ ನೂರಾರು ನೌಕರರು, ಅಧಿಕಾರಿಗಳನ್ನು ಒಳಗೊಂಡ ರೇಷ್ಮೆ ಇಲಾಖೆ ಕೆಲಸ ನಿರ್ವಹಿಸುತ್ತಿದೆ. ಕೃಷಿಗೆ ಪೂರಕವಾಗಿ ರೇಷ್ಮೆ ಕೃಷಿ ಕಾಲೇಜ್ ತರಬೇತಿ ಕೇಂದ್ರಗಳು ನಡೆಯುತ್ತಿವೆ. ಹೀಗೆ ಲಕ್ಷಾಂತರ ಜನರಿಗೆ ಉದ್ಯೋಗವನ್ನು ನೀಡುತ್ತಾ, ನೂರಾರು ಕೋಟಿರೂಗಳ ವಿದೇಶಿ ವಿನಿಮಯ ಮತ್ತು ಮಾರಾಟ ಶುಲ್ಕವನ್ನು ಸರ್ಕಾರದ ಖಜಾನೆಗೆ ತುಂಬುತ್ತಿದೆ. ಸರ್ಕಾರಕ್ಕೆ ಬರುವ ಆದಾಯ ನಿರಂತರವಾಗಿ ಹೆಚ್ಚಳವಾಗುತ್ತಿದೆ. 1997-98ರ ಸಾಲಿನಲ್ಲಿ ನಮ್ಮ ದೇಶದ ರೇಷ್ಮೆ ಉದ್ದಿಮೆ 700 ಕೋಟಿ ರೂಗಳ ಮೌಲ್ಯದ ರಫ್ತನ್ನು ಮಾಡಿದೆ. ಕೋಲಾರ ಜಿಲ್ಲೆಯಿಂದ 1994-95 ರಲ್ಲಿ 3.19 ಕೋಟಿ ರೂಗಳನ್ನು ಮಾರಾಟ ಶುಲ್ಕವಾಗಿ ರಾಜ್ಯ ಸರ್ಕಾರಕ್ಕೆ ಸಂದಾಯವಾಗಿದ್ದರೆ, 1998-99 ರಲ್ಲಿ ಕೇವಲ ಶಿಡ್ಲಘಟ್ಟದ ಒಂದೇ ಮಾರುಕಟ್ಟೆಯಿಂದ 3 ಕೋಟಿ ರೂ ಮಾರಾಟ ಶುಲ್ಕ ಸಂದಾಯವಾಗಿದೆ.

ಹೀಗೆ ಎಲ್ಲಾ ರೀತಿಯಲ್ಲಿ ಲಾಭದಾಯಕವಾಗಿರುವ ಮತ್ತು ರೈತ ಕೂಲಿಕಾರರಿಗೆ ಆಶಾದಾಯಕವಾಗಿರುವ ಈ ಕೃಷಿಯನ್ನು ಮತ್ತಷ್ಟು ವಿಸ್ತರಣೆಗೊಳಿಸಿ ಮಾರುಕಟ್ಟೆಗೆ ಬೇಕಿರುವ ಪ್ರಮಾಣ ಮತ್ತು ಶ್ರೇಷ್ಠ ಗುಣ ಮಟ್ಟದ ರೇಷ್ಮೆಯನ್ನು ಉತ್ಪಾದಿಸಲು ಅಗತ್ಯವಿರುವ ವಿಶೇಷ ಹಿಪ್ಪು ನೇರಳೆ ತಳಿಗಳು, ವೈಜ್ಞಾನಿಕ ತೋಟದ ನಿರ್ವಹಣೆ, ಉತ್ತಮ ಗುಣ ಮಟ್ಟದ ಮೊಟ್ಟೆ, ಹನಿ ನೀರಾವರಿ, ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆ ಸೌಲಭ್ಯ. ಹುಳು ಸಾಕಾಣಿಕೆಯಲ್ಲಿನ ಕೋಟ್ ರೇರಿಂಗ್ ನಂತಹ ಹೊಸ ಪದ್ಧತಿ ಮತ್ತಿತರೆ ತಾಂತ್ರಿಕತೆಯ ಹಲವಾರು ಯೋಜನೆಗಳನ್ನು ರೂಪಿಸಬೇಕಾಗಿತ್ತು. ಈ ದಿಸೆಯಲ್ಲಿ ಸರ್ಕಾರಗಳು ಪ್ರಯತ್ನಗಳನ್ನು ನಡೆಸಿರುವುದು ನಿಜ ಮತ್ತು ವಿಶ್ವಬ್ಯಾಂಕ್‌ನ ನೆರವಿನಿಂದ ಸಾವಿರಾರು ಕೋಟಿಗಳು ಖರ್ಚು ಮಾಡಲಾಗಿದೆ.

ಈಗ ಸಾಧಿಸಿರುವ ಸಾಧನೆ ಮತ್ತು ತಿಳುವಳಿಕೆಯ ಮೇಲೆ ರೈತರು ಕೃಷಿಯಲ್ಲಿ ತೊಡಗುವಂತೆ ಮಾಡಲು ಸರ್ಕಾರಗಳ ಬೆಂಬಲ ಲಭ್ಯವಾಗಿದ್ದರೆ. ಹಾಲಿಯಿರುವ ವಿಸ್ತೀರ್ಣದಲ್ಲಿಯೇ ದೇಶಕ್ಕೆ ಅಗತ್ಯ ವಿದ್ದ 20,000 ಮೆಟ್ರಿಕ್ ಟನ್‌ಗೆ ಬೇಕಿರುವ ರೇಷ್ಮೆಗೂಡನ್ನು ರೈತರು ಬೆಳೆಯುತ್ತಿದ್ದರೂ ಮಾತ್ರವಲ್ಲ ಇನ್ನೂ ಉತ್ತಮಗುಣಮಟ್ಟದ ಹೆಚ್ಚಿನ ರೇಷ್ಮೆಯನ್ನು ಉತ್ಪಾದಿಸಲು ಸಾಧ್ಯವಾಗುವಂತೆ ಮತ್ತಷ್ಟು ರೈತರು ಕೃಷಿಯಲ್ಲಿ ತೊಡಗುತ್ತಿದ್ದರು.

ಆದರೆ, ನಮ್ಮನ್ನು ಆಳುವ ಸರ್ಕಾರಗಳು ಈ ಕುರಿತು ನಿರಂತರವಾಗಿ ನಿರ್ಲಕ್ಷ ಮಾಡುತ್ತಾ ನಮ್ಮ ದೇಶಕೆ ಕೊರತೆಯಿದ್ದ 5000-6000 ಮೆಟ್ರಿಕ್ ಟನ್ ಆಮದು ಮಾಡಿಕೊಳ್ಳುತ್ತಿತ್ತು. ಇದರ ಜೊತೆಗೆ ಹೇರಳವಾಗಿ ವಿದೇಶಗಳಿಂದ ಕಳ್ಳ ಸಾಗಾಣಿಕೆಯಲ್ಲಿ ಕಚ್ಚಾ ರೇಷ್ಮೆ ಬರುತ್ತಿದ್ದು ಸುಮಾರು 4000 ಕೋಟಿ ರೂಗಳ ಕಚ್ಚಾ ರೇಷ್ಮೆ ದೇಶಕ್ಕೆ ಬರುತ್ತಿ ಎಂದು ಒಂದು ಅಂದಾಜಿದೆ. ಸರ್ಕಾರದ ಈ ಅಸಮರ್ಥ ಕ್ರಮಗಳು ಒಂದು ರೀತಿಯಲ್ಲಿ ರೇಷ್ಮೆ ಕೃಷಿ ವಿಸ್ತರಣೆಯಾಗುವುದನ್ನು ತಡೆಹಿಡಿಯಿತು.

1998 ರಲ್ಲಿ ಬಿಜೆಪಿ ನಾಯಕತ್ವ ಕೇಂದ್ರ ಸರ್ಕಾರದಲ್ಲಿ ವಾಣಿಜ್ಯ ಸಚಿವರಾಗಿದ್ದ ಶ್ರೀಮಾನ್ ಹೆಗ್ಗಡೆಯವರು, ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡಲು ಭಾರತ ರೇಷ್ಮೆ ಉದ್ದಿಮೆ ಸಿದ್ಧಗೊಳಿಸುವ ಮತ್ತು ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸುವ ನೆಪದಲ್ಲಿ "ಮೌಲ್ಯ" ಆಧಾರಿತ ರಾಜಕೀಯವನ್ನು ಮಾಡಿ ಸಡಿಲಗೊಳಿಸಿದ ರೇಷ್ಮೆ ಆಮದು ನೀತಿಯೊಂದನ್ನು ಪ್ರಕಟಿಸಿದರು. ಇದರ ಪರಿಣಾಮವಾಗಿ ವಿದೇಶಗಳಿಂದ ಮುಖ್ಯವಾಗಿ ಚೀನಾ ಕೊರಿಯಾ, ಜಪಾನ್‌ಗಳಿಂದ ಉತ್ತಮ ಗುಣ ಮಟ್ಟದ, ತೀರ ಕಡಿಮೆ ದರದ ಅಂದರೆ ಕೆ.ಜಿ. 750-800 ರೂ ವಿನ ಕಚ್ಚಾ ರೇಷ್ಮೆ ಭಾರತಕ್ಕೆ ಹರಿದು ಬರಲು ಶುರುವಾಯಿತು. ಇದರಿಂದ ದೇಶೀಯ ರೇಷ್ಮೆ ಗೂಡಿನ ಬೆಲೆಗಳು ಬಿದ್ದು ಹೋದವು. ಸುಮಾರು 1600-1700 ರೂಯಿದ್ದ ಕೆ.ಜಿ. ಕಚ್ಚಾ ರೇಷ್ಮೆ 1000-1100ಕ್ಕೆ, ಗೂಡಿನ ದರ 160-170 ರಿಂದ 90- ರಿಂದ 100 ರೂಗಳಿಗೆ ಇಳಿಯಿತು. ಈ ನೀತಿಯ ವಿರುದ್ಧ ಉಗ್ರ ಪ್ರತಿಭಟನೆಗಳು ವ್ಯಕ್ತಗೊಂಡವು. ಕೋಲಾರ ಜಿಲ್ಲೆಯ ರೈತರು ಮತ್ತಿತರರು ಇದರ ಮುಂಚೂಣಿಯಲ್ಲಿಯಿದ್ದರು. ಮುಕ್ತ ನೀತಿಯ ಮಂತ್ರಿ ಹೆಗಡೆ ಮಹಾಶಾಯನ ಮನೆಗೆ ಕಲ್ಲಿನ ಅಭಿಷೇಕವು ನಡೆಯಿತು. ಈ ಪ್ರತಿರೋಧಗಳಿಂದ 1998 ರ ನೀತಿಯಲ್ಲಿ ಅಲ್ಪ ಸ್ವಲ್ಪ ತಿದ್ದುಪಡಿಗಳು ಆದವು. ಅದರೂ ವಿದೇಶಿ ರೇಷ್ಮೆ ಆಮದು ನಿಲ್ಲಲಿಲ್ಲ. ಈ ಹಿನ್ನಲೆಯಲ್ಲಿ ರೇಷ್ಮೆ ಕೃಷಿ ಮತ್ತು ಉದ್ದಿಮೆಯಲ್ಲಿ ತೊಡಗಿರುವರು ಅಂತಂಕದಲ್ಲಿ ಇರುವಾಗಲೇ 1999 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನಾಯಕತ್ವದ ಎನ್.ಡಿ.ಎ. ಸರ್ಕಾರ ಮತ್ತೆ ತನ್ನ ಆಮದು ರಫ್ತು ನೀತಿಗಳನ್ನು ಮತ್ತಷ್ಟು ಉದಾರೀಕರಣಗೊಳಿಸಿ ಈ ಏಪ್ರಿಲ್‌ನಲ್ಲಿ 714 ವಸ್ತುಗಳ ಮೇಲಿದ್ದ ಪ್ರಮಾಣಾತ್ಮಕ ನಿಬಂಧನೆಗಳನ್ನು ತೆಗೆದು ಹಾಕಿ ಯಾವುದೇ ನಿಬಂಧನೆ ವಿಲ್ಲದೆ ಆಮದು ರಫ್ತು ಮಾಡಬಹುದೆಂದು ಪ್ರಕಟಿಸಿದೆ. ಇದರಲ್ಲಿ ಕಚ್ಚಾ ರೇಷ್ಮೆಯು ಒಂದು. ಈ ಹೊಸ ಆಮದು ರಫ್ತು ನೀತಿಯು ರೇಷ್ಮೆ ಕೃಷಿ ಉದ್ದಿಮೆಯನ್ನು ತೀವ್ರತರ ಬಿಕ್ಕಟ್ಟಿಗೆ ಸಿಲುಕಿಸಿದೆ. ಈ ಉದಾರೀಕರಣದ ಆಮದು ರಫ್ತು ನೀತಿಗಳ ಮೂಲ 1994 ರಲ್ಲಿ ಕಾಂಗ್ರೆಸ್ ನಾಯಕತ್ವದ ಕೇಂದ್ರ ಸರ್ಕಾರ ಸಹಿ ಮಾಡಿದ 'ಗ್ಯಾಟ್ ಒಪ್ಪಂದ" ದಲ್ಲದೆ ಎಂಬುದನ್ನು ನಾವುಗಳು ಮರೆಯುವಂತಿಲ್ಲ. ಆದರೆ ಬಿ.ಜೆ.ಪಿ. 'ಗ್ಯಾಟ್ ಒಪ್ಪಂದದಲ್ಲಿ ನಿಗದಿಯಾಗಿದ್ದ ಸಮಯಕ್ಕಿಂತ ಮುಂಚಿತವಾಗಿಯೇ ಈ ಧೋರಣೆಗಳನ್ನು ಜಾರಿಗೆ ತರುತ್ತಾ ಅಮೇರಿಕದ ಪ್ರಭುಗಳನ್ನು ಮೆಚ್ಚಿಸಲು ಹೊರಟಿದ್ದಾರೆ.

ಈ ನೀತಿಗಳಿಂದ ಬರಲಿರುವ ದಿನಗಳಲ್ಲಿ ಗೂಡು ಮತ್ತು ಕಚ್ಚಾ ರೇಷ್ಮೆ ಬೆಲೆಗಳು ಇನ್ನಷ್ಟು ಬಿದ್ದು ಹೋಗಲಿವೆ.

ಕೋಲಾರದಂತಹ ಅಂತರ ಜಲವನ್ನೇ ನಂಬಿ ಕೃಷಿ ಮಾಡುತ್ತಿರವರಿಗೆ ಉತ್ಪಾದನೆ ವೆಚ್ಚವೇ ಸುಮಾರು ಕೆ.ಜಿ.ಗೆ 100 ರೂ ಆಗುತ್ತೆ. ಇಂತಹ ಪರಿಸ್ಥಿತಿಯಲ್ಲಿ ವಿದೇಶಿ ರೇಷ್ಮೆಯ ಜೊತೆ ಸ್ಪರ್ಧೆ ನಿಡೆಸಲು ಸಾದ್ಯವಾಗದೇ ದೇಶಿಯ ಕೃಷಿ ಮತ್ತು ಉದ್ದಿಮೆ ನಾಶವಾಗುತ್ತಿದೆ. ಏಪ್ರಿಲ್‌ನಲ್ಲಿ ಈ ಹೊಸ ನೀತಿ ಪ್ರಕಟಗೊಂಡರೂ ಇಲ್ಲಿನ ರೇಷ್ಮೆಯ ಧರಗಳಲ್ಲಿ ಹೆಚ್ಚಿನ ಏರು ಪೇರು ಆಗಿಲ್ಲವಲ್ಲ ಎಂದು ರೈತರು ಕೇಳಬಹುದು. ನಿಜ ಈಗ ಮಾರುಕಟ್ಟೆಯಲ್ಲಿ ಕೆ.ಜಿ. ಗೂಡಿಗೆ 140-150 ರೂ ಬೆಲೆ ಸಿಗುತ್ತಿದೆ. ಅದಕ್ಕೆ ಕಾರಣಗಳಿವೆ.

1. ಈಗ ಒಟ್ಟಾರೆ ಮಾರುಕಟ್ಟೆಗೆ ಬರುತ್ತಿರುವ ಸರಾಸರಿ ರೇಷ್ಮೆ ಗೂಡು ಶೇ 40 ಕ್ಕಿಂತ ಕಡಿಮೆ ಸಾಮಾನ್ಯವಾಗಿ ಪ್ರತಿವರ್ಷ ಫೆಬ್ರವರಿ-ಆಗಸ್ಟ್ ವರೆಗೆ ಅತಿ ಉಷ್ಣಾಂಶ, ನೀರು ವಿದ್ಯುತ್ ಅಭಾವ ಇತ್ಯದಿ ಸಮಸ್ಯೆಗಳಿಂದ ಉತ್ಪಾದನೆ ಕಡಿಮೆ ಇರುತ್ತೆ. ಇತ್ತೀಚಿನ ದಿನಗಳಲ್ಲಿ ಈ ಸಮಸ್ಯೆಗಳ ತೀವ್ರವಾಗಿವೆ.

2. ರೈತರನ್ನು ಒಮ್ಮೆಲೆ ಎದುರು ಹಾಕಿಕೊಳ್ಳಲು ಸಿದ್ಧವಿಲ್ಲದ ಕೇಂದ್ರ ಸರ್ಕಾರ, ತಾತ್ಕಾಲಿಕವಾಗಿ ಆಮದಿನ ಮೇಲೆ ಸುಂಕವಿಧಿಸುತ್ತಿದೆ. ಇದರಿಂದ ಆಮದಾಗುವ ರೇಷ್ಮೆಯ ಬೆಲೆಯು ಏರುತ್ತದೆ.


ಈ ಹಿನ್ನೆಲೆಯಲ್ಲಿ ಈ ಜನ ವಿರೋಧಿ ಆಮದು ರಫ್ತು ನೀತಿಗಳನ್ನು ಹಿಮ್ಮೆಟ್ಟಿಸಲು ಪ್ರಬಲವಾದ

ಹೈದರಾಬಾದ್‌ನಲ್ಲಿ ರಕ್ತದೋಕುಳಿ

ವಿದ್ಯುತ್ ದರ ಏರಿಕೆ ವಿರುದ್ಧ ಚಳುವಳಿ

ಆಗಸ್ಟ್ 28, ಹೈದರಾಬಾದ್‌ನಲ್ಲಿ ಜನಸಾಗರ. ಆಂಧ್ರ ಪ್ರದೇಶದ ಮೂಲೆಮೂಲೆಗಳಿಂದ ಬಂದ ಲಕ್ಷಗಟ್ಟಲೇ ಜನ ಆಂಧ್ರಪ್ರದೇಶದ ವಿಧಾನಸಭೆಯ ಕಡೆ ನಡೆಯುತ್ತಿದ್ದಾಗ ಪೋಲೀಸರು ಒಂದು ಭದ್ರಕೋಟೆಯನ್ನು ನಿರ್ಮಿಸಿ ತಡೆಯಲೆತ್ನಿಸಿದರು. ಜನರು ಈ ತಡೆಗಟ್ಟೆಗಳನ್ನು ಮುರಿದು ವಿಧಾನಸಭೆಯ ಕಡೆಗೆ ನುಗ್ಗಲೆತ್ನಿಸಿದರು. ಇದಕ್ಕಾಗಿಯೇ ಕಾಯುತ್ತಿದ್ದಂತಿದ್ದ ಪೋಲೀಸರು ಗುಂಡಿನ ಸುರಿಮಳೆಯನ್ನೇ ಕರೆದರು. ಶಾಂತಿಯುತವಾಗಿ ಸಾಗುತ್ತಿದ್ದ ಮೆರವಣಿಗೆ ಚಿಲ್ಲಾಪಿಲ್ಲಿ. ನಾಲ್ಕು ಜನರ ಹತ್ಯೆ. ಇದರಿಂದ ಸಿಟ್ಟಿಗೆದ್ದ ಜನತೆ ಬೀದಿಕಾಳಗಕ್ಕಿಳಿದರು. ಸುತ್ತಮುತ್ತಲಿನ ಪ್ರದೇಶವೆಲ್ಲಾ ರಣರಂಗವಾಯಿತು. ಪೋಲೀಸರು ಮೊದಲು ಗುಂಡಿನ ಸುರಿಮಳೆ ಕರೆದು ನಂತರ ಅಶ್ರುವಾಯು, ಲಾಠಿ ಚಾರ್ಜ್ ಮಾಡಿದರು. ಮಹಿಳೆಯರು, ವೃದ್ಧರು, ನಾಯಕರುಗಳೆಂಬುವುದನ್ನು





ಯಾವುದನ್ನೂ ಪರಿಗಣಿಸದೆ ದನಗಳನ್ನು ಚಚ್ಚಿದಂತೆ ಚಚ್ಚಿದರು.

ಈ ಗೋಲೀಬಾರ್ ಮತ್ತು ನಂತರದ ಘಟನೆಗಳಿಂದ 200 ಕ್ಕೂ ಹೆಚ್ಚು ಜನತೆ ತೀವ್ರವಾಗಿ ಗಾಯಗೊಂಡಿದ್ದಾರೆ.

ಮೇ ತಿಂಗಳಿನಿಂದ ಇದೇ ಆಂಧ್ರಾದ್ಯಂತ ನಡೆದ ಚಳುವಳಿಗೆ ಚಂದ್ರಬಾಬು ಸರ್ಕಾರ ಮಣಿಯದೇ ಹಠಮಾರಿತನ ತೋರಿಸಿತು. ಆಂಧ್ರದ ಮಂತ್ರಿಗಳು ಎಲ್ಲಿ ಹೋದರೂ ಅಲ್ಲಿ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಈ ಸಮಸ್ಯೆಯನ್ನು ಎತ್ತಿ ವಿದ್ಯುತ್ ದರ ಏರಿಕೆಯನ್ನು ಹಿಂತೆಗೆಯಲು ಒತ್ತಾಯಿಸಿದಾಗ ಎಲ್ಲಾ ವಿರೋಧ ಪಕ್ಷಗಳ ಶಾಸಕರನ್ನು ಸಸ್ಪೆಂಡ್ ಮಾಡುವ ಸರ್ವಾಧಿಕಾರಿ ಕ್ರಮವನ್ನು ತೆಗೆದುಕೊಳ್ಳಲು ಚಂದ್ರಬಾಬು ನಾಯುಡು ಸರ್ಕಾರ ಹಿಂದೆಗೆಯಲಿಲ್ಲ.

ಪುಟ 8 ಕ್ಕೆ

ಸ್ವಾತಂತ್ರ್ಯೋತ್ಸವ ಬಂತು! ಹೋಯಿತು!

ಅದೇ ಹಳಸಿದ ಮಾತುಗಳು......

ಅದೇ ಆಗಸ್ಟ್ 15, ಅದೇ ಕೆಂಪುಕೋಟೆ, ಅದೇ ಹಳಸಿದ ಮಾತುಗಳು, ಪ್ರಧಾನ ಮಂತ್ರಿಗಳ ಬಾಯಿಂದ ಪುಂಖಾನುಪುಂಖವಾಗಿ ಭಾಷಣದ ಸುರಿಮಳೆ. ಬೂಟಾಟಿಕೆಯ ಉಪದೇಶ.

ಕಳೆದ ಐವತ್ತೂಮ್ರು ವರ್ಷಗಳಿಂದ ಜನ ಆಲಿಸಿದ್ದು ಇದೇ ಬಾಷಣಗಳು. ಆದರೆ ವ್ಯಕ್ತಿಗಳು ಮಾತ್ರ ಬೇರೆ ಬೇರೆ. ಅವರು ಪ್ರತಿನಿಧಿಸಿದ ಪಕ್ಷಗಳೂ ಬೇರೆ ಬೇರೆಯೇ. ಆದರೇ ಎಂತಹ ಆಶ್ಚರ್ಯ! ಎಲ್ಲರ ಧಾಟಿಯೂ ಒಂದೇ.

ಈ ಬಾರಿ ಬಿಜೆಪಿ ಪ್ರಧಾನಿ, ಕವಿ ಹೃದಯ(?)ದ ಪ್ರಧಾನಿ!! ಬೇರೆಲ್ಲ ಪಕ್ಷಗಳಿಗಿಂತ ವಿಭಿನ್ನ(!)ವಾದ ಪಕ್ಷದ ಪ್ರಧಾನಿ. ಶಿಸ್ತಿನ ಪಕ್ಷದ ಪ್ರಧಾನಿ,

ಹೀಗೆ ಗುಣವಾಚಕಗಳನ್ನು ಪ್ರಧಾನಿ ಪಟ್ಟಕೆ ಸೇರಿಸಿ ಹೇಳಿದ್ದೇ ಹೇಳಿದ್ದು, ರಾಷ್ಟ್ರೀಯ ವೃತ್ತ ಪತ್ರಿಕೆಗಳು.

ಕಾಶ್ಮೀರ ಸಮಸ್ಯೆ

ಗಡಿಭಾಗಗಳಲ್ಲಿ ಮತ್ತು ನಮ್ಮ ದೇಶಾದ್ಯಂತ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ಕುಯುಕ್ತಿಯನ್ನು ಖಂಡಿಸಬೇಕೆನ್ನುವ ವಿಚಾರದಲ್ಲಿ ಎರಡು ಮಾತಿಲ್ಲ. ಆದರೆ, ಇಂದು ಬೇಕಾಗಿರುವುದು ಕಾಶ್ಮೀರದ ಸಮಸ್ಯೆಗೆ ತಕ್ಷಣದ ಪರಿಹಾರ. ಭಾರತೀಯ ಸಂವಿಧಾನದಡಿಯ 370 ನೇ ಪರಿಚ್ಛೇದದ ಚೌಕಟ್ಟಿನಲ್ಲಿ ಕಾಶ್ಮೀರಕ್ಕೆ ಸ್ವಾಯತ್ತತೆಯನ್ನು ನೀಡಬೇಕಾಗಿರುವುದು ಈಗ ತತ್ಕ್ಷಣದ ರಾಜಕೀಯ ಪರಿಹಾರ. ಆದರೆ, ನಮ್ಮ ಪ್ರಧಾನಿ, ದುರದೃಷ್ಟವಶಾತ್, ಪಾಕಿಸ್ತಾನವನ್ನು ದೂರುವುದರಲ್ಲೇ ತಮ್ಮ ಭಾಷಣವನ್ನು ಮೀಸಲಿಟ್ಟರು. ಆರ್ ಎಸ್‌ಎಸ್ ತನ್ನ ಆತ್ಮ ಎಂದು ಹೆಮ್ಮೆಯಿಂದ ಬೀಗುವ ನಮ್ಮ ಪ್ರಧಾನಿಯವರ ಆತ್ಮ(ಆರ್ ಎಸ್ ಎಸ್)ವು 370 ನೇ ವಿಧಿಯನ್ನು ಕಿತ್ತು ಹಾಕಬೇಕು, ಫರೂಕ್ ಅಬ್ದುಲ್ಲಾ ಸರ್ಕಾರವನ್ನು ವಜಾ ಮಾಡಬೇಕು, ಎಂದು ಹೇಳುತ್ತಿರುವ ಸಂದರ್ಭದಲ್ಲೇ ವಾಜಪೇಯಿ ಸರಕಾರ ಹಿಜ್‌ಬುಲ್ ಮುಜಾಹಿದೀನ್ ಜತೆ ಮಾತುಕತೆಗೆ ಸಿದ್ಧತೆ ನಡೆಸಿದೆ! ಇಂತಹ ಕೂಟದ ಪರ್ಯವಸಾನ ಅನಾಹುತದಲ್ಲದೆ ಬೇರೆ ಹೇಗಾಗಲು ಸಾಧ್ಯ .

ಒಂದೊಂದು ಸಚಿವರ ಹೇಳಿಕೆ ಒಂದೊಂದು, ಪ್ರಧಾನಿ ಹೇಳಿಕೆ ಬೇರೊಂದು! ವಿರೋಧಾಬಾಷಗಳ ಸರಮಾಲೆ, ಯಾವುದೇ ದೂರದೃಷ್ಟಿಯ ಸ್ಪಷ್ಟ ಕಲ್ಪನೆಯೇ ಸರ್ಕಾರಕ್ಕಿಲ್ಲ. ಅಮಾಯಕ ಜನರ ಜೀವಗಳ ಜತೆ ಚೆಲ್ಲಾಟವಾಡದೆ, ಒಂದು ರಾಜಕೀಯ ಪರಿಹಾರ ಕಂಡುಹಿಡಿಯಲು ಸರ್ಕಾರ ಮುಂದಾಗಬೇಕು.

ಆಪತ್ಕಾರಿ ಸುಧಾರಣೆಗಳ ವೇಗದ ಹೆಚ್ಚಳ

ದೇಶದ ತ್ವರಿತ ಮಾರಾಟಕೆ ತಯಾರಿ!

ಮುಂಬರುವ ದಶಕವು ತಲಾದಾಯವನ್ನು ದುಪ್ಪಟ್ಟುಮಾಡುವ ನಿಟ್ಟಿನಲ್ಲಿ ಅಭಿವೃದ್ಧಿಯ ದಶಕ ವಾಗುತ್ತದೆ. ಎಂದು ಪ್ರಧಾನಿ ಬಡಾಯಿ ಕೊಚ್ಚಿದ್ದೇ ಕೊಚ್ಚಿದ್ದು, ಆರ್ಥಿಕ ಸುಧಾರಣೆಗಳು ತುರ್ತಿನ ಅಗತ್ಯವಾಗಿದೆ. ಸುಧಾರಣೆಯ ಪ್ರಕ್ರಿಯೆಯ ವೇಗ ಹೆಚ್ಚಿಸಬೇಕು, ಎಂದು ಹೇಳುವುದರ ಮೂಲಕ ಪರೋಕ್ಷವಾಗಿ ದೇಶದ ಜನರಿಗೆ ಪ್ರಧಾನಿ ಎಚ್ಚರಿಕೆ ನೀಡಿದ್ದಾರೆ. ಆದರೆ, ದೇಶದ ಆರ್ಥಿಕ ವ್ಯವಸ್ಥೆಯನ್ನು ಜೀತಕ್ಕಿಡುವ ಕಾರ್ಯ ವೇಗದಿಂದ ಸಾಗುತ್ತಿದೆ. ಎಂಬ ಸತ್ಯಸಂಗತಿ ನೋಡುವವರ ಕಣ್ಣಿಗೆ ರಾಚುವ ಹಾಗೆ ಕಾಣುತ್ತಿದೆ.

ಮಾರ್ಚ 99 ಕ್ಕೆ ಕೊನೆಗೊಂಡ ಭಾರತದ ಪ್ರಧಾನ ವೆಚ್ಚ ನಿಯಂತ್ರಣ ಮತ್ತು ಲೆಕ್ಕ ತಪಾಷಣಾಧಿಕಾರಿಯ(cag) ವರದಿಯ ಪ್ರಕಾರ ಕೇಂದ್ರ ಸರ್ಕಾರದ ಒಟ್ಟು ಸಾಲದ ಹೊರೆಯು ಕಳೆದ ಐದು ವರ್ಷಗಳಲ್ಲಿ ಶೇಕಡಾ 61 ರಷ್ಟು ಹೆಚ್ಚಾಗಿದೆ. ಅದು 10,12,486 ಕೋಟಿಯಷ್ಟಾಗಿದೆ. ಅದು ದೇಶದ ಒಟ್ಟಾರೆ ಆಂತರಿಕ ಉತ್ಪಾದನೆಯ ಶೇಕಡಾ 57.44 ರಷ್ಟಾಗಿದೆ. ವಿದೇಶ ಸಾಲವನ್ನು ಹಿಂತಿರುಗಿಸುವ ಮತ್ತು ಅದರ ಮೇಲಿನ ಬಡ್ಡಿ ನೀಡುವ ಪರಿಸ್ಥಿತಿ ಎಲ್ಲಿಗೆ ಮುಟ್ಟಿದೆ ಎಂದರೆ, 1994-95 ರಲ್ಲಿ ದೇಶದ ನಿವ್ವಳ ಒಳಹರಿವು ಋಣಾತ್ಮಕವಾಗಿದೆ. ಅಂದರೆ ಆದರ ಅರ್ಥ ನಮ್ಮ ದೇಶದ ಉತ್ಪಾದನೆಯ ಅರ್ಧಕ್ಕಿಂತಲೂ ಹೆಚ್ಚು ಭಾಗ ಸಾಲ ವಾಪಸಾತಿಗೆ ವ್ಯಯವಾಗುತ್ತಿದ್ದು, ಅಭಿವೃದ್ಧಿ ಯೋಜನೆಗಳಿಗೆ ಉಳಿಯುವುದು ಅತಿ ಕಡಿಮೆ. ಇಂದು ನಮ್ಮ ಸಂಪನ್ಮೂಲಗಳನ್ನು ವಿದೇಶಕ್ಕೆ ಹಿಂತಿರುಗಿಸುತ್ತಿದ್ದೇವೆ!

ಹೆಚ್ಚಾಗುತ್ತಿರುವ ಬಡವರ ಸಂಖ್ಯೆ

ಉದ್ಯೋಗ ನೇಮಕಾತಿ ಮೇಲೆ ನಿರ್ಬಂಧ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಖಾಸಗೀವಲಯದ ನಾಲ್ಕು ಲಕ್ಷಕೂ ಮೀರಿದ ಕಾರ್ಖಾನೆಗಳ ಮುಚ್ಚುವಿಕೆ ಇವೆಲ್ಲವೂ ನಿರುದ್ಯೋಗಿಗಳ ಸೈನ್ಯವನ್ನು ಸೃಷ್ಟಿಸಿದೆ. ಬಡತನದ ರೇಖೆಗಿಂತ ಕೆಳಗಿರುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಹಸುವಿನಿಂದ ಸಾಯುವವರ ಮತ್ತು ರೈತರ ಆತ್ಮಹತ್ಯೆ ಸುದ್ದಿಗಳು ದಿನನಿತ್ಯದ ಮಾತಾಗಿದೆ.

ದೇಶದ ಮತ್ತು ಇಡೀ ಜನಸಮುದಾಯದ ಆರೋಗ್ಯವನ್ನೇ ವಿಪತ್ತಿಗೆ ತಳ್ಳುತ್ತಿರುವ ಈ "ಸುಧಾರಣೆ"ಗಳನ್ನು ನಮ್ಮ ಪ್ರಧಾನಮಂತ್ರಿಗಳು ಇನ್ನೂ ಮುಂದುವರಿಸುತ್ತಾರಂತೆ. ಅದರ ವೇಗವನ್ನು ಹೆಚ್ಚಿಸುತ್ತಾರಂತೆ

ಹಳ್ಳಿಗಳ ರಸ್ತೆಗಳನ್ನು ಜೋಡಿಸುವ, ಅತಿದೂರದ ದೂರಸಂಪರ್ಕಸಾಧನ ಒದಗಿಸುವ, ಇಂಟರ್‌ನೆಟ್ ವ್ಯವಸ್ಥೆ ಪೂರೈಸುವ ದೊಡ್ಡ ದೊಡ್ಡ ಘನೋದ್ದೇಶ ಯೋಜನೆಗಳನ್ನು ಪ್ರಕಟಿಸಲಾಗಿದೆ ದುರಂತವೆಂದರೆ ಅತ್ಯಾವಶ್ಯಕವಾಗಿರುವ ಕುಡಿಯುವ ನೀರಿನ ಪೂರೈಕೆ ಸರಕಾರದ ಆದ್ಯತೆಗಳ ಪಟ್ಟಿಯ ಕೊನೆಯಲ್ಲಿ ಇರುವುದು!.

ಆಷಾಢಭೂತಿತನದ ಪರಾಕಾಷ್ಠೆ

ಧಾರ್ಮಿಕ ಅಸಹಿಷ್ಣತೆ ಮತ್ತು ದ್ವೇಷ ಎಂದೂ ಭಾರತದ ಉದಾರ ಸಂಸತಿ ಭಗವಾಗಿರಲಿಲ್ಲ ಕಾಲ್ಪನಿಕ ವೈರಿಗಳನ್ನು ಸೃಷ್ಟಿಮಾಡಬೇಡಿ ಮತ್ತು ಬೇರೆಯವರನ್ನು ಘಾಸಿಗೊಳಿಸುವ ಹಿಂಸೆಯ ದಾರಿ ಹಿಡಿಯಬೇಡಿ ಎಂದು ನಾನು ಎಲ್ಲಾ ಮತಶ್ರದ್ಧೆಯ ಮತ್ತು ಜಾತಿಯ ಜನರಲ್ಲಿ ಮನವಿ ಕೊಳ್ಳುತ್ತೇನೆ." ಎಂದು ಹೇಳುವ ಮೂಲಕ ಪ್ರಧಾನಿಯವರ ಕಪಟನತ ಪರಾಕಾಕ್ಷೆಯನ್ನು ಮುಟ್ಟಿದೆ. ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಇದೇ ವ್ಯಕ್ತಿ, ಕ್ರಿಶ್ಚಿಯನ್ನರ ಮೇಲೆ ಅಮಾನವೀಯ ಹಲ್ಲೆ ನಡೆಯುತ್ತಿದ್ದಾಗ ತಪಿತಸ್ಥರ ಮೇಲೆ ತೀವ್ರಕ್ರಮ ಕೈಗೊಳ್ಳುವ ಬದಲು "ರಾಷ್ಟ್ರೀಯ ಚರ್ಚೆ" ಯಾಗಹೇಕೆಂದು ಕರೆ ಕೊಟ್ಟದ್ದನ್ನು ದೇಶದ ಜನ ಮರೆತಿಲ್ಲ.

ಯಾವ ಸಂಘದ ಬೆಂಬಲವಿಲ್ಲದೆ ಇಂದು ವಾಜಪೇಯಿ ಪ್ರಧಾನ ಮಂತ್ರಿ ಪಟ್ಟವನ್ನು ಪಡೆಯುತ್ತಿರಲಿಲ್ಲವೋ ಅದೇ ಆರ್‌ಎಸ್‌ಎಸ್ ಅಶ್ಯವಾದಿಯ ಶರಬಂಧ ಬಾಹುಗಳು ದೇಶಾದ್ಯಂತ ಕೋಮುವಿಷಬೀಜವನ್ನು ಬಿತ್ತುವ ಕುಕೃತ್ಯವನ್ನು ಮುಂದುವರಿಸುತ್ತಿದೆ. ವಾಜಪೇಯಿ ನೇತೃತ್ವದ ಸರ್ಕಾರೀ ಕೃಪಾಶ್ರಯದಲ್ಲಿ ಎಂತಹ ಮಟ್ಟದ ಕೋಮುವಿಷಾನೀಲ ಹರಡಬಹುದು ಎನ್ನವುದಕ್ಕೆ ಇತ್ತೀಚೆಗೆ ಕಾಶ್ಮೀರದಲ್ಲಿ ಭಯೋತ್ಪಾದಕರು ನಡೆಸಿದ ಧಾಳಿಯನಂತರ, ಗುಜರಾತಿನಲ್ಲಿ ನಡೆದ ನರವೇಧವೇ ಸಾಕ್ಷಿ.

ದೇಶ ಮಾರಲು ಬಿಡುವುದಿಲ್ಲ, ವಾಜಪೇಯಿಯವರೆ?:

ಜನಕ್ಕೆ ಬೇಕಾಗಿರುವುದು ಹಳಸಿದ ಮಾತುಗಳಲ್ಲ, ಶ್ರದ್ಧಾ, ಭಕ್ತಿಗಳ ಉಪದೇಶವಲ್ಲ. ನಮ್ಮ ದೇಶದ ಸ್ವಾತಂತ್ರ್ಯವನ್ನು ಭಾರತದ ಜನ ಪೋಷಿಸುತ್ತಾರೆ.

ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆ ಇಡುವ ಯಾವುದೇ ಪ್ರಶ್ನವನ್ನು ನಮ್ಮ ಜನ ಖಂಡಿತಾ ಪ್ರತಿಭಟಿಸುತ್ತಾರೆ. ಮತ್ತು ತಡೆಯುತ್ತಾರೆ ಕೂಡ, ಜಾತ್ಯಾತೀತ ಪ್ರಜಾಪ್ರಭುತ್ವವನ್ನು ನಮ್ಮ ರಾಷ್ಟ್ರದ ಮತ್ತು ನಮ್ಮ ಸಮಾಜದ ಅವಿಭಾಜ್ಯ ಅಂಗವೆಂದು ಭಾರತದ ಜನ ಪರಿಗಣಿಸುತ್ತಾರೆ. ಇದನ್ನು ಒಳಗೊಳಗೇ ಹಾಳುಗೆಡುವ ಯಾವುದೇ ಕೃತ್ಯವನ್ನು ಉಗ್ರವಾಗಿ ತಡೆಯುತ್ತಾರೆ, ಇದು ನಮ್ಮ 54ನೇ ಸ್ವಾತಂತ್ರ್ಯ ದಿನದ ಪ್ರತಿಜ್ಞೆ.



ಆತಂಕದ ನಡುವೆ ಪ್ರಧಾನಿ ಭಾಷಣ


ಉಡುಪಿಯಲ್ಲಿ ಸಂಘಪರಿವಾರದ ದಾದಾಗಿರಿ: ಒಂದು ವರದಿ

ದಿನಾಂಕ 26.7.2000 ದಂದು ಉಡುಪಿಯಲ್ಲಿ ವಿತರಣೆಯಾದ ಲಂಕೇಶ್ ಪತ್ರಿಕೆ (ಆಗಸ್ಟ್ 2, 2000 ದ ಸಂಚಿಕೆ) ಯಲ್ಲಿ ಉಡುಪಿಯ ಅಷ್ಟ ಮಠಗಳ ಬಗ್ಗೆ ಒಂದು ಲೇಖನ ಪ್ರಕಟವಾಗಿತ್ತು.

ಅಷ್ಟ ಮಠಗಳ ಆಸ್ತಿ, ಅಧಿಕಾರ ವ್ಯಾಜ್ಯಗಳು, ಪೀಠತ್ಯಾಗ ಹಗರಣಗಳು, ತಾಂತ್ರಿಕ ವ್ಯಾಪಾರಗಳು ದಕ್ಷಿಣ ಕನ್ನಡದಲ್ಲಿ ಗುಟ್ಟಾಗಿ ಏನೂ ಉಳಿದಿಲ್ಲ. ಹಾಗೆಯೇ ಬ್ರಾಹ್ಮಣ ಮಠಗಳು ಬ್ರಾಹ್ಮಣೇತರರನ್ನು ನಡೆಸಿಕೊಳ್ಳುವ ರೀತಿಯಲ್ಲಿಯೂ ಗುಟ್ಟೇನೂ ಇಲ್ಲ. ಇವತ್ತಿಗೂ ಯಾರಾದರೂ ಬಂದು ಈ ವರ್ತನೆಗಳನ್ನು ಪರೀಕ್ಷಿಸಿ ನೋಡಬಹುದು ದಕ್ಷಿಣ ಕನ್ನಡದವರೇ ಆದ ಸಿ.ಆರ್. ಭಟ್ ಮಠಬೋಜನ ದಲ್ಲಿ ನಡೆಯುವ ಜಾತಿ ತಾರತಮ್ಯದ ಬಗ್ಗೆ ವಿವರವಾಗಿ 'ಐಕ್ಯರಂಗ'ದಲ್ಲಿ ಬರೆದಿದ್ದರು. ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ಈ ಸಂಗತಿಗಳನ್ನೇ ಆಧರಿಸಿ ಅಷ್ಟ ಮಠಗಳನ್ನು ಟೀಕೆ ಮಾಡಿದೆ. ಈ ಟೀಕೆ ಸುಳ್ಳು ಮತ್ತು ದುರುದ್ದೇಶಗಳಿಂದ ಕೂಡಿದೆ ಎಂದು ಮಠಗಳ ಅಭಿಮಾನಿಗಳಿಗೆ ಅನ್ನಿಸಿದ್ದರೆ, ಅವರಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಹಲವಾರು ಪ್ರಜಾ ಪ್ರಭುತ್ವೀಯ ಮಾರ್ಗಗಳಿದ್ದವು. ಆಯಾ ಜಾತಿಯವರ ಮಠಗಳು, ಮಠಾಧೀಶರು ತಮ್ಮ ಭಕ್ತರ ದೃಷ್ಟಿಯಲ್ಲಿ ಎಷ್ಟೇ ಪವಿತ್ರರು, ಪ್ರಶ್ನಾತೀತರು ಆಗಿರಲಿ, ಪ್ರಜಾಪ್ರಭುತ್ವದ ಸಂವಿಧಾನ ಮತ್ತು ಕಾನೂನಿನ ಪ್ರಕಾರ ಬೇರೆ ಸಂಸ್ಥೆಗಳು ಮತ್ತು ಪ್ರಜೆಗಳಿಗೆ ಯಾವ ಹಕ್ಕುಗಳಿವೆಯೋ ಅಷ್ಟು ಹಕ್ಕುಗಳಿಗೆ ಮಾತ್ರ ಅರ್ಹರು (ಆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ, ಅಧಿಕಾರಸ್ಥ ಜಾತಿಗಳ ಜನರಿಗೆ ಪ್ರಜಾಪ್ರಭುತ್ವದ ಈ ನ್ಯಾಯದ ಬಗ್ಗೆಯೇ ಅಸಮಧಾನವಿದೆ; ಇದರ ಪರಿಣಾಮ ದಲಿತರು ಮತ್ತು ಭೂಹೀನರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳಲ್ಲಿ ಕಾಣುತ್ತಿದೆ). ನಿಜವಾದ ಅಷ್ಟ ಮಠಗಳ ಭಕ್ತರು ಪತ್ರಿಕೆಯ ಬರಹಕ್ಕೆ ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದರೋ ಏನೋ; ಆದರೆ ಉಡುಪಿಯಲ್ಲಿ ಕೃಷ್ಣ ಭಕ್ತರ ರವಾಗಿ ಮಾತನಾಡುವ ಅಘೋಷಿತ ವಕ್ತಾರರ ಹಾಗೆ ಇಡಿದರುವ ಸಂಘಪರಿವಾರದ ಸಂಘಟನೆಗಳಾದ ವಿ.ಹಿಂ.ಪ., ಭಜರಂಗದಳ, ಹಿಂದು ಜಾಗರಣ ವೇದಿಕೆ ಮತ್ತು ಹಿಂದು ಯುವ ಸೇನೆ.

ದಿನಾಂಕ 30.7.2000 ದಂದು ಹಿಂದುಯುವ ಸೇನೆಯವರು ಪುಂಡರ ಗುಂಪು ಕಟ್ಟಿಕೊಂಡು ಉಡುಪಿ, ಕಟ್ಪಾಡಿ ಮತ್ತು ಶಾಪುಗಳಲ್ಲಿ ಪೇಪರ್ ಸ್ಟಾಲ್‌ಗಳಲ್ಲಿದ್ದ ಲಂಕೇಶ್ ಪತ್ರಿಕೆ ಪ್ರತಿಗಳನ್ನು ಬಲವಂತವಾಗಿ ಕಿತ್ತುಕೊಂಡು ಸುಟ್ಟದ್ದೇ ಅಲ್ಲದೆ ಮುಂದೆ ಪತ್ರಿಕೆಯನ್ನು ಮಾರಕೂಡದು ಎಂದು ಬೆದರಿಕೆಯನ್ನೂ ಹಾಕಿದರು. ಆದರೆ ಈ ದೊಣ್ಣೆ ನಾಯಕರ ಬೆದರಿಕೆಯನ್ನು ಜನ ಮನ್ನಿಸಲಿಲ್ಲ; ಆಗಸ್ಟ್ 2 ರ ಸಂಚಿಕೆಯ ನೂರಾರು ಜೆರಾಕ್ಸ್ ಪ್ರತಿಗಳು ಮಾರಾಟವಾದದ್ದು ಮಾತ್ರವಲ್ಲ ಮುಂದಿನ ವಾರದ ಸಂಚಿಕೆಗಳೂ ಮಾರಾಟವಾದವು. ಉಡುಪಿಯ 'ಮತೀಯವಾದ ವಿರೋಧಿ ವೇದಿಕೆ' ಯವರು ಹಿಂದು ಯುವ ಸೇನೆಯ ದಾದಾಗಿರಿಯನ್ನು ವಿರೋಧಿಸಿ ಉಡುಪಿ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ಪತ್ರಿಕೆಯ ಮಾರಾಟ ಮುಕ್ತವಾಗಿ ನಡೆಯುವಂಥ ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಹಿಂದುಯುವ ಸೇನೆಯವರನ್ನು ಕರೆಸಿ ಎಚ್ಚರಿಕೆ ನೀಡಿರುವುದಾಗಿ ತಿಳಿಸಿದರು.

ದಿನಾಂಕ 9.8.200 ದಂದು ಸಂಘಪರಿವಾರದ ಸಂಘಟನೆಗಳು 'ಉಡುಪಿ ಶ್ರೀ ಕೃಷ್ಣ ಕ್ಷೇತ್ರ ಸಂರಕ್ಷಣಾ ಸಮಿತಿ'ಯ ಹೆಸರಿನಲ್ಲಿ ಲಂಕೇಶ್ ಪತ್ರಿಕೆ ವಿರುದ್ಧ ಮೆರವಣಿಗೆ ತೆಗೆದು. ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ನಿಜಕ್ಕೂ ಅದು ಮನವಿ ಪತ್ರವಲ್ಲ, ಬೆದರಿಕೆ ಪತ್ರವಾಗಿತ್ತು. ಅದರಲ್ಲಿ "ಷಡ್ಯಂತ್ರದಲ್ಲಿ ನಿರತವಾಗಿರುವ ಪೀತಪತ್ರಿಕೆಗಳು ಹಾಗೂ ವಿಕೃತ ವಿಚಾರವಾದಿಗಳನ್ನು ಹಿಂದೂ ಸಮಾಜ ಸುಮ್ಮನೆ ಬಿಡುವುದಿಲ್ಲ" ಸರ್ಕಾರ ಇವರ ಮೇಲೆ ಕಡಿವಾಣ ಹಾಕದಿದ್ದರೆ "ಮುಂದಾಗುವ ಎಲ್ಲಾ ಅನಾಹುತಗಳಿಗೆ ಸಂಬಂಧಪಟ್ಟವರೇ ಹೊಣೆ ಹೊರಬೇಕಾಗುತ್ತದೆ" ಎಂದು ಧಮಕಿ ಹಾಕಲಾಗಿದೆ. ಮೆರವಣಿಗೆಯ ನಂತರ ಉಡುಪಿಯ ರಥ ಬೀದಿಯಲ್ಲಿ ನಡೆದ ಬಹಿರಂಗ ಸಭೆಯಂತೂ ಖುಲ್ಲಮ್‌ಖುಲ್ಲಾ ದಾದಾಗಿರಿಯ ಪ್ರದರ್ಶನವಾಗಿತ್ತು



ಅಷ್ಟಮಠಗಳ ದಿವಾಳಿತನಕ್ಕೆ ಸಾಕ್ಷಿ....

ಪತ್ರಗಳು

ಡೋಂಗಿ ಗುರು

ಸಭೆಯಲ್ಲಿ ಮಾತನಾಡಿದ ಭಜರಂಗದಳದ ರಾಷ್ಟ್ರೀಯ ಸಂಚಾಲಕ ಹರೀಶ್ ಭಾಯಿಭಟ್ ಕರ್ನಾಟಕದ ಸಂಚಾಲಕ ಪ್ರಮೋದ್ ಮುತಾಲಿಕ್ ಮತ್ತು ಹಿಂದು ಜಾಗರಣ ವೇದಿಕೆಯ ದ.ಕ. ಸಂಚಾಲಕ ಸತ್ಯಜಿತ್ (ಈತ ಸುರತ್ಕಲ್‌ಗಲಭೆಗಳ ಪ್ರಮುಖ ಆರೋಪಿ) ಇವರುಗಳು ಬಾಬ್ರಿ ಮಸೀದಿ ನಾಶವನ್ನು "ಹಿಂದುಗಳ ವಿಜಯದ ಪ್ರತೀಕ" ಎಂದು ಹೆಮ್ಮೆಯಿಂದ ಘೋಷಿಸಿಕೊಂಡರು. ಇವರ ಕ್ರಿಮಿನಲ್ ಮಾತುಗಳ ಕೆಲವು ಝಲಕ್‌ಗಳನ್ನು ನೋಡಿ:

ಹರೀಶ್ ಭಾಯಿ: "ಹಿಂದುತ್ವವನ್ನು ಎತ್ತಿ ಹಿಡಿಯುವ ನಮ್ಮನ್ನು ಕೋಮುವಾದಿಗಲು ಎಂದು ಕರಿಯಿತ್ತೀರೋ; ನಮ್ಮ ವಿರುದ್ಧ ಮಾತನಾಡುವ ವಿಚಾರವಾದಿಗಳು ವಿದೇಶಿ ಪಿತೂರಿಗಾರರು; ಇವರ ಆಟವನ್ನು ಸುಮ್ಮನೆ ನೋಡುತ್ತಾ ಕೂಡುವ ಕಾಲ ಮುಗಿಯಿತು; ಇಂದು ನಾವು ಆಯುಧ ಹಿಡಿದು ಉತ್ತರ ಕೊಡುತ್ತೇವೆ"

ಪ್ರಮೋದ್ ಮುತಾಲಿಕ್: "ಇನ್ನು ಮೇಲೆ ಉಡುಪಿಯಲ್ಲಿ ಲಂಕೇಶ್ ಪತ್ರಿಕೆಯನ್ನು ಯಾರೂ ಓದೋಹಾಗಿಲ್ಲ, ಮಾರೋಹಾಗಿಲ್ಲ ಕದ್ದು ಮುಚ್ಚಿ ಓದಿದವರ ನಾಲಿಗೆ ಸೀಳುತ್ತೇವೆ; ಮಾರುವ ಏಜೆಂಟರ ಕಾಲು ಕೈ ಮುರಿದು ಅವರ ಮನೆಗಳಿಗೆ ಬೆಂಕಿ ಹಚ್ಚುತ್ತೇವೆ. ನಮ್ಮ ದೇಶಭಕ್ತ ಕಾರ್ಯಕರ್ತರಿಗೆ ತೊಂದರೆ ಕೊಡುವ ಪೋಲಿಸರೇ ನಿಮಗೆ ಧಿಕ್ಕಾರವಿರಲಿ, ನಾವು ಇನ್ನು ಯಾವ ಕಾನೂನಿಗೂ ಅಂಜುವವರಲ್ಲ. ಮಾತು-ಚರ್ಚೆಯ ಕಾಲ ಮುಗಿಯಿತು, ಎರಡೂ ಕೈಗಳಲ್ಲೂ ತಲವಾರು ಹಿಡಿದುಕೊಂಡು ಹಿಂದು ವಿರೋಧಿಗಳನ್ನು ಕೊಚ್ಚಿಹಾಕಿ"

ಸತ್ಯಜಿತ್: "ಹಿಂದುಗಳ ವಿರೋಧ ಕಟ್ಟಿಕೊಂಡವರ ಗತಿ ಏನಾಗುತ್ತದೆ ಎನ್ನುವುದನ್ನು ಒಂದುವರೆ ವರ್ಷದ ಕೆಳಗೆ ಸುರತ್ಕಲ್ ನಲ್ಲಿ ತೋರಿಸಿದ್ದೇವೆ, ಅವಶ್ಯಕತೆ ಬಿದ್ದರೆ ಇಲ್ಲಿಯೂ ತೋರಿಸುತ್ತೇವೆ. ಹಿಂದುಗಳ ಉಪ್ಪುಂಡು ಹಿಂದುಗಳಿಗೇ ದ್ರೋಹ ಬಗೆಯುವ ಜಿ. ರಾಜಶೇಖರ್ ನಂತಹ ಬುದ್ಧಿ ಜೀವಿಗಳ ಕೈಕಾಲು ಮುರಿದು ನನ್ನ ಹತ್ತಿರ ಬನ್ನಿ, ಕಾನೂನು ಏನು ಮಾಡುತ್ತದೋ ನಾನು ನೋಡಿಕೊಳ್ಳುತ್ತೇನೆ, ಹೆಚ್ಚೆಂದರೆ 307 ಸೆಕ್ಷನ್ನಿನ ಪ್ರಕಾರ ಕೇಸು ಹಾಕಿಯಾರು, ಅದಕ್ಕೆಲ್ಲಾ ನಾವು ಅಂಜುವುದಿಲ್ಲ. ಪೋಲಿಸರೇ ಈ ಮಾತುಗಳನ್ನು ಸಾರ್ವಜನಿಕ ವಾಗಿಯೇ ಹೇಳುತ್ತಿದ್ದೇನೆ, ಸೆಕ್ಷನ್ 153 ರ ಪ್ರಕಾರ ಕೋಮು ದ್ವೇಷ ಹರಡುತ್ತಿದ್ದೇವೆ ಎಂದು ಕೇಸು ಹಾಕಿ ನೋಡೋಣ!"

ಈ ಸಭೆಯಲ್ಲಿ, ಇವರ ತಾಳಕ್ಕೆ ತಕ್ಕಂತೆ ಕುಣಿಯಲು ನಿರಾಕರಿಸಿದ ಉಡುಪಿಯ ಶಾಸಕ ಯು. ಆರ್.ಸಭಾಪತಿಯವರನ್ನು ಕೆಟ್ಟ ಶಬ್ದಗಳಲ್ಲಿ ನಿಂದಿಸಿದರು. ಈ ಸಭೆಯ ಕೊನೆಯಲ್ಲಿ ಅಂಗೀಕರಿಸಿದ ಕ್ರಿಮಿನಲ್ ನಿರ್ಣಯಗಳ ಪ್ರತಿಗಳನ್ನು ಅಧ್ಯಕ್ಷರು, ಕಾರ್ಯದರ್ಶಿಗಳ ರುಜುವಿನ ಸಹಿತ- ಸಂಘ ಪರಿವಾರವನ್ನು ವಿರೋಧಿಸುವ ಉಡುಪಿಯ ನಾಗರಿಕರಿಗೆ ರವಾನಿಸಿದ್ದಾರೆ. ಈ ಸಭೆ ಮುಗಿದ ಒಂದು ವಾರದ ನಂತರ, ಇವರ ಗೂಂಡಾಗಿರಿಗೆ ಬಗ್ಗದ ಯು. ಆರ್. ಸಭಾಪತಿಯವರು ಸೇರಿದಂತೆ, ಎಂಟು ಜನರ ವಿರುದ್ಧ ಕೆಟ್ಟ ಬೈಗುಳಗಳಿಂದ ತುಂಬಿದ ಬೇನಾಮಿ ಕರಪತ್ರಗಳನ್ನು ಹಂಚಿದ್ದಾರೆ.

ವರದಿಗಾರ

ಜ್ಯೋತಿಬಸು ಆತ್ಮಕಥನ

ಪುಟ 2 ರಿಂದ

ಉಳಿದಿರುವ ಮಾರ್ಗ. ಭಾರತ ಮತ್ತು ಚೀನಾದ ಪ್ರಧಾನಿಗಳು ಕೂಡಲೇ ಸಭೆ ಸೇರಬೇಕು" ಎಂದು ನಾನು ಹೇಳಿದೆ.

ಗಡಿ ವಿಚಾರವಾಗಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪಕ್ಷಗಳ ನಿಲುವಿನಲ್ಲಿ ಮೂಲಭೂತ ವ್ಯತ್ಯಾಸವಿತ್ತು. ಆದರೆ ಈ ಭಿನ್ನಾಭಿಪ್ರಾಯ ಸಂಯುಕ್ತ ಕಾರ್ಯಾಚರಣೆ ನಡೆಸುವಲ್ಲಿ ಯಾವುದೇ ಅಡ್ಡಿ ಆಗಿರಲಿಲ್ಲ. ಗಡಿ ವಿವಾದ ಬಗ್ಗೆ ನಮ್ಮ ಪಕ್ಷದ ನಿಲುವಿನ ವಿಚಾರವಾಗಿ ಕಾಂಗ್ರೆಸ್ ಪಕ್ಷ ಅಪಪ್ರಚಾರ ನಡೆಸಿತು. ಡಿಸೆಂಬರ್ 14 ರಂದು ನಡೆದ ಕಾಂಗ್ರೆಸ್ ರ್‍ಯಾಲಿ ದೊಂಬಿಯಲ್ಲಿ ತೊಡಗಿತು ಹಾಗೂ ವೆಲ್ಲಿಂಗ್ಟನ್ ಚೌಕದಲ್ಲಿನ ಹುತಾತ್ಮರ ಸ್ಮಾರಕಕ್ಕೆ ಬೆಂಕಿ ಹಚ್ಚಿತು. ಇದನ್ನು ಪ್ರತಿಭಟಿಸಿ ಹೇಮಂತ್ ಬೋಸ್ ಅಮರ ಬೋಸ್ ಮತ್ತು ನಾನು ಹಾಗೂ ಇತರ ಕೆಲ ನಾಯಕರು ಒಂದು ಹೇಳಿಕೆ ನೀಡಿದೆವು.

"ಗಡಿ ವಿವಾದದ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ಗಡಿ ವಿವಾದದ ಹೆಸರಿನಲ್ಲಿ ಹುತಾತ್ಮರ ಸ್ಮಾರಕಕ್ಕೆ ಕಾಂಗ್ರೆಸ್ ಅಗೌರವ ತೋರಿದ ರೀತಿ ಮಾತ್ರ ದೇಶಪ್ರೇಮಿಯಾಗಿರಲಿಲ್ಲ. ಪ್ರಜಾಸತ್ತಾತ್ಮಕ ಚಳವಳಿಯನ್ನು ನಾಶಪಡಿಸುವುದು ಹಾಗೂ ಪಶ್ಚಿಮ ಬಂಗಾಳದ ರಾಜಕೀಯ ವಾತಾವರಣವನ್ನು ವಿಷಯಮಗೊಳಿಸುವುದು ಕಾಂಗ್ರೆಸ್‌ನ ಏಕೈಕ ಉದ್ದೇಶ" ಎಂದು ಹೇಳಿಕೆಯಲ್ಲಿ ತಿಳಿಸಿದೆವು.

ಕಲ್ಕತ್ತದ ಮಹಾಜತಿ ಸದನದಲ್ಲಿ ಏಪ್ರಿಲ್ 2 ರಂದು ಆಫ್ರೋ-ಏಶ್ಯಾ ಏಕತಾ ಸಮ್ಮೇಳನ ಆರಂಭವಾಯಿತು. ರಾಮೇಶ್ವರಿ ನೆಹರೂ ಅಧ್ಯಕ್ಷತೆ ವಹಿಸಿದ್ದರು. ಚೀನಾ-ಭಾರತ ಸೌಹಾರ್ದಕ್ಕೆ ಒತ್ತುಕೊಟ್ಟು ಅವರು ಮಾತನಾಡಿದರು. "ಏಶ್ಯಾ ಮತ್ತು ಆಫ್ರಿಕಾದಿಂದ ಬಂಡವಾಳಶಾಹಿಗಳನ್ನು ಹೊಡೆದೋಡಿಸಲು ಏಕತಾ ಆಂದೋಲನವನ್ನು ಬಲಪಡಿಸಬೇಕು" ಎಂದು ಸಮ್ಮೇಳನದಲ್ಲಿ ನಾನು ಪ್ರತಿಪಾದಿಸಿದೆ. "ಏಶ್ಯಾ ಮತ್ತು ಆಫ್ರಿಕಾ ಏಕತೆಯ ಆಧಾರದಲ್ಲಿ ಇಡೀ ಜಗತ್ತಿನ ಜತೆ ಸಂಬಂಧ ಕಲ್ಪಿಸಿಕೊಳ್ಳಬೇಕು" ಎಂದು ಅಂದಿನ ಉಪರಾಷ್ಟ್ರಪತಿ ಡಾ.ಎಸ್. ರಾಧಾಕೃಷ್ಣನ್ ಸಮ್ಮೇಳನಕ್ಕೆ ಕಳಿಸಿದ ಸಂದೇಶದಲ್ಲಿ ಹೇಳಿದ್ದರು.

ಕಾಂಗ್ರೆಸ್ ದುರಾಡಳಿತ ವಿರುದ್ಧ ರಾಷ್ಟ್ರಪತಿಗೆ ದೂರು:

ಭಾರತ ಕಮ್ಯುನಿಸ್ಟ್ ಪಕ್ಷದ ಪಶ್ಚಿಮ ಬಂಗಾಳ ಘಟಕ ರಾಜ್ಯದಲ್ಲಿನ ಕಾಂಗ್ರೆಸ್ ದುರಾಡಳಿತದ ವಿರುದ್ಧ ರಾಷ್ಟ್ರಪತಿಗೆ 1959 ಜುಲೈ 27 ರಂದು ದೂರು ಸಲ್ಲಿಸಿತ್ತು. ಈ ದೂರರ್ಜಿಯ ಬಗ್ಗೆ ಸ್ವಲ್ಪ ವಿವರಣೆ ನೀಡುವುದು ಅಗತ್ಯವೆನಿಸುತ್ತದೆ.

ಭೂಪೇಶ್ ಗುಪ್ತ ಮತ್ತು ನಾನು ನವದೆಹಲಿಯಲ್ಲಿ ರಾಷ್ಟ್ರಪತಿಯವರನ್ನು ಭೇಟಿಯಾದೆವು. ಎಲ್ಲಾ ದೂರುಗಳನ್ನು ವಿವರಿಸಿದೆವು. ನಮ್ಮ ವಿವರಣೆಯನ್ನು ಗಮನವಿಟ್ಟು ಆಲಿಸಿದ ರಾಷ್ಟ್ರಪತಿ ಕೆಲವು ದೂರುಗಳ ಬಗ್ಗೆ ತುಂಬಾ ಆಸಕ್ತಿಯನ್ನು ವ್ಯಕ್ತಪಡಿಸಿದರು. ಕೇಂದ್ರ ಸರಕಾರದ ಸಂಬಂಧಪಟ್ಟ ಖಾತೆಗಳಿಗೆ ಈ ಆರೋಪಗಳನ್ನು ಕಳಿಸಿಕೊಡುವುದಾಗಿ ಅವರು ಆಶ್ವಾಸನೆ ನೀಡಿದರು. ಈ ವಿಚಾರಗಳಲ್ಲಿ ರಾಷ್ಟ್ರಪತಿಗೆ ಯಾವುದೇ ಸಂವಿಧಾನಿಕ ಪಾತ್ರವಿಲ್ಲ ಎಂದು ಕೂಡ ಅದೇ ಹೊತ್ತಿಗೆ ಅವರು ಹೇಳಿದರು.

"ಪಶ್ಚಿಮ ಬಂಗಾಳ ಘಟಕ ಈ ಅರ್ಜಿಯನ್ನು ನಿಮಗೆ ಸಲ್ಲಿಸುತ್ತಿದೆ. ಇದರಲ್ಲಿ ಡಾ. ಬಿಧನ ಚಂದ್ರ ರಾಯ್ ನೇತೃತ್ವದ ಸರಕಾರದ ವಿರುದ್ಧ ಅನೇಕ ಆರೋಪಗಳಿವೆ. ಈ ಅಪಾದನೆಗಳು ಸಮಗ್ರವಾದವುಗಳೇನೂ ಅಲ್ಲ. ಈ ಆರೋಪಗಳಿಗೆ ಪಶ್ಚಿಮ ಬಂಗಾಳ ಜನತೆಯ ಬೆಂಬಲವಿದೆ. ಅವರ ಕೋರಿಕೆಯ ಮೇರೆಗೆ ನಾವು ಅವುಗಳನ್ನು ನಿಮಗೆ ಕಳಿಸುತ್ತಿದ್ದೇವೆ ರಾಜ್ಯ ಸರಕಾರ ಪ್ರಜ್ಞಾಪೂರ್ವಕವಾಗಿ ಮತ್ತು ವ್ಯವಸ್ಥಿತವಾಗಿ ಜನರ ಸಂವಿಧಾನಿಕ ಹಕ್ಕುಗಳನ್ನು ನಾಶಮಾಡುತ್ತಿದೆ. ಹಾಗೂ ತಾನು ಸಂವಿಧಾನೇತರ ಅಧಿಕಾರವನ್ನು ಗಳಿಸಿಕೊಳ್ಳುತ್ತಿದೆ. ಎನ್ನುವುದು ಸ್ಪಷ್ಟ. ರಾಜ್ಯದ ಆಡಳಿತ ನಡೆಸುವುದನ್ನು ಬಿಟ್ಟು ಡಾ.ರಾಯ್ ಮಂತ್ರಿಮಂಡಳ ಜನತೆಯ ಮೇಲೆ ಭಾರೀ ಹೊರೆಯನ್ನು ಹೇರುವುದು ಕೂಡ ಸ್ಪಷ್ಟವಾಗಿದೆ. ಜನರ ಮೂಲಭೂತ ಹಕ್ಕುಗಳಿಗೆ ಗಮನ ನೀಡಿಲ್ಲ. ಕೆಲವೇ ವ್ಯಕ್ತಿಗಳು ಮತ್ತು ಸ್ಥಾಪಿತ ಹಿತಾಸಕ್ತರಿಗೆ ನೆರವಾಗುವುದು ಈ ಆಡಳಿತದ ಉದ್ದೇಶವಾಗಿದೆ. ಭ್ರಷ್ಟಾಚಾರ ಈ ಆಡಳಿತದ ಒಂದು ಮುಖ್ಯ ಲಕ್ಷಣವಾಗಿದೆ." ಎಂದು ಮನವಿ ಪತ್ರದಲ್ಲಿ ಹೇಳಲಾಗಿತ್ತು.

ಸ್ಥಾಪಿತ ಹಿತಾಸಕ್ತರು, ಶ್ರೀಮಂತ ಕೈಗಾರಿಕೋದ್ಯಮಿಗಳು ಮತ್ತು ಕೆಲವು ಮಂತ್ರಿಗಳಿಗೆ ಅಪ್ತರಾದ ವ್ಯಕ್ತಿಗಳಿಗಷ್ಟೆ ಈ ಸರಕಾರದಿಂದ ಅನುಕೂಲವಾಗುತ್ತಿದೆ ಎಂದು ಪೀಠಿಕೆಯಲ್ಲೇ ವಿವರಿಸಿದ್ದೆವು.

"ಯಾವುದೇ ಆಶಾಭಾವ ಉಳಿದಿಲ್ಲವಾದ್ದರಿಂದ ಜನರು ಇನ್ನಷ್ಟು ಕಾಲ ಇದನ್ನು ಸಹಿಸಿಕೊಳ್ಳುವುದಿಲ್ಲ... ಅಂತಿಮವಾಗಿ ತಮ್ಮ ಮೇಲಿನ ಹೊರೆಯನ್ನು ತೆಗೆದು ಹಾಕುವ ಪಾತ್ರವನ್ನು ಜನರೇ ನಿರ್ವಹಿಸುತ್ತಾರೆ ಹಾಗೂ ಸ್ವಾತಂತ್ರ್ಯವನ್ನು ಪಡೆಯುತ್ತಾರೆ" ಎಂದು ಎಚ್ಚರಿಸಲಾಯಿತು.

"ಪಶ್ಚಿಮ ಬಂಗಾಳದ ದಿಟ್ಟ ಹಾಗೂ ದೇಶಪ್ರೇಮಿ ಜನರು ಆ ದಿಕ್ಕಿನತ್ತ ಸಾಗುತ್ತಿದ್ದಾರೆ ಎನ್ನುವುದನ್ನು ಹಿಂದಿನ ಎರಡು ಸಾರ್ವತ್ರಿಕ ಚುನಾವಣೆಗಳು ಸಾಬೀತು ಪಡಿಸಿವೆ. ಎಲ್ಲಾ ರಾಜ್ಯಗಳಲ್ಲಿ ಉತ್ತಮ ಆಡಳಿತವನ್ನು ಖಾತರಿಪಡಿಸುವ ಒಂದು ನಿರ್ದಿಷ್ಟ ಗೌರವಾನ್ವಿತ ಹೊಣೆಗಾರಿಕೆ ನಿಮಗಿದೆ ಎಂದು ಸಂವಿಧಾನ ಹೇಳುತ್ತದೆ. ಇದಲ್ಲದೆ, ನಮ್ಮಂಥ ಲಿಖಿತ ಸಂವಿಧಾನದಲ್ಲಿ ಕಾನೂನನ್ನು ಅದರ ಆಶಯದೊಂದಿಗೆ ವಿಶ್ಲೇಷಿಸುವುದರ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಎಂಬ ನಮ್ಮ ನಿಲುವನ್ನು ತಾವು ಒಪ್ಪುತ್ತೀರೆಂಬ ವಿಶ್ವಾಸ ನಮಗಿದೆ ಈ ವಿಚಾರದಲ್ಲಿ ಮತ್ತು ದೇಶ ಜನತೆ ಅಂತಿಮ ತೀರ್ಪುದಾರರು. ಪಶ್ಚಿಮ ಬಂಗಾಳ ಸರಕಾರ ಜನರನ್ನು ಬಿಡಿ; ಸಂವಿಧಾನದ ವಿಚಾರದಲ್ಲಿ ತನ್ನ ಹೊಣೆಗಾರಿಕೆಯನ್ನು ನಿಭಾಯಿಸಲೂ ವಿಫಲವಾಗಿದೆ." ಎಂದು ಅರ್ಜಿಯಲ್ಲಿ ಹೇಳಿದೆವು.

1948 ಮತ್ತು 1959ರ ನಡುವಿನ ಅವಧಿಯ ಘಟನಾವಳಿಗಳನ್ನು ಆಧಾರವಾಗಿಟ್ಟು ನಾವು 14 ಅಂಶಗಳ ಈ ಮನವಿ ಪತ್ರವನ್ನು ಸಿದ್ಧಪಡಿಸಿದ್ದೆವು. ಇದಕ್ಕೆ ಕಾರಣ ಸ್ಪಷ್ಟವಾಗಿತ್ತು. ಆ ಇಡೀ ಅವಧಿಯಲ್ಲಿ ಡಾ. ರಾಯ್ ನೇತೃತ್ವದ ಕಾಂಗ್ರೆಸ್ ಸರಕಾರ ರಾಜ್ಯದ ಆಡಳಿತ ನಡೆಸಿತ್ತು. ಈಗ ಮಂತ್ರಿಗಳಾಗಿದ್ದವರು ಹಿಂದಿನ ಸರಕಾರಗಳಲ್ಲೂ ಸಚಿವರಾಗಿದ್ದರು. ಅವರಲ್ಲಿ ಬಹುತೇಕ ಮಂದಿ ಸ್ವಾರ್ಥಿಗಳಾಗಿದ್ದರು. ತಮ್ಮದೇ ಐಶಾರಾಮದ ಸಾಮ್ರಾಜ್ಯ ಕಟ್ಟಲು ತೊಡಗಿದ್ದರು. ಇಡೀ ಸರಕಾರ ಸಂಪೂರ್ಣವಾಗಿ ಜನತೆಯಿಂದ ಪ್ರತ್ಯೇಕಗೊಂಡಿತ್ತು.

"ನಮ್ಮ ಪ್ರಜಾಪ್ರಭುತ್ವದ ರಾಷ್ಟ್ರಪತಿಯಾಗಿ ಈ ದೂರುಗಳಿಗೆ ನೀವು ಗಮನ ನೀಡುತ್ತೀರಿ ಎಂಬ ಆಶಯ ನಮ್ಮದು" ಎಂದು ನಾವು ರಾಷ್ಟ್ರಪತಿಯವರನ್ನು ಭಿನ್ನವಿಸಿಕೊಂಡೆವು.

ಮನವಿ ಪತ್ರವನ್ನು ಇಂಗ್ಲೀಷ್ ಬಂಗಾಳಿ, ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಪ್ರಕಟಿಸಿ ಇತರ ರಾಜ್ಯಗಳಿಗೆ ಕಳಿಸಿದೆವು. ಅನೇಕ ರಾಜ್ಯಗಳಲ್ಲಿ ಇದರಿಂದ ಪ್ರಕ್ಷೋಭೆಯೇ ಉಂಟಾಯಿತು. ಈ ಮನವಿ ಪತ್ರ ಜನ ಸಾಮಾನ್ಯರನ್ನು ತಲುಪದಂತೆ ಮಾಡಲು ಕಾಂಗ್ರೆಸ್ ಸರಕಾರ ಹರಸಾಹಸ ನಡೆಸಿತು. ಆದರೆ ಆ ಯತ್ನದಲ್ಲಿ ದಯನೀಯವಾಗಿ ಸೋತಿತು. ಕೊನೆಯದಾಗಿ, ಯಾರ ವಿರುದ್ಧ ನಾವು ಆರೋಪ ಹೊರಿಸಿದ್ದೇವೆ ಅವರಲ್ಲಿ ಕೆಲವರು ನಮ್ಮ ರಾಜ್ಯಮಂಡಳಿಯ ಕೆಲವು ಮುಖಂಡರ ವಿರುದ್ಧ ಮತ್ತು ಸ್ವಾಧೀನತಾ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದರು ಅನಂತರ ಅವೆಲ್ಲಾ ದಾವೆಗಳನ್ನು ವಾಪಸ್ ಪಡೆಯಲಾಯಿತು.


(ಜನತೆಯ ಆಕ್ರೋಶದ ಹೊಳೆಗೆ ಕಟ್ಟೆ ಕಟ್ಟುವ ದೂರ್ತ ಯತ್ನ..... ಮುಂದಿನ ಸಂಚಿಕೆಯಲ್ಲಿ).

ಕಳಪೆ ಗೊಬ್ಬರದ ಕರ್ಮಕಾಂಡ

ನೀಲಾ.ಕೆ

ಗುಲಬರ್ಗಾ ಜಿಲ್ಲೆಯ ತೊಗರಿ ಕಣಜಕ್ಕೆ ಪ್ರತಿ ವರ್ಷವೂ. ನೂರೆಂಟು ವಿಘ್ನಗಳು. ಈ ಜಿಲ್ಲೆಯ ರೈತರ ಆಸೆಯ ಕುಡಿ ತೊಗರಿ ಒಂದೇ ಬೆಳೆ ಕೆಲವು ವರ್ಷಗಳ ಹಿಂದೆ ಸೂರ್ಯಪಾನ ಹೊಲಗಳಲ್ಲಿ ತಲೆ ಎತ್ತಿ ಸಿಲ್ಲುಕಿತ್ತು. ಆದರೆ ವಿದೇಶಿ ಸಗಣಿಯನ್ನು ಮೋಹಿಸುವ ಸ್ವದೇಶಿ ಕೇಂದ್ರ ಸರಕಾರವು ಪಾಮೋಲಿನ್ ಎಣ್ಣೆಯನ್ನು ಆಮದು ಮಾಡಿಕೊಂಡಾಗಿನಿಂದ "ಸೂರ್ಯಪಾನ" ದೀಪ ಹಚ್ಚಿ ಹುಡುಕಿದರೂ ಕಾಣದಂತಾಗಿದೆ. ಅಫಜಲಪೂರ ಮತ್ತು ಆಳಂದ ತಾಲ್ಲೂಕುಗಳಲ್ಲಿ ರೈತರು ಕಬ್ಬು ಬೆಳೆದು ಲಾಭ ಮಾಡುವ ಸಕ್ಕರೆಯಂತಹ ಕನಸು ಕಂಡಿದ್ದರು. ಆದರೆ ಸುಭಾಷ ಗುತ್ತೇದಾರ ಮತ್ತು ಅವನಂಥ ಸಕ್ಕರೆ ಕಾರ್ಖಾನೆ ಮಾಲಿಕರು ಹಗಲು ಹೊತ್ತಿನಲ್ಲಿಯೇ ಕೈಕೊಟ್ಟಿರುವುದರಿಂದ (ಹಿಂಗಿನ ಬಾಕಿ ಕೊಡದೇ ಬೆಳೆದ ಕಬ್ಬು ಕೊಂಡು ಕಾರ್ಖಾನೆಯಲ್ಲಿ ಅರೆಯದೇ) ಮುಗಿಲೆತ್ತರಕ್ಕೆ ಬೆಳೆದು ನಿಂತ ಕಬ್ಬಿಗೆ ಬೆಂಕಿ ಇಡುವುದು ಬಿಟ್ಟರೆ ಒಕ್ಕಲಿಗನಿಗೆ ಬೇರೆ ದಾರಿಯೇ ಇರಲಿಲ್ಲ. ಅತ್ತ ಕೇಂದ್ರ ಸರಕಾರದ ದಣಿಗಳು ರಾಶಿ ರಾಶಿ ಸಕ್ಕರೆ ಪಾಕಿಸ್ತಾನದಿಂದ ತರಿಸಿಕೊಳ್ಳುತ್ತಿದ್ದಂತೆಯೇ ಇತ್ತ ಬೆಲೆಸಿಗದೇ ಒದ್ದಾಡುವ ರೈತನಿಗೆ ಕಬ್ಬು ಬೆಳೆವುದೆಂದರೇ ಎದೆ ಒಡೆದು ಹೋಗುತ್ತಿದೆ. ಕೈಯಾರೇ ಬೆಳೆಸಿ. ಕೈಯಾರೇ ಬೆಂಕಿ ಹಚ್ಚಿ ತನ್ನ ಕಣ್ಣಿಂದಲೇ ನೋಡಬೇಕಾದ ಪ್ರಸಂಗದಿಂದ ಕಬ್ಬು ಬೆಳೆಗಾರನ ಕರಳು ವಿಲಿ ವಿಲಿ ಒದ್ದಾಡಿದೆ. ಈ ಬಾರಿ ಒಕ್ಕಲಿಗ ಕಬ್ಬು ಬೆಳೆಯದೇ ಕೈ ಚಲ್ಲಿದ್ದಾನೆ. ಇನ್ನು ಉಳಿದಿದ್ದೇನು....? ಜೋಳ. ಅದಕ್ಕೂ ಸರಿಯಾದ ಬೆಲೆ ಸಿಗಲಿಲ್ಲ. ಕ್ವಿಂಟಾಲಿಗೆ ಐನೂರು ಆರನೂರು ಯಾವ ಲೆಕ್ಕ....? ಎದೆ ಮಟ್ಟ ಬಂದ ಸಾಲದ ಹೊರೆ ಒಕ್ಕಲಿಗನಿಗೆ ಭಯದ ಗುಡ್ಡೆ ಒಡ್ಡಿದೆ. ಒದುಕಿನ ಭವಿಷ್ಯವು ಭಯಾನಕವಾದ ಚಿತ್ತಾರ ತೋರುತ್ತಿದೆ.

ಜಗದ ಚರಾಚರ ಜೀವಿಗಳಿಗೆ ಅನ್ನ ಸಂತರ್ಪಣೆ ಮಾಡುವ ಒಕ್ಕಲಿಗನಿಗೆ ಕಾಡುವ ವಿಘ್ನಗಳು. ಒಂದೇ ಎರಡೇ... ನೂರೆಂಟು. ಒಂದೆಡೆ ವಿಶ್ವ ವಾಣಿಜ್ಯ ಸಂಸ್ಥೆ ಮತ್ತೊಂದೆಡೆ ವಿಶ್ವ ಬ್ಯಾಂಕು IMF ಗಳು ಇಡಿ ಇಡಿಯಾಗಿ ನೇಗಿಲು ನುಂಗುವ ಹುನ್ನಾರ ದಲ್ಲಿವೆ. ಕೇಂದ್ರ ಸರಕಾರದ ಆಮದು ನೀತಿ ಎಂಬ ಬ್ರಹ್ಮ ರಾಕ್ಷಸನಂತೂ ಸಾವಿನ ಸೂತ್ರ ಪಠಿಸುತ್ತಲೇ ಇದೆ. ಈ ಕತ್ಯಗಳನ್ನೆಲ್ಲಾ ಎದುರಿಸಲು ಸಜ್ಜಾಗುತ್ತಿದ್ದಂತೆಯೇ ಮಿನಿ ಕತ್ಯಗಳಿಗೆ ಸರಕಾರದ ಆರ್ಶಿವಾದ ಮತ್ತು ಸರಕಾರಿ ಯಂತ್ರಗಳ ಸಹಾಯ ಹಸ್ತ ಇದೆ. ಆದರೆ ಕಿಸಾನ ಸಭಾದ ರೈತರು ಸವಾಲಿಗೆ ಪ್ರತಿ ಸವಾಲು ಒಡ್ಡಿರುವ ರಣ/ ಪ್ರಕರಣವೊಂದು ಕಲ್ಬುರ್ಗಿ ಜಿಲ್ಲೆಯಲ್ಲಿ ನಡೆದಿದೆ.



ಘಸಲು ಫೈದುಂಬಿ ಬೆಳೆಯಲು ಉತ್ತಮ ಇಳುವರಿ ಬರಲು ಒಕ್ಕಲಿಗನು ಹಿಂದೆ ತಿಪ್ಪೆಗೊಬ್ಬರವ ಜೊತೆಗೆ ಆಧುನಿಕ ರಸಾಯನಿಕಗಳನ್ನು ಚಲ್ಲಬೇಕಾಗಿದೆ. ಅಂಥವುಗಳಲ್ಲಿ ಫ್ಯಾಕ್ಟ D.A.P ಕಂಪನಿಯ ಗೊಬ್ಬರವು ಉತ್ತಮ ಗೊಬ್ಬರ ವಿರುವುದರಿಂದ ಅದಕ್ಕೆ ಬೇಡಿಕೆಯುಲ್ಲಿ ಇದೆ. ಆದರೆ ಈ ವರ್ಷ FAVT DAP ಕಂಪನಿಯು ಗೊಬ್ಬರ ವಿತರಿಸಲಿಲ್ಲ ಇದು ಯಾವ ರೈತನಿಗೂ ಗೊತ್ತಿಲ್ಲ.

ಇದೇ ಸುಸಂದರ್ಭದ ಲಾಭ ಪಡೆಯಲೆಂದೇ ಪ್ರತಿ ವರ್ಷವು ಮೋಸದ ವ್ಯಾಪಾರಿಗಳು ದಂಡು ಸಿದ್ದವಾಗಿ ನಿಂತಿರುತ್ತದೆ. ಮೂರು ವರ್ಷದ ಹಿಂದೆ ಕಳಪೆ ಗೊಬ್ಬರ ಮತ್ತು ಕ್ರಿಮಿನಾಶಕ ದಿಂದಲೇ "ತೊಗರಿ' ನಾಶವಾಗಿದ್ದು ಎಲ್ಲರಿಗೂ ನೆನಪಿದೆ. ತೊಗರಿ ಮಾತ್ರ ಅಲ್ಲ ತೊಗರಿ ಬೆಳೆದ ರೈತರು ಸಾಲದಿಂದ ತತ್ತರಿಸಿ ಸಾವಿನ ಶೂಲವಿರಿದ್ದು ಇಂತಹ ಮೋಸಗಾರರಿಂದಲೇ ಈ ವರ್ಷವೂ ಜಿಲ್ಲೆಯ ದ್ಯಂತ ಮತ್ತೆ ಕಳಪೆ ಗೊಬ್ಬರ ಮಾರಾಟ ವ್ಯಾಪಕ ವಾಗಿಯೇ ನಡೆಯಿತು. ಪ್ರಾಂತ ರೈತ ಸಂಘದ ಕಾರ್ಯಕರ್ತರು ಅಲ್ಲಲ್ಲಿ ದೂರು ಕೊಡತೊಡಗಿದರು ಗುಲಬರ್ಗಾ ತಾಲ್ಲೂಕಿನ ಏಕಳಿ ಎಂಬ ಗ್ರಾಮದ "ವಿಜಯ ಕುಮಾರ ಎರಬಾಗಿ" ಎಂಬ ಯುವಕನು ಪ್ರಾಂತ ರೈತ ಸಂಘಕ್ಕೆ ದೂರುಕೊಟ್ಟನು. ಕೆಪಿಆರ್‌ಎಸ್ ನಿಂದ ದಿ: 7-7-2000 ರಂದು ಮಹಾಗಾಂವ Police ಠಾಣೆಗೆ ದೂರು ಕೊಡಲಾಯಿತು. 420 ಕಲಂ ಕೇಸು ಆಗಿ ಕಳಪೆ ಹೊಬ್ಬರ ಮಾರಾಟ ಮಾಡಿದ ಶಂಕರ ಮತ್ತು ಅಮೃತ ಎಂಬುವವರನ್ನು ಬಂಧಿಸಿ 15 ದಿವಸ ಜೈಲಿಗೆ ಕಳಿಸಲಾಯಿತು. ಗೊಬ್ಬರದ ಸ್ಯಾಂಪಲ್ಲು ಸಂಗ್ರಹಿಸಿ ಬೆಂಗಳೂರು ಲ್ಯಾಬೋರೇಟರಿಗೆ ಕಳಿಸಿ ಪರಿಕ್ಷಿಸಿದ ಮೇಲೆ. ಬಂದ ವರದಿಯು "ಗೊಬ್ಬರ ಕಳಪೆ ಎಂದು ಸಾಬಿತು ಆಯಿತು. ಕಳಪೆ ಗೊಬ್ಬರ.....? ಹೌದು. ಇದು ಕಳಪೆ ಮಾತ್ರ ಅಲ್ಲ. ನಕಲಿ ಗೊಬ್ಬರ ಹಾಗೆಂದರೇನು? Raet Dap ಗೊಬ್ಬರದಲ್ಲಿ 46 6% ರಂಜಕ ಇರುತ್ತದೆ ಸುಪರ್ ಫಾಸ್ಪೇಟ್/ ಅಂತ ಇನ್ನೊಂದು ಗೊಬ್ಬರವೂ ಇದೆ. ಇದರಲ್ಲಿ 16% ರಂಜಕ ಮಾತ್ರ ಇದ್ದು ಸಾರಜನಕ ಇರುವುದಿಲ್ಲ. Faet DAP ಬೆಲೆಯ 445 ಸುಪರ್ ಬೆಲೆ 150 ರೂ- ಈಗ ಮೋಸಗಾರ ವ್ಯಾಪಾರಿಯು ಮೋಸ ಮಾಡುವುದು ಹೇಗೆ ಸುಪರ ಫ್ಯಾಸೇಟ್ ಗೊಬ್ಬರವನ್ನು Fact Dap ಹೆಸರಿನ ಬ್ಯಾಗ್‌ನಲ್ಲಿ ತುಂಬಿ 445/- ರೂ ನಂತೆ ಮಾರಾಟ ಮಾಡುವುದು ಬೆಲೆ ಹೆಚ್ಚಿದರೂ ತೊಗರಿ ಬೆಳೆಗೆ ಅವಶ್ಯವಾದ ಗೊಬ್ಬರವಾದ್ದರಿಂದ Fact Dap ಗೆ ಬೇಡಿಕೆ ಇದೆ. ಮಾರುಕಟ್ಟೆಗೆ ಬಂದ ಒಕ್ಕಲಿಗ ಸಾಲ ಮಾಡಿ ತಂದ ರೊಕ್ಕವನ್ನು ಕೊಟ್ಟು Fact Dap ಯ ಹೆಸರುಳ್ಳ ನಕಲಿ ಗೊಬ್ಬರ ಖರೀದಿಸುವನು ಒಂದು ಚೀಲದ ಹಿಂದೆ 300 ರೂ ಮೋಸ ರೈತನಿಗೆ. ಅನೇಕ ಗ್ರಾಮಗಳಲ್ಲಿ ಸಟ್ಟಾ ಮತ್ತು ಚಿಲ್ಲರೆ ವ್ಯಾಪಾರಿಗಳ ಪರವಾನಿಗೆ ಇಲ್ಲದ ಬೇನಾಮಿ ಏಜೆಂಟರು ಈ ದಂಧೆಯನ್ನು ಸುಲಲಿತವಾಗಿ ನಡೆಸಿಕೊಂಡು ಬಂದಿದ್ದಾರೆ ಮಾತ್ರವಲ್ಲ ಪರವಾನಿಗೆ ಇರುವ ದೊಡ್ಡ ದೊಡ್ಡ ವ್ಯಾಪಾರಿಗಳೂ ನಿರ್ಭಯವಾಗಿ ಈ ರೈತ ವಿರೋಧಿ ಕಾಯಕ ಮಾಡುತ್ತಿದ್ದಾರೆ.

ನಕಲಿ ವಿರುದ್ಧ ನಿರಂತರ ಹೋರಾಟಗಳು

ಹೀಗೆ ನಕಲಿ ಗೊಬ್ಬರ ಜಿಲ್ಲೆ ಯಾದ್ಯಂತ ರೈತರ ಹೊಲದಲ್ಲಿ ಬೀಳತೊಡಗಿತು. ಬೆಲೆಯ ಬಣ್ಣ ಬದಲಾಗತೊಡಗಿತು. ರೈತರು ಅನುಮಾನದ ರೂಡಾದರು. ಗೊಬ್ಬರ 'ನಕಲಿ ಎಂಬುದು ಅನುಭವಿಯ ತಲೆಗೆ ಬರತೊಡಗಿತು. ಕೆರಳಿದ ರೈತರು 10-7-2000 ದಂದು ಕೆಪಿ ಆರ್‌ಎಸ್ ನೇತೃತ್ವದಲ್ಲಿ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿದರು ನಕಲಿ ಗೊಬ್ಬರ ಜಾಲದ ಮೂಲ ಪತ್ತೆ ಹಚ್ಚ ಬೇಕು. ಮತ್ತು ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿದರು. ಸರಕಾರಿ ಅಧಿಕಾರಿಗಳು ಬೂರ್ಜ್ವಾ ರಾಜಕಾರಣಿಯಂತೆ ಭರವಸೆ ಇತ್ತರೇ ವಿನಃ ಕ್ರಮ ಕೈಗೊಳ್ಳಲಿಲ್ಲ. ಆದರೆ ರೈತರೂ ಬಿಡಲಿಲ್ಲ, 19-7-2000 ದಂದು ಕಮಲಾಪೂರದಲ್ಲಿ ಕೆ.ಪಿ.ಆರ್.ಎಸ್. ನಿಂದ ರಸ್ತೆ ತಡೆ ಮಾಡಿದರು. ಈ ರೈತರು ಬೆನ್ನು ಬಿಡಲಾರರೆಂದು ಅರೀತು ಅಧಿಕಾರಿಗಳು ಕಳಪೆ (ನಕಲಿ) ಗೊಬ್ಬರ ತನಿಖೆಗೆ 13 ತಂಡಗಳನ್ನು ರಚಿಸಿದರು. ಅನೇಕ ಅಂಗಡಿಗಳ ಮೇಲೆ ಕೇಸುಗಳನ್ನು ದಾಖಲಿಸುವ ಕ್ರಮ ಮಾಡಿದರು ಆದರೆ ಮೂಲ ಜಾಲದ ರೂವಾರಿಗೆ ಕೆಣಕಲಿಲ್ಲ. ಜಿಲ್ಲೆಯಲ್ಲಿ ರೊಕ್ಕ ಸಾರಾಯಿ ಸುರಿದು ಆರಿಸಿ ಬಂದ ಜಿ. ಪಂಚಾಯತ್ ಸದಸ್ಯರುಗಳ ಮೊದಲ ಸಭೆ 7.8.2000 ದಂದು ನಡೆಯುವಾಗಲೇ ನೂರಾರು ರೈತರು. ನಕಲಿ ಗೊಬ್ಬರ ದ ಪತ್ತೆಗೆ ಆಗ್ರಹಿಸಿ ಘೇರಾವ್ ಮಾಡಿದರು. ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಅಲ್ಲಂ ಪ್ರಭು ಪಾಟೀಲಗಳೂ ಆಶ್ವಾಸನೆ ನೀಡಿದರು. ಹೀಗೆ ದಿಢೀರೆಂದು ಹಣ ಕೂಡುವ ದಣಿಗಳನ್ನೇ ಹಿಡಿಯುವ ಪ್ರಸಂಗ ಬಂದಿರುವುದಕ್ಕೆ ತೋಚದಾದರು. ಕೈ ಚೆಲ್ಲಿ ಮನವಿ ಪತ್ರ ಪಕ್ಕಕಿಟ್ಟರು.



ನೂರಾರು ಟನ್ ಗೊಬ್ಬರವನ್ನು ನೆಲದಲ್ಲಿ ಹೂತಿಟ್ಟಿರುವುದು

ಜಿಲ್ಲೆಯಲ್ಲಿ ಆರು ಜನ ಮಿನಿಸ್ಟರುಗಳು ಒಬ್ಬರಂತು ಗ್ರಹ ಮಂತ್ರಿಗಳು. ಕಲ್ಬುರ್ಗಿ ಸೌಭಾಗ್ಯಕ್ಕೇನು ಕೊರತೆ? ಪ್ರಾಂತ ರೈತ ಸಂಘವು ಮನವಿ ಪತ್ರವೊಂದನ್ನು ಬರೆದು ನಕಲಿ ಗೊಬ್ಬರ ತಡೆಗಟ್ಟಿ ಒಕ್ಕಲಿಗನಿಗೆ ಉಳಿಸಿ ಎಂದು ಹೇಳಿದರು. ಪಾಪ ಶ್ರೀಮಾನ್ ಖರ್ಗೆಯವರಿಗೂ ನಕಲಿ ಗೊಬ್ಬರ ಮೂಲ ಪುರುಷನಿಗೂ ಎತ್ತಣಿಂದೆತ್ತ ಸಂಭಂದವೋ ಕಾಣೆವು... ಹೊಟ್ಟೆಗೆ ಅನ್ನವನ್ನೇ ಉಣ್ಣುವ ಮಲ್ಲಿಕಾರ್ಜುನ ಖರ್ಗೆಯವರು ಮಾತ್ರ ಅನ್ನದಾತ'ನ ಸಂಕಷ್ಟವನ್ನು ಕಣ್ಣೆತ್ತಿಯೂ ನೋಡಲಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘವು ಮಾತ್ರ ಹೇಗಾದರೂ ಮಾಡಿ ಈ ನಕಲಿ ಗೊಬ್ಬರದ ವಿಷ ವೃತ್ತದಿಂದ ರೈತನಿಗೆ ಬಿಡಿಸಬೇಕೆಂದು ಚಿಂತಿಸತೊಡಗಿತು. ಜಿಲ್ಲೆಯ ಪೋಲಿಸ್ ಸೂಪರಿಂಟೆಂಡೆಟ್ ಪ್ರಾತಾಪ ರೆಡ್ಡಿ ಯವರೂ ಕೂಡ ಕ್ರಮ ತಗೋಳ್ಳಿ ಸರ್... ಅಂದರೆ ಸಾಕ್ಷಿ ಬೇಕ್ರಿ" ಎಂದು ನಾಟಕವಾಡ ತೊಡಗಿದರು. ಒಂದೆಡೆ ಪ್ರಾಂತ ರೈತ ಸಂಘವು ರೈತರ ರಕ್ಷಣೆಗೆ ಅನವರತ ಶ್ರಮಿಸುತ್ತಿದ್ದರೆ ಮತ್ತೊಂದೆಡೆ ಜಮೀನ್ದಾರಿ ಬಂಡವಾಳಶಾಹಿಗಳು ಹೇಗಾದರೂ ಮಾಡಿ ಪ್ರಾಂತ ರೈತ ಸಂಘದವರ ಕಾರ್ಯವನ್ನು ಹಿಮ್ಮೆಟ್ಟಿಸುವ ಕುತಂತ್ರ ಹುಡುಕುತ್ತಿದ್ದರು ಬಾಲ ಸುಟ್ಟ ಬೆಕ್ಕಿನಂತೆ ಸುಳ್ಳು ಆಪಾದನೆಗಳನ್ನು ಹರಿಯ ಬಿಡುತ್ತಿದ್ದರು.

ರೆಡ್‌ಹಾಂಡ್ ಆಗಿ ಸಿಕ್ಕರು ರೈತ ದ್ರೋಹಿಗಳು

ಅತ್ತ ಓಟು ಪಡೆದು ಆರಿಸಿ ಹೋದ ಜನ ಪ್ರತಿನಿಧಿಗಳು ಬಾಯಿ ಮುಚ್ಚಿ ಕೊಂಡಿರುವಾಗ ಇತ್ತ ಸರಕಾರಿ ಅಧಿಕಾರಿಗಳು (ಪೋಲಿಸ್ ಮತ್ತು ಕೃಷಿ ಇಲಾಖೆ) ಬೆಣ್ಣೆ ತಿಂದ ಬೆಕ್ಕಿನಂತಿರುವಾಗ ಬಂದುದಿನ (16-8-2000 ರಂದು) ಪ್ರಾಂತ ರೈತ ಸಂಘದ ಕಛೇರಿಗೆ ಸಂಘದ ಹಿತೈಷಿಯೊಬ್ಬರು ಫೋನ್ ಮಾಡಿದರು. ಯುರೇಕಾ.... ರೈತ ಸಂಘದ ಮುಖಂಡರಾದ ವಿರುಪಾಕ್ಷಪ್ಪ 20 ಕಿ.ಮಿ. ದೂರದ ನಿಪ್ಪಾಣಿ ಎಂಬ ಗ್ರಾಮಕ್ಕೆ ಕೃಷಿ ಅಧಿಕಾರಿಗಳನ್ನು ಎಳೆದುಕೊಂಡು ರೌಡಾಯಿಸಿದರು ಅಲ್ಲೊಂದು ತೋಟ ತೋಟದಲ್ಲೊಂದು ಮನೆ ಕಿಟಕಿಯಿಂದ ಇಣುಕಿದರೆ Fact Dap ಭ್ಯಾಂಡಿನ ಗೊಬ್ಬರದ ಚೀಲಗಳು ಅನತಿ ದೂರದಲ್ಲಿ ಭವಾನಿ ಗುರುತಿನ ಚೀಲಗಳನ್ನು ಹೊರತೆಗೆಯಲು ಕೃಷಿ ಅಧಿಕಾರಿ ಮುಂದಾಗಲಿಲ್ಲ ಆ ತೋಟವು ಶರಣ ಬಸವರ ತಂದೆ ಬಸವರಾಜ ಬಿರಾದಾರ ಎಂಬ ಸಹುಕಾರನದ್ದು ಅರ್ಥಾತ್ ನಿಪ್ಪಾಣಿ ಅಗ್ರೋ ಏಜನ್ಸಿಯ ವರದ್ದು ಸಂಬಂಧದ ಕೊಂಡಿ ಸೇರತೊಡಗಿತು. ಹಿಂದೆ ನಕಲಿ ಗೊಬ್ಬರ ಮಾರಿದ ಆಗ್ರೋ ಏಜನ್ಸಿ. ಮಾಲಿಕನೇ ಈತನಾಗಿದ್ದನು. ಹೊಲದ ಮಾಲಿಕನಿಗೆ ಕರೆಯಲು ಸರಕಾರಿ ಜೀಪ್ ಧಾವಿಸಿತು. ಮಾಲಿಕ ಬರಲಿಲ್ಲ. ಜಂಟಿ ಕೃಷಿ ಅಧಿಕಾರಿಗಳು ಪೋಲಿಸರಿಗೆ ಫೋನು ಮಾಡಿ ಬರುವ ನೆಪದಲ್ಲಿ ರಾತ್ರಿ ಕಲ್ಬುರ್ಗಿಗೆ ವಾಪಸ್ಸಾದರು. ಮಧ್ಯರಾತ್ರಿಯ ವರೆಗೂ ಆ ಹೊಲದ ಕಡೆಗೆ ಹಾಯಲಿಲ್ಲ. ವಿರುಪಾಕ್ಷಪ್ಪ ಮತ್ತು ಇಲಾಖೆಯ ಒಬ್ಬ ಸಿಬ್ಬಂದಿ ಗುಡಿಯಲ್ಲಿಯೇ ಕಾದುಕುಳಿತರು.

ಪುಟ 10 ಕ್ಕೆ


ಮಣ್ಣಿನಿಂದ ಹೂತಿಟ್ಟ ಗೊಬ್ಬರವನ್ನು ಹೊರತೆಗೆಯುತ್ತಿರುವ ರೈತ ಸಂಘದ ವಿರೂಪಾಕ್ಷಪ್ಪ ಕಡಕಲ್ ಮತ್ತು ರೈತ ಮುಖಂಡ ಮಾರುತಿ ಮಾನಪಡೆ.

ಬೆಳ್ತಂಗಡಿಯ ಎಡ ಚಳುವಳಿಯ ಏಳು ವರ್ಷಗಳು

ಬಿ.ಎಂ.ಭಟ್ - ಎನ್. ಪ್ರಭಾ

ಸೊಬಗು -ಬೆಡಗಿನ, ರಮ್ಯ-ರಮಣೀಯ ವನಸಿರಿಯ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಮಡಿಲಲ್ಲಿ 1992 ರಲ್ಲಿ ಹೊಸಾಗಿ ಉದಯಿಸಿದ ಎಡ ಚಳುವಳಿ ಕುಂಟುತ್ತಾ, ತೆವಳುತ್ತಾ ನಂತರ ಗಟ್ಟಿ ಹೆಜ್ಜೆಗಳನ್ನಿಡುತ್ತಾ ಪ್ರೌಢ ಬೆಳವಣಿಗೆಯನ್ನು ಕಾಣುತ್ತಿದೆ.

ಎಚ್ಚೆತ್ತ ರೈತರು, ಕಾರ್ಮಿಕರು, ಯುವಜನರು, ಮಹಿಳೆಯರು ತಮ್ಮದೇ ವಿಭಾಗದ ಸಮಸ್ಯೆಗಳನ್ನಾಧರಿಸಿ ಸಂಘಟನೆಗಳನ್ನು ಕಟ್ಟುವ ಮೂಲಕ ತಾಲ್ಲೂಕಿನ ಜನ-ಮನವನ್ನು ತಲುಪುತ್ತಿದ್ದಾರೆ. ಈ ವರೆಗೆ ಗಮನೀಯವಾದ ಹಲವಾರು ಹೋರಾಟಗಳನ್ನು ನಡೆಸುವ ಮೂಲಕ ಗಣನೀಯ ಯಶಸ್ಸನ್ನು ಸಾಧಿಸತೊಡಗಿದ್ದಾರೆ.

ಎರಡು ಸಾವಿರ ಸದಸ್ಯತ್ವವನ್ನು ಹೊಂದಿರುವ ರೈತ ಸಂಘವು 9 ಗ್ರಾಮ ಶಾಖೆಗಳನ್ನು, 7 ಗ್ರಾಮಗಳಲ್ಲಿ ಸಂಪರ್ಕವನ್ನು, ಬೆಳ್ತಂಗಡಿಯ ತಾಲ್ಲೂಕು ಸಮಿತಿಯನ್ನು ಹೊಂದಿದೆ. ರೈತರ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ ಕೊಟ್ಟಿದೆ.

1993 ರಲ್ಲಿ ರೈತ -ಕಾರ್ಮಿಕರ ಜಂಟಿ ಸಮಾವೇಶದಲ್ಲಿ ಮೂಡಿಬಂದ ರೈತ ಸಂಘವು (ಕೆ.ವಿ. ರಾವ್ ನೇತೃತ್ವದಲ್ಲಿ) ಮಂಜುನಾಥ್



ಮೇ ದಿನದ ಭಾರೀ ಮೆರವಣಿಗೆ

ಸಲಿಮೋನು, ರುಕ್ಮಯ ಭಂಡಾರಿ ಮುಂತಾದವರ ನೆರವಿನೊಂದಿದೆ ದಾಪುಗಾಲನ್ನಿಡುತ್ತಾ ಮುನ್ನಡೆಯುತ್ತಿದೆ. ರೈತ ಸಂಘಟನೆಯನ್ನು ಕಟ್ಟುವಂತೆ ಹುರಿದುಂಬಿಸಿದ ಪ್ರೀತಿಯ ಮಾಸ್ಟ್ರು ಪಿ. ರಾಮಚಂದ್ರರಾವ್, ಕೇರಳದ ನಂಬೀಶನ್, ಜನಾರ್ಧನ ನಾಯಕ್, ಶ್ರೀಯಾನ್ ಮೊದಲಾದವರನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ.

ರೈತರೊಂದಿಗೆ ಕಾರ್ಮಿಕರು

ರೈತ- ಕಾರ್ಮಿಕರ ಸಖ್ಯತೆಯನ್ನು ದೃಢೀಕರಿಸುವಂತೆ 1994 ರಲ್ಲಿ ತಾಲ್ಲೂಕಿನಲ್ಲಿ ಬೀಡಿ ಕಾರ್ಮಿಕರ ನಡುವೆ ಚಳುವಳಿ ಮೊಳಕೆಯೊಡೆಯಿತು. 100 ಸದಸ್ಯತ್ವ ನೊಂದಾಯಿಸಿ ಲ್ಯಾಲ, ನಾವೂರು, ಅತ್ತಾಜೆ, ಕೊಯ್ಯೂರು ಹಾಗೂ ಪಟ್ರಮೆ ಈ ಐದು ಗ್ರಾಮಗಳಲ್ಲಿ ಸಮಿತಿಗಳನ್ನು ರಚಿಸುವ ಮೂಲಕ ಕಾರ್ಮಿಕ ಚಳುವಳಿ ತಾಲ್ಲೂಕಿನಲ್ಲಿ ಉದಯಿಸಿತು. ಈ ಐದು ಗ್ರಾಮ ಸಮಿತಿಗಳ ಸಂಪರ್ಕವನ್ನು ಬಳಸಿ "ಬೆಳ್ತಂಗಡಿ ತಾಲ್ಲೂಕು ಬೀಡಿ ಕೆಲಸಗಾರರ ಸಂಘ" ವನ್ನು ರಚಿಸಲಾಯಿತು. ಬಿ.ಎಂ. ಭಟ್ ಅಧ್ಯಕ್ಷರಾಗಿ, ಮಂಜುನಾಥ್ ಕಾರ್ಯದರ್ಶಿಯಾಗಿ, ಶಿವಕುಮಾರ್ ಕೋಶಾಧಿಕಾರಿಯಾಗಿ ಆಯ್ಕೆಗೊಂಡ ಸಮಿತಿಗೆ 12 ಮಂದಿ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು. ಕೆಲಸಗಾರರ ಸಭೆಗಳು ಬಹಿರಂಗ ಸಭೆ ಮುಂತಾದವನ್ನು ನಡೆಸುವ ಮೂಲಕ ಸಂಘವು ಚುರುಕುಗೊಂಡಿತು. ಈ ಸಂದರ್ಭದಲ್ಲಿ ಸಂಜೀವ ಬಂಗೇರ, ಬಾಲಕೃಷ್ಣ ಶೆಟ್ಟಿ, ಸುಕುಮಾರ್ ಸದಾ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಾ ಮಾರ್ಗದರ್ಶಕರಾಗಿದ್ದರು.

1995 ರಲ್ಲಿ ಪುದುವೆಟ್ಟು, ಪೆರಿಯಡ್ಕ, ಕುತ್ರಿಜಾಲು ಅಳಿಯೂರು ಸಮಿತಿಗಳು ಸೇರ್ಪಡೆಗೊಂಡವು. ಪ್ರಾರಂಭದಲ್ಲಿ ಸದಸ್ಯತ್ವಕ್ಕೆ ಗಮನ ನೀಡದೆ ಸಂಘಟನೆಯ ಪ್ರಜ್ಞೆ ಮೂಡಿಸುವ ಸಲುವಾಗಿ ದುಡಿಯಲಾಯಿತು. "ಬೆಳ್ತಂಗಡಿ ತಾಲ್ಲೂಕಿನ ಎಡ ಚಳುವಳಿಯ ಬೆಳವಣಿಗೆಗೆ ಬೀಡಿ ಕಾರ್ಮಿಕರ ಕೊಡುಗೆ"ಯು ಮುಖ್ಯವಾದುದು ಎನ್ನುವ ಅಂಶವನ್ನು ಗಮನಿಸಬೇಕು. ಮನೆ ಮನೆ ಭೇಟಿ ನೀಡುವಾಗಿನ ಬೈಗುಳ, ಹೀಯಾಳಿಕೆ ಕನಿಷ್ಠ ಹಾಜರಾತಿ ಮುಂತಾದ ಪ್ರಾರಂಭಿಕ ನಿರಾಶೆಗಳನ್ನೆಲ್ಲಾ ಎದೆಗುಂದದೆ ಎದುರಿಸುತ್ತಾ ಮುನ್ನುಗ್ಗಿದ ಕಾರಣದಿಂದಾಗಿ ಇಂದು ಸಂಘಟನೆ ಗುರುತಿಸುವ ಮಟ್ಟಕ್ಕೆ ಬೆಳೆದಿದೆ.

ಹಣ ಮಾಡಲು ಬರುತ್ತಾರೆಂಬ ಟೀಕೆ, ಕಮ್ಯೂನಿಸ್ಟು ಎಂಬ ಮೂದಲಿಕೆ, ಕೇಸುಗಳಿಲ್ಲದ ವಕೀಲರುಗಳ ಸಂಘ ಮತ್ತು ಮೋಸಗಾರರು ಎಂಬ ಪ್ರಚಾರದ ಮಧ್ಯೆ ಗಟ್ಟಿಗೊಂಡ ಕಾರ್ಯಕರ್ತರು ಸಂಘಟನೆಯ ಸಸಿಯನ್ನು ಬಾಡಲು ಬಿಡದೆ ನೀರೆರೆದು ಪೋಷಿಸುತ್ತಾ ಬಂದಿದ್ದಾರೆ.

ಬೆಳೆಯುತ್ತಾ ಬಂದ ಮರ ಫಲ ನೀಡುತ್ತಾ ಬಂತು. ದುಡಿಯು ಜನತೆಗೆ ಆಸರೆ ಸಿಗತೊಡಗಿತು. ನಿಗದಿತ ವೇತನ, ಕಾನೂನು ಬದ್ಧ ಪುಸ್ತಕ, ಬೋನಸ್, ರಜಾಸಂಬಳ, ಹಬ್ಬದ ರಜಾ ಸಂಬಳ ಸಮರ್ಪಕವಾಗಿ ಸಿಗತೊಡಗಿದವು. ಕಮ್ಯುನಿಸ್ಟರು ಎಂದು ಹೆದರಿಸುವಾಗ ಹಿಂದೆ ಸರಿಯುತ್ತಿದ್ದ ಜನ ಸಂಘಟಿತ ಫಲ ಪಡೆದ ನಂತರ ತಾವೇ

"ಕಮ್ಯೂನಿಸ್ಟರು ನಾವು ಎಂದು ಹೆಮ್ಮೆಯಿಂದ ಹೇಳಿಕೊಳ್ಳಲು ಪ್ರಾರಂಭಿಸಿದರು." ನಯವಂಚಕರ ಅಪಪ್ರಚಾರಕ್ಕೆ, ಸುಲಿಗೆಕೋರರ ಸಂಚಿಗೆ ಪ್ರತ್ಯುತ್ತರ ನೀಡಲು ತಯಾರಾದರು.

ಫಲವುಂಡ ಕಾರ್ಮಿಕರು ಸೈದ್ಧಾಂತಿಕ ತಿಳುವಳಿಕೆಯತ್ತ:

ದುಡಿತದ ಫಲ ದುಡಿದವರಿಗೆ ಸಿಗಬೇಕು, ಯಾರದ್ದೋ ದುಡಿಮಗೆ ಯಾರೋ ಒಡೆಯರಾಗಲು ಬಿಡಬಾರದು, ಎಚ್ಚರ ತಪ್ಪಿ ಚಲಾಯಿಸುವ ಮತ ಯಾರನ್ನು ಪೋಷಿಸಬಹುದು? ಮುಂತಾದ ಆಲೋಚನೆಗಳ ಕಡೆಗೆ ಸಂಘಟಿತ ಮನಸ್ಸುಗಳು ತೆರೆದುಕೊಂಡವು. ಬೀಡಿ ಸಂಘಟನೆಯಿರುವ ಪ್ರತಿ ಹಳ್ಳಿಗಳಲ್ಲಿ ರಾಜಕೀಯ ಸೈದ್ಧಾಂತಿಕ ಪಾಠಗಳು ಬಿತ್ತರಗೊಂಡವು.

ಎತ್ತರಿಸಿದ ಕಾರ್ಮಿಕರ ತಿಳುವಳಿಕೆಯಿಂದಾಗಿ ಸಂಘಟನೆಯನ್ನು ಎತ್ತರಕ್ಕೆ ಕೊಂಡೊಯ್ಯಲು ಸಹಕಾರಿಯಾಗುತ್ತಾ ಬಂತು. 94 ರಲ್ಲಿ ನೂರಿದ್ದ ಸದಸ್ಯತ್ವ 2 ವರ್ಷಗಳ ಅವಧಿಯಲ್ಲಿ 215 ಕ್ಕೇರಿತು, 97 ರಲ್ಲಿ 450 ಕ್ಕೆ, 98 ರಲ್ಲಿ 1500 ಕ್ಕೆ ,99 ರಲ್ಲಿ 5004 ಕ್ಕೆ ಏರಿತು. 30 ಸಮಿತಿಗಳಿದ್ದ ಕಡೆ 40 ಸಮಿತಿಗಳು, ಇದೀಗ 90 ಸಮಿತಿಗಳು ಅಸ್ತಿತ್ವಕ್ಕೆ ಬಂದಿವೆ.

ಹೋರಾಟಗಳು-ಎದುರಾಳಿಗಳು:

ಕಾರ್ಮಿಕ ಚಳುವಳಿ ಬೆಳವಣಿಗೆಗೊಂಡು, ರಾಜಕೀಯವಾಗಿ ಪ್ರಬಲವಾಗುವುದನ್ನು ಸಹಿಸದ ಬಲಪಂಥೀಯರಿಂದ ತಡೆ ವಿರೋಧಗಳು ಪ್ರಾರಂಭಗೊಂಡವು. 1998 ರಿಂದೀಚೆಗೆ ಎದುರಾಳಿಗಳ ತಡೆಗೋಡೆಯನ್ನು ದಾಟಬೇಕಾಗಿ ಬಂತು. ಕಾರ್ಮಿಕರಿಗೆ ಬೋನಸ್ ವಿತರಿಸುವಾಗ ಪರಿಶೀಲಿಸುವ ಸಲುವಾಗಿ ಯೂನಿಯನ್ ಸ್ಕ್ವಾಡ್‌ಗಳು ಭೇಟಿನೀಡುತ್ತಿದ್ದವು: ಮೋಸದಿಂದ ವಂಚಿಸುತ್ತಿದ್ದ ಮಾಲೀಕರು, ಕಂಟ್ರಾಕ್ಟದಾರರು ಸ್ಕ್ವಾಡ್‌ಗಳ ಮೇಲೆ ದಾಳಿ ನಡೆಸಿದರು. ವಿಚಲಿತರಾಗದ ಕಾರ್ಯಕರ್ತರು ಮನೆ-ಮನೆ ಭೇಟಿಯನ್ನು ಪ್ರಾರಂಭಿಸಿದರು ಸಂಘ ಬಲಪಡಿಸಲು ಪ್ರೇರೇಪಿಸಿದರು. ಇದರ ಪರಿಣಾಮವಾಗಿ ಮದುವೆಯಾಗಿ ಊರಿಂದೂರಿಗೆ ಹೋಗುವ ಹೆಣ್ಣು ಮಕ್ಕಳು ಗಂಡನ ಮನೆ ಸೇರಿದ ನಂತರ ಆ ಊರಿನಲ್ಲೂ ಸಂಘ ಕಟ್ಟಲು ಪ್ರಾರಂಭ ಮಾಡಿದರು.

ದಮನದಿಂದ ಹಕ್ಕುಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ, ಬದಲಾಗಿ ಹೋರಾಟಗಳು ಗಟ್ಟಿಗೊಳ್ಳುತ್ತವೆಯೆಂಬ ಚಾರಿತ್ರಿಕ ಸತ್ಯ ಇಲ್ಲೂ ಪ್ರತಿಫಲನಗೊಂಡಿತು.

ಮಂಗಳೂರಿನ ಪ್ರಕಾಶ್ ಬೀಡಿ ಡಿಪೋಗೆ ಮುತ್ತಿಗೆ, ಬ್ರಾಂಚುಗಳಲ್ಲಿ ಪ್ರತಿಭಟನೆ, ಬೆಳ್ತಂಗಡಿಯ ದೀಪಕ್ ಬೀಡಿ ಡಿಪೋಗೆ ಮುತ್ತಿಗೆ, ಭಾರತ್ ಬೀಡಿ ಡಿಪೋದಲ್ಲಿ ಧರಣಿ, ಜೆ.ಪಿ ಬೀಡಿ ಕಂಪನಿಯಲ್ಲಿ ಧರಣಿ, ರಸ್ತೆತಡೆ, ಬಂಧನ ಮುಂತಾಗಿ ಉತ್ಸಾಹದ ಹೋರಾಟಗಳು ಮೂಡಿಬಂದವು. ಹೋರಾಟ ಸ್ವಂತ ಸಮಸ್ಯೆಗಳೊಂದಿಗೆ ಮಾತ್ರವೆ ಬೆಸೆದುಕೊಳ್ಳದೆ, ಊರಿನ ನಾಗರಿಕರ ಸಮಸ್ಯೆಗಳ ಜೊತೆ, ರಾಜಕೀಯ ತೀರ್ಮಾನಗಳ ಜೊತೆ ಜನತೆಯ ದೈನಂದಿನ ಬವಣೆಗಳ ಜೊತೆಯೂ ಬೆಸೆದುಕೊಂಡು ಹೋರಾಟದ ಸಂಕೇತವಾದ ಕುಡುಗೋಲು ಸುತ್ತಿಗೆ ಚಿರ-ಪರಿಚಿತವಾಯಿತು.ಒಮ್ಮೆ ಕುಡುಗೋಲು ಸುತ್ತಿಗೆಯ ಕೆಂಬಾವುಟ ಕಂಡ ಒಬ್ಬ ಮಹಿಳೆ ಇದು ನನ್ನ ಬದುಕು ಉಳಿಸಿದ ಚಿನ್ಹೆ ಎಂದು ಬಾವುಟವನ್ನು ಎದೆಗವುಚಿಕೊಂಡ ಪ್ರಸಂಗ ನಮ್ಮ ಕಣ್ಣುಗಳಿಗೆ ಈಗಲೂ ಕಟ್ಟಿದಂತಿದೆ.

ಇನ್ನೊಮ್ಮೆ ಕೊಕ್ಕಡ ಹಾಗೂ ಕಳಂಜೆಯ ಕಾರ್ಮಿಕರನ್ನು ಸೇರಿಸಿ ಸಭೆ ನಡೆಸುವಾಗ, ಆ ಸಭೆಗೆ ಅನಕ್ಷರಸ್ಥ ಮಹಿಳೆಯೊಬ್ಬಳು ಆಗಮಿಸಿ ಮಾತನಾಡುತ್ತಾ "ನನಗೆ ಮದುವೆಯಾಗಿ ಇಪ್ಪತ್ತು ವರ್ಷಗಳು ಸಂದರೂ ಮಕ್ಕಳಿಲ್ಲ. ಮಕ್ಕಳಿಲ್ಲದ ಕೊರಗು ಈ ವರೆಗೆ ನನ್ನನ್ನು ಕಾಡುತ್ತಿತ್ತು .ಆದರೆ ಇನ್ನು ಮುಂದೆ ನನಗೆ ಕೊರಗಿಲ್ಲ ಕಾರಣ ಇನ್ನು ಮುಂದೆ ಈ ಸಂಘವೇ ನನ್ನ ಮಗು" ಎಂದಳು.

ಕಾರ್ಮಿಕರ ಸಂಘಟನೆಗೆ ಪ್ರಚಾರ ಸಿಗತೊಡಗಿತು. ಗ್ರಾಮ ಸಭೆಗಳು ನಿರಂತರ ಸೇರತೊಡಗಿದವು. ಕಾರ್ಮಿಕರ ಮನೆಯಲ್ಲಿ, ಮರದ ಬುಡದಲ್ಲಿ, ಬಯಲಿನಲ್ಲಿ ,ಅಂಗನವಾಡಿ, ಶಾಲಾ-ಕಾಲೇಜುಗಳ ಜಗಲಿಗಳಲ್ಲಿ ಸಭೆಗಳು ನಡೆಯುತ್ತಿರುತ್ತವೆ.

ಬಿ.ಎಂ. ಭಟ್, ಹರಿದಾಸ್, ಮಂಜುನಾಥ್, ಶಿವಕುಮಾರ್, ಶಾಹಿದ ಬೇಗಂ ಮುಂತಾದವರು ಸಭೆಗಳಿಗೆ ನಿರಂತರ ಹಾಜರಾಗುತ್ತಾರೆ. ಇವರಲ್ಲದೆ ಸಲೆಮಾನ್ ಅಬೂಬಕರ್, ಸುಂದರಿ, ಹಮೀರ್, ರಮೇಶ್, ಮೂಲ್ಯ ಪಾಪಚ್ಚನ್, ವಿಜಯ ಸೋಮಣ್ಣ, ನೀಲೆಶ್, ಮೊದಲಾದ ಕಾರ್ಯಕರ್ತರ ಪಡೆಯು ಸಜ್ಜಾಗಿದೆ.

ಬೀಡಿ ಕಾರ್ಮಿಕರ ಲ್ಯಾಲ ಸಮಿತಿಯು ಹಕ್ಕು ಪತ್ರಕ್ಕಾಗಿ ಹೋರಾಡಿ, 150 ಮನೆಗಳಿಗೆ ಹಕ್ಕು ಪತ್ರ ಕೊಡಿಸುವಲ್ಲಿ ಯಶಸ್ವಿಯಾಯಿತು. ಕುತ್ಲೂರಿನ ಶಾಲಾ ಜಮೀನಿನ ಅಕ್ರಮದ ವಿರುದ್ಧ, ಭೂ ಮಾಲೀಕರ ವಿರುದ್ಧ ಯಶಸ್ವಿ ಹೋರಾಟಗಳು ಜರುಗಿದವು. ಈ ಮೂಲಕ ರೈತ ಸಮಿತಿಗಳೂ ರಚನೆಯಾದವು.

ಬೀಡಿ ಕಾರ್ಮಿಕರಿಂದ ಪ್ರಭಾವಿತರಾದ ಅಂಗನವಾಡಿ ನೌಕರರು:

ಅಂಗನವಾಡಿ ಕೇಂದ್ರಗಳಲ್ಲಿ ಬೀಡಿ ಕಾರ್ಮಿಕರು ಸಭೆ ನಡೆಸುವಾಗ ಗಮನಿಸುತ್ತಿದ್ದ ಅಂಗನವಾಡಿ ನೌಕರರು, ಸಿಐಟಿಯು ಪ್ರಭಾವಕ್ಕೊಳಗಾದರು. 99 ರಲ್ಲಿ ಸಂಘ ಕಟ್ಟಲು ಮುಂದಾಗಿ, ಅದೇ ವರ್ಷ ಸಂಘವನ್ನು ಅಸ್ತಿತ್ವಕ್ಕೆ ತಂದರು. ಅಂಗನವಾಡಿ ನೌಕರರಿಗೆ ಧೈರ್ಯ ತುಂಬಲು ಬೀಡಿ ಕೆಲಸಗಾರರು ತಮ್ಮ ಕೆಲಸ ಬಿಟ್ಟು ಬೆಂಬಲಕ್ಕಿಳಿದು ಹೋರಾಟಕ್ಕೆ ಸ್ಫೂರ್ತಿ ತುಂಬಿದರು. ಅಂಗನವಾಡಿ ನೌಕರರು ಹಾಗೂ ಬೀಡಿ ಕೆಲಸಗಾರರ ನಡುವೆ ಸಂಗಾತಿತನ ನೆಲೆಯೂರಿತು. ನಂತರ ಪಕ್ಕದ ತಾಲ್ಲೂಕಾದ ಪುತ್ತೂರಲ್ಲು ಸಹ ಅಂಗನವಾಡಿಯವರ ಸಭೆಗಳನ್ನು ನಡೆಸಲಾಯಿತು. ಪುತ್ತೂರಿನ ಅಂಗನವಾಡಿಯವರ ಮೂಲಕ ವಳಾಲು, ನೆಲ್ಯಾಡಿ ,ಅರ್ಲಪದವು, ಈಶ್ವರ ಮಗಲ ಮೊದಲಾದ ಕಡೆ ಬೀಡಿ ಕಾರ್ಮಿಕರ ಸಮಿತಿಗಳಾದವು.

ಬೆಳ್ತಂಗಡಿ ಬೀಡಿ ಕೆಲಸಗಾರರ ಸಂಘವು ಪುತ್ತೂರು ತಾಲ್ಲೂಕಿನ ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ನೆರವು ನೀಡಿತು.

1998 ರಿಂದೀಚೆಗೆ ಬಿಜೆಪಿ ಬಿಎಂಎಸ್ ಮಾಡಲು, ಕಾಂಗ್ರೆಸ್ ಇಂಟಕ್ ಮಾಡಲು ಕಾರ್ಮಿಕರ ಮಧ್ಯಕ್ಕಿಳದವು. ಆದರೆ ಸಿಐಟಿಯು ಪ್ರಬಲವಾಗಿದ್ದ ಕಾರಣ ತಣ್ಣಗಾದವು.

ರಾಜಕೀಯ ಪ್ರವೇಶ ಮಾಡಿದ ಕಾರ್ಮಿಕರು:

ರಾಜಕೀಯ ಪ್ರಜ್ಞೆ ಕಾರ್ಮಿಕರಲ್ಲಿ ಎತ್ತರಿಸಿದೆ ಎನ್ನುವುದಕ್ಕೆ ಸಾಕ್ಷಿ ಪಂಚಾಯ್ತಿ ಚುನಾವಣೆಗಳು.

ಬಿಜೆಪಿ, ಕಾಂಗ್ರೆಸ್, ಜನತಾದಳ ಅಭ್ಯರ್ಥಿಗಳ ನಡುವೆ ಸ್ಪರ್ಧಿಸಿದ್ದ ಬೀಡಿ ಯೂನಿಯನ್ ಅಭ್ಯರ್ಥಿಗಳಲ್ಲಿ, ಏಳು ಮಹಿಳಾ ಸದಸ್ಯರನ್ನು ಒಳಗೊಂಡಂತೆ 12 ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆರಿಸಿ ಬಂದರು. ಒಂದು



ಮಳೆಯನ್ನೂ ಲೆಕ್ಕಿಸದ ಮಹಿಳಾ ಕಾರ್ಮಿಕರು

ಪಂಚಾಯ್ತಿಯಲ್ಲಿ ಉಪಾಧ್ಯಕ್ಷರ ಸ್ಥಾನ ಪಡೆಯಲು ಸಾಧ್ಯವಾಯಿತು.

ತಾಲ್ಲೂಕು ಪಂಚಾಯ್ತಿ ಚುನಾವಣೆಯ 2 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಕುಡುಗೋಲು ಸುತ್ತಿಗೆ ಗುರುತಿನ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಲು ಬೀಡಿ ಕಾರ್ಮಿಕರು, ರೈತ ಸಂಗಾತಿಗಳು ಇನ್ನಿಲ್ಲದಂತೆ ಮುಂದಾದರು. ಪದೆ ತಾಯಿಯನ್ನು ಒಲಿಸಲು ಮಗಳು, ಗಂಡನನ್ನು ಒಲಿಸಲು ಹೆಂಡತಿ, ಅಣ್ಣನನ್ನ ಒಲಿಸಲು ತಂಗಿ ಮನೆಯೊಳಗೆ ಪ್ರಯತ್ನಿಸಿದ್ದರ


ಬೀಡಿ ಕಾರ್ಮಿಕ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ ಮತ್ತು ಬಿ.ಎಂಭಟ್(ಹೆಗಲ ಮೇಲೆ ಶಾಲು ಹೊದ್ದಿರುವವರು) ಮತ್ತಿತರರು.

ಜೊತೆಗೆ ಹಗಲಿರುಳೆನ್ನದೆ ಬೀದಿಗಿಳಿದು ಸಹ ದುಡಿದರು. ಹೀಗಾಗಿ ಹೆಂಡ ಮತ್ತು ಹಣದ ಹೊಳೆಯ ನಡುವೆಯು ನಮಗೆ ನಿರ್ಣಾಯಕ ಮತಗಳು ದೊರೆಯಲು ಸಾಧ್ಯವಾಯಿತು. ಲ್ಯಾಲಾ ತಾಲ್ಲೂಕು ಪಂಚಾಯ್ತಿಯಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ 2050 ಮತಗಳನ್ನು, ಬಿಜೆಪಿಯ ಅಭ್ಯರ್ಥಿ 1200 ಮತಗಳನ್ನು, ನಮ್ಮ ಅಭ್ಯರ್ಥಿ 750 ಮತಗಳನ್ನು ಗಳಿಸಿದರು.

ಮತ್ತೊಂದು ತಾ.ಪಂ. ಕ್ಷೇತ್ರವಾದ ನೆರಿಯಾದಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ 1534 ಮತಗಳನ್ನು ಪಡೆದರೆ, ನಮ್ಮ ಅಭ್ಯರ್ಥಿ 1069 ಮತಗಳನ್ನು ಪಡೆದು ಎರಡನೆ ಸ್ಥಾನ ಗಳಿಸುವ ಮೂಲಕ ಬಿಜೆಪಿ ಅಭ್ಯರ್ಥಿಯನ್ನು ಮೂರನೇ ಸ್ಥಾನಕ್ಕೆ ತಳ್ಳಿದರು. (902 ಮತಗಳು)

ನೆರಿಯಾ ತಾ. ಪಂಚಾಯ್ತಿಯಲ್ಲಿ ಸ್ಪರ್ಧಿಸಿದ್ದರಿಂದಾಗಿ, ಒಂದು ಯುವಜನರ ಸಮಿತಿಯನ್ನು, ಎರಡು ಬೀಡಿ ಕಾರ್ಮಿಕರ ಸಮಿತಿಗಳನ್ನು, ಎರಡು ರೈತ ಸಮಿತಿಗಳನ್ನು ರಚಿಸಲು ಸಾಧ್ಯವಾಯ್ತು.

ದುಷ್ಟರು ಸಂಚು ಹೂಡಿದ ಕೊಕ್ಕಡ ಘಟನೆ: ಪಾಠ ಕಲಿಸಿದ ಕಾರ್ಮಿಕರು: ನೂರಕ್ಕೂ ಹೆಚ್ಚು ಬೀಡಿ ಕಾರ್ಮಿಕರು ದುಡಿಯುವ ಬ್ರಾಂಚ್ ಒಂದು ಇಲ್ಲಿದೆ. ಸರಕಾರ ನಿಗದಿ ಗೊಳಿಸಿದ, ರೂ 43,13 ವೇತನಕ್ಕೆ ಬದಲಾಗಿ ರೂ 41.80 ನ್ನು ಇಲ್ಲಿನ ಮಾಲೀಕರು ಕಾರ್ಮಿಕರಿಗೆ ನೀಡುತ್ತಿದ್ದರು. 20,000, ದಿಂದ 36,000 ದವರೆಗೆ ಬೀಡಿ ಕಟ್ಟಿದರು 5000-7000 ಎಂದು ಬರೆಯುತ್ತಿದ್ದರು. ಪಾಸ್ ಬುಕ್ ನೀಡಿರಲಿಲ್ಲ. ಸ್ಟೇಟ್‌ಮೆಂಟಿಗೆ ಕಡಿಮೆ ಬೀಡಿ ಬರೆಯುತ್ತಿದ್ದ ಕಾರಣ 1000 ಬೀಡಿಗೆ 15 ರೂಪಾಯಿ ನಷ್ಟವಾಗುತ್ತಿತ್ತು. (ತಿಂಗಳಿಗೆ 310) ಆಗ ನಮ್ಮ ಸಂಘ ಮಧ್ಯ ಪ್ರವೇಶ ಮಾಡಿತು. ಬೀಡಿ ಕಾಂಟ್ರಾಕ್ಟರಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಬೆಂಬಲ ದೊರೆಯಿತು. ಈ ಮಧ್ಯೆ ಕೊಕ್ಕಡ ಸೇವಾ ಸಹಕಾರ ಬ್ಯಾಂಕಿಗೆ ನಿರ್ದೇಶಕರಾಗಿ ಬಿ.ಎಂ.ಭಟ್ ಆಯ್ಕೆಯಾದರು. ಬಿಜೆಪಿ ಹೀನಾಯ ಸೋಲು ಅನುಭವಿಸಿತು.

ವಿರೋಧಿಗಳೆಲ್ಲ ಒಂದಾಗಿ ರಾಜಿ ಪಂಚಾಯ್ತಿ ನಡೆಸುವ ನೆಪಮಾಡಿ, ಬೀಡಿ ಕಾರ್ಮಿಕರ ಪರವಾಗಿ ಬಿ.ಎಂ. ಭಟ್ ಮಂಜುನಾಥ್, ಹರಿದಾಸ್, ಬಾಬಣ್ಣ ಮುಂತಾದವರನ್ನು ಕರೆಸಿದರು. ಯೋಜನೆಮಾಡಿ, ಅಮಲುಕೋರರ ತಂಡ ರಚಿಸಿ ಆ ಹೊತ್ತಿಗೆ ಕಾರ್ಮಿಕ ಮುಖಂಡರ ಮೇಲೆ ಹಲ್ಲೆ ನಡೆಸಿಯೇ ಬಿಟ್ಟರು. ಹಠಾತ್ತಾಗಿ ಎರಗಿದ ಹಲ್ಲೆಯಿಂದ ದೃತಿಗೆಡದೆ ಕಾರ್ಮಿಕರು ಹಲ್ಲೆಯನ್ನು ಎದುರಿಸಿದರು. ಶ್ರೀಮತಿ ಕಲಾವತಿ, ಗೀತಾ, ಚಂದ್ರಾವತಿ, ಬಿ.ಎಂ. ಭಟ್ ಮಂಜುನಾಥ್ ಮುಂತಾದವರೆಲ್ಲ ಗಾಯಗೊಂಡು ಆಸ್ಪತ್ರೆಗೆ ದಾಖಲಾದರು. 9 ಜನ ಗೂಂಡಾಗಳ ಮೇಲೆ ಕೇಸು ದಾಖಲಾಯಿತು. ಅವರನ್ನೆಲ್ಲಾ ಬಂಧಿಸಲಾಯಿತು. ಕಾರ್ಮಿಕರು ತಮ್ಮೆಲ್ಲ ಹಕ್ಕುಗಳನ್ನು ಪಡೆಯುವಲ್ಲಿ ಕೊನೆಗೆ ಯಶಸ್ವಿಯಾದರು.

ಬಲಪಂಥೀಯ ರಾಜಕಾರಣಿಗಳು ಕಾಂಟ್ರಾಕ್ಟದಾರರು ಸೇರಿ ನಡೆಸಿದ ಈ ಹಲ್ಲೆಯನ್ನು ವಿರೋಧಿಸಿ 3000 ಮಂದಿ ರೈತ ಕಾರ್ಮಿಕರು ಜಡಿಮಳೆಯಲ್ಲಿ ಮೆರವಣಿಗೆ ನಡೆಸಿ, ಪ್ರತಿಭಟನೆ ಸಲ್ಲಿಸಿದರು. ಕಾರ್ಮಿಕರಿಗೆ ಪುನ: ಕೆಲಸದ ವ್ಯವಸ್ಥೆ ಆಗುವವರೆಗೆ ಮನೆಗೊಂದು ಕೆ.ಜಿ. ಯಂತೆ ಅಕ್ಕಿ, ಜೊತೆಗೆ 5000 ಹಣ ಸಂಗ್ರಹಿಸಿ ಕಾರ್ಮಿಕ ಕುಟುಂಬಗಳಿಗೆ ನೀಡುವ ಮೂಲಕ ಸೌಹಾರ್ದ ಬೆಂಬಲ ನೀಡಲಾಯಿತು.

ಇಂದು ಸಿಐಟಿಯು ಮನೆಮಾತಾಗಿದೆ. ರಾಜಕೀಯವಾಗಿ ಬೆಳೆದು ಬರಬೇಕೆಂಬ ಪ್ರಜ್ಞೆ ಕಾರ್ಮಿಕರಲ್ಲಿ ಬರತೊಡಗಿದೆ. ಯಾರೊಬ್ಬರೂ ಅನಿವಾರ್ಯವಲ್ಲ ,ಎಲ್ಲರು ಅನಿವಾರ್ಯ; ಎನ್ನುವ ರೀತಿಯಲ್ಲಿ ಪ್ರತಿ ಕಾರ್ಯಕರ್ತರನ್ನು ಬೆಳೆಸಲಾಗಿದೆ.

ರೈತ ಕಾರ್ಮಿಕರೊಂದಿಗೆ ಯುವಜನರು:

ತಾಲ್ಲೂಕಿನಲ್ಲಿ ಡಿವೈಎಫ್ಐಗೆ 1150 ಸದಸ್ಯತ್ವ ಇದ್ದು, ಗ್ರಾಮ ಸಮಿತಿಗಳನ್ನು ಹೊಂದಿದೆ. ಹಲವಾರು ಗ್ರಾಮಗಳಲ್ಲಿ ಸಂಪರ್ಕವಿದೆ. ಹೊಸ ಘಟಕಗಳ ಸ್ಥಾಪನೆಗೆ ಮುಂದಾಗಿದೆ. ಪಟ್ರಮೆ ಗ್ರಾಮದಲ್ಲಿ ಪ್ರಥಮವಾಗಿ ಡಿ.ವೈ.ಎಫ್.ಐ. ಸ್ಥಾಪಯಾಗಿ, ಅಲ್ಲಿಯ ಕುಗ್ರಾಮದ ಏಳಿಗೆಗೆ ಪಣ ತೊಟ್ಟು ಹೋರಾಡಿ, ಒಂದೊಂದೇ ಸೌಕರ್ಯ ಪಡೆಯಲು ಸಾಧ್ಯವಾಗಿದೆ. ಎರಡು ಹೊಳೆಗಳ ನಡುವೆ ಇದ್ದ ಈ ಕುಗ್ರಾಮಕ್ಕೆ ಇದೀಗ ಸೇತುವೆ ಸಹ ಆಗುತ್ತಿದೆ. ಬಸ್ ಸಂಪರ್ಕ ಸಾಧಿಸಲಾಗಿದೆ. 5 ಶಾಲೆಗಳು ತೆರೆದಿವೆ. ಡಿ.ವೈಎಫ್ಐ ಇಲ್ಲಿ ಪ್ರಾರಂಭವಾದ ನಂತರ ನಿಡ್ಲೆ, ಶಿಬಾಜೆಗಳಲ್ಲಿ ಸಹ ಘಟಕಗಳು ಸ್ಥಾಪನೆ ರಚಿತವಾಗಿವೆ.

ಬೆಳ್ತಂಗಡಿ ತಾಲೂಕು ಸಮಿತಿಯನ್ನು ಸಹ ರಚಿಸಲಾಗಿದೆ.

ಅಧ್ಯಕ್ಷರಾಗಿ ಹರಿದಾಸ್, ಕಾರ್ಯದರ್ಶಿಯಾಗಿ ಬಿ.ಎಂ.ಭಟ್ ಆಯ್ಕೆಯಾಗಿರುತ್ತಾರೆ.

1991 ರಲ್ಲಿ ಬಿ.ಎಂ. ಭಟ್, ಶಿವಕುಮಾರ್ ಎಂಬ ಯುವ ನ್ಯಾಯವಾದಿಗಳ ಜೊತೆಗೆ ಹರಿದಾಸ್ ಸೇರಿ ಕೆ.ವಿ. ರಾವ್ (ಯಳಿಚಿತ್ತಾರವರು) ಮಾರ್ಗದರ್ಶನದಿಂದ ಪ್ರಾರಂಭಗೊಂಡ ಚಳುವಳಿ ಇಂದು ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಿಪಿಐ(ಎಂ) ಪಕ್ಷದ ತಾಲ್ಲೂಕು ಸಮಿತಿಯನ್ನು ಹೊಂದುವ ತನಕ ನಾನಾ ಮಜಲುಗಳಲ್ಲಿ ಬೆಳೆಯುತ್ತಿದೆ. ಸರಕಾರ ಎಂತದೇ ಜನವಿರೋಧಿ ನೀತಿ ಜಾರಿಮಾಡಿದಾಗ, ಕಾರ್ಮಿಕರು ಬೀದಿಗಿಳಿದು, ಪ್ರತಿಭಟಿಸುತ್ತಾರೆ. ಹೋರಾಡುತ್ತಾರೆ. ಹೋರಾಟ ಯಾವಾಗ? ಎಂದು ಮುಖಂಡರನ್ನು ಪ್ರಶ್ನಿಸುತ್ತಾರೆ.

ಪಕ್ಷ ಕಟ್ಟಲು ಒಲವು:

ಬೀಡಿ ಕಾರ್ಮಿಕರು ರೈತರು ಒಟ್ಟಾಗಿ ಸೇರಿ ಸಿಪಿಐ(ಎಂ) ಪಕ್ಷವನ್ನು ಬೆಳೆಸಲು ಉತ್ಸುಕರಾಗಿದ್ದಾರೆ. ತಮ್ಮ ಮಕ್ಕಳು ಇದರಲ್ಲಿ ಸೇರಲಿ ಎಂದು ಹಂಬಲಿಸುತ್ತಾರೆ. ಸ್ವಯಂ ಸ್ಫೂರ್ತಿಯಿಂದ ತಮ್ಮ ಮಕ್ಕಳನ್ನು ಎಸ್‌ಎಫ್ಐ ವಿದ್ಯಾರ್ಥಿ ಸಂಘಟನೆಗೆ ಸೇರಿಸುತ್ತಾರೆ. ತಾವು ವಾಸಿಸುವ ಪ್ರದೇಶದ ಯುವಕರನ್ನು ಕಲೆಹಾಕಿ ಡಿ.ವೈ.ಎಫ್.ಐ ಮಾಡಲು ಮುಂದಾಗಿದ್ದಾರೆ.

ಕಾರ್ಮಿಕ ಮುಖಂಡರು ಸಹ ಕಾರ್ಮಿಕರ ಪ್ರೀತಿ ವಿಶ್ವಾಸವನ್ನು ಗಳಿಸುವುದರ ಜೊತೆಗೆ ರಾಜಕೀಯ ಸೈದ್ಧಾಂತಿಕ ತರಬೇತಿ ನೀಡಲು ಹಿಂಜರಿಯದೆ, ನಾವು ಸಿಪಿಎಂ ಪಕ್ಷದವರು ನಮ್ಮ ಕೆಲಸ ರಾಜಕೀಯ ಕೆಲಸ ಎಂದು ಹೇಳುವ ಜೊತೆಗೆ ಇತರೆ ರಾಜಕೀಯ ಪಕ್ಷಗಳ ಏಕಮಾತ್ರ ಗುರಿಯಾದ ಚುನಾವಣೆಗಳ ಬಗ್ಗೆಯೂ ಎಚ್ಚರಿಸುತ್ತಲೇ ಇರುತ್ತಾರೆ.

ಈ ಬಾರಿ ರೈತರು 5000 ಸದಸ್ಯತ್ವದ ಗುರಿಯನ್ನು ಕಾರ್ಮಿಕರು 10,000 ಸದಸ್ಯತ್ವದ ಗುರಿಯನ್ನು ಹೊಂದಿರುತ್ತಾರೆ. ಮೂರು ಜನ ಕಾರ್ಯಕರ್ತರಿದ್ದ ತಾಲ್ಲೂಕು ಇಂದು ಕಾರ್ಯಕರ್ತರ ತಂಡವನ್ನೇ ಪಡೆದಿದೆ. " 8 ಸೆಂಟ್ಸ್ ಮಗನಿಗೂ 8 ಸೆಂಟ್ಸ್ ಪಾರ್ಟಿಗೂ" ಸಮಾನವಾಗಿ ಭೂಮಿ ಹಂಚಿದ ರುಕ್ಮಯ್ಯ ಭಂಡಾರಿಯವರಂತ ನೇತಾರರನ್ನು ಪಕ್ಷ ಹೊಂದಿದೆ. ಒಂಭತ್ತು ಶಾಖೆಗಳು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಪೂರ್ಣಕಾಲದ ಕಾರ್ಯಕರ್ತರಿಲ್ಲದ ಈ ಬೆಳವಣಿಗೆ ಇನ್ನೂ ಬೆಳೆಯಲು ಸ್ಫೂರ್ತಿದಾಯಕ.

ನಿರಂತರ ಹೋರಾಟ, ಸಭೆ ಸಮಾರಂಭಗಳು ಕಾರ್ಯಕ್ರಮಗಳನ್ನು ನೀಡುತ್ತಾ ರೈತ ಕಾರ್ಮಿಕರನ್ನು ಹುರಿದುಂಬಿಸುವುದು ಬೆಳವಣಿಗೆಗೆ ಒಂದು ಕಾರಣವಾದರೆ, ಪ್ರತಿ ತಿಂಗಳು ಗ್ರಾಮ ಸಮಿತಿಗಳನ್ನು ಸೇರಿಸಿ ಅವರ ಸಮಸ್ಯೆಗಳನ್ನು ಕೇಳುವುದು ಮತ್ತು ಸ್ಪಂಧಿಸುವುದು ಇನ್ನೊಂದು ಕಾರಣ. ನಿಗದಿ ಆದ ದಿನ ಗ್ರಾಮಸ್ಥರ ಸಭೆಗೆ ಗೈರು ಹಾಜರಾಗದೆ, ಸಮಯಕ್ಕೆ ಸರಿಯಾಗಿ ಹಾಜರಾಗಿ ಸಭೆ ನಡೆಸಿ ಕೊಡುವುದು, ತೀರ್ಮಾನಿಸಿದ್ದನ್ನ ಜಾರಿ ಮಾಡುವುದು ಪ್ರಮುಖ ಕಾರಣ. ಕಾರ್ಮಿಕರು ರೈತರನ್ನು ಸಂಘಟಿಸಿ ಅವರ ಮನೆಯವರ ಸಂಪರ್ಕವನ್ನು ಬೆಳೆಸಿ ಅವರ ಪ್ರೀತಿ ವಿಶ್ವಾಸವನ್ನು ಗಳಿಸುವುದು ಕೂಡ ಬೆಳವಣಿಗೆಯ ಮುಖ್ಯಕಾರಣ.

ವರ್ಷದಲ್ಲಿ ಎಷ್ಟೇ ಹೋರಾಟಗಳು ನಡೆಯಲಿ ರೈತ-ಕಾರ್ಮಿಕರ ಉತ್ಸಾಹ ಕಡಿಮೆ ಆಗದೆ ಹೆಚ್ಚೆಚ್ಚು ಜನ ಭಾಗವಹಿಸಿದ್ದನ್ನು ನೋಡಿದರೆ ಜನ ಸಂಘಟಿತರಾಗಿ ಹೋರಾಡಲು ತಯಾರಿದ್ದಾರೆ.ಆದರೆ; ಬೆಳವಣಿಗೆ ಇನ್ನೂ ಆಗಬೇಕಿದೆ. ತಾಲ್ಲೂಕಿನ ಎಲ್ಲಾ ವಿಭಾಗದ ಜನರನ್ನು ಪಕ್ಷದತ್ತ ಸೆಳೆಯಬೇಕಾಗಿದೆ. ಖಂಡಿತಕ್ಕು ಮುಂದಿನ ದಿನಗಳಲ್ಲಿ ಬೆಳ್ತಂಗಡಿ ಕೆಂಪು ಭದ್ರಕೋಟೆಯಾಗಿ ಬೆಳೆದು ಬರಲಿದೆ ಎಂಬ ವಿಶ್ವಾಸ ಅಲ್ಲಿಯ ಕಾರ್ಮಿಕ ವರ್ಗದ ಮನದಲ್ಲಿದೆ.

ಜನ ನಮಗಾಗಿ ಕಾಯಲಾರರು, ಕಾಲವು ನಮಗಾಗಿ ಕಾಯದು ನಾವು ಜನರ ಮಧ್ಯೆ ಹೋಗಬೇಕು. ಆಗ ಜನ ನಮ್ಮೆಡೆ ಬಂದೇ ಬರುತ್ತಾರೆ. ಈ ನಿಟ್ಟಿನಲ್ಲಿ ಕೆಲಸ ಮಾಡುವುದೇ ನಮ್ಮೆಲ್ಲರ ಆಶಯ.

ವಿದ್ಯುತ್ ಖಾಸಗೀಕರಣ, ಬೆಲೆ ಏರಿಕೆ, ಆಂಧ್ರ ಚಳುವಳಿಕಾರರ ಮೇಲೆ ಪೋಲೀಸ್ ದೌರ್ಜನ್ಯ ವಿರುದ್ಧ ಎಡ ಪಕ್ಷಗಳ ಪ್ರತಿಭಟನೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿದ್ಯುತ್ ಖಾಸಗೀಕರಣ ಮತ್ತು ಬೆಲೆಏರಿಕೆ ನೀತಿಯ ವಿರುದ್ಧ 4 ಎಡ ಪಕ್ಷಗಳು ನೀಡಿದ ಕರೆಯ ಭಾಗವಾಗಿ, ಬೆಂಗಳೂರಿನಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ನೂರಾರು ಕಾರ್ಯಕರ್ತರು ಕೆ.ಪಿ.ಟಿ.ಸಿ.ಎಲ್. ಪ್ರಧಾನ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ವಿದ್ಯುತ್‌ದರವನ್ನು ತೀವ್ರವಾಗಿ ಹೆಚ್ಚಿಸಿದ ಆಂಧ್ರದ ಚಂದ್ರಬಾಬು ನಾಯ್ಡು ಸರಕಾರವು ಅದನ್ನು ವಿರೋಧಿಸಿದ ಚಳುವಳಿಗಾರರ ಮೇಲೆ ಪೋಲೀಸ್ ದಬ್ಬಾಳಿಕೆಯನ್ನೇ ಹರಿಯಬಿಟ್ಟಿದೆ. ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ನಂಬಿಕೆ ಇರುವ ಎಲ್ಲರೂ ಇದನ್ನು ವಿರೋಧಿಸಬೇಕು.

ಉಪವಾಸ ಸತ್ಯಾಗ್ರಹದಲ್ಲಿ ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಶಾಸಕರು



ಕಳೆದ ಕೆಲವು ವರ್ಷಗಳಿಂದ ವಿಶ್ವಬ್ಯಾಂಕ್, ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವವ್ಯಾಪಾರ ಸಂಘಟನೆಯ ಶರತ್ತುಗಳಿಗೆ ತಲೆಬಾಗಿದ ಕೇಂದ್ರ ಸರಕಾರ ಮತ್ತು ಕೆಲವೊಂದು ರಾಜ್ಯ ಸರಕಾರಗಳು ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯನ್ನು ಹಂತ ಹಂತವಾಗಿ ಖಾಸಗೀಕರಣ ಗೊಳಿಸುತ್ತಿದ್ದು ಈಗಾಗಲೇ ಬೆಲೆಯಲ್ಲಿ ತೀವ್ರ ಹೆಚ್ಚಳ ಉಂಟಾಗಿದೆ.

ಆಂಧ್ರಪ್ರದೇಶದಲ್ಲಿ ಜೂನ್ 3, 2000 ದ ಮೊದಲು 200 ಯೂನಿಟ್ ಬಳಕೆಗೆ ರೂ 165/- ಇದ್ದುದು ಈಗ ರೂ 510ಕ್ಕೆ ಅಂದರೆ ಶೇ 209 ಹೆಚ್ಚಳ ಉಂಟಾಗಿದೆ. ಮಹಾರಾಷ್ಟ್ರ ಸರಕಾರ 1998 ರಲ್ಲಿ ದರ ಹೆಚ್ಚಿಸಿದ್ದು ಇದೀಗ ರೂ 497-50ಕ್ಕೆ ಏರಿಸಿದೆ 1995 ರಲ್ಲೇ ಖಾಸಗೀಕರಣ ಆರಂಭಿಸಿದ ಒರಿಸ್ಸಾ ಸರಕಾರ ಗ್ರಾಹಕ ದರವನ್ನು 200 ಯೂನಿಟ್‌ಗಳಿಗೆ ರೂ. 160 ರಿಂದ ರೂ 310 ಕ್ಕೆ ಏರಿಸಿದೆ. ಈ ಖಾಸಗಿ ಕಂಪೆನಿಯು ಇತ್ತೀಚೆಗೆ ಚಂಡ ಮಾರುತ ಬಂದಾಗ ಸರಕಾರದಿಂದ ರೂ 300 ಕೋಟಿ

ಕರ್ನಾಟಕದಲ್ಲೂ ವಿದ್ಯುತ್ ನಿಯಂತ್ರಣ ಆಯೋಗ ರಚಿಸಿದ್ದು ಬೆಲೆಯನ್ನು ಏರಿಸುವ ಸೂಚನೆಯನ್ನು ನೀಡಿದೆ. ಈಗಾಗಲೇ ಹಳೆಯ ಬಾಕಿ ವಸೂಲಿ, ಅನಧಿಕೃತ ಲೈನುಗಳನ್ನು ಸಕ್ರಮಗೊಳಿಸುವುದು, 3 ತಿಂಗಳ ಮುಂಗಡ ಇತ್ಯಾದಿ ಹೆಸರಿನಲ್ಲಿ ರೈತರ, ಗ್ರಾಹಕರ ಸುಲಿಗೆ ಆರಂಭಗೊಂಡಿದೆ. ಇದನ್ನು ತೀವ್ರವಾಗಿ ವಿರೋಧಿಸಲು ಎಡ ಪಕ್ಷಗಳು ನಿರ್ಧರಿಸಿದ್ದವು. ಹಾಗೂ 24 ರಂದು ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಿದ್ದವು.

ಪ್ರತಿ ಭಟನೆಕಾರರನ್ನು ಉದ್ದೇಶಿಸಿ ಸಿಪಿಐ ರಾಜ್ಯ ಕಾರ್ಯದರ್ಶಿ ಎಂ.ಸಿ. ವೆಂಕಟರಾಮು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ. ಜಿ.ಎನ್. ನಾಗರಾಜ್ ಇನ್ನಿತರರು ಮಾತನಾಡಿ ವಿದ್ಯುತ್ ಉತ್ಪಾದನೆಯನ್ನು ಮತ್ತು ವಿತರಣೆ ಖಾಸಗಿಯವರಿಗೆ ಅದರಲ್ಲೂ ವಿದೇಶಿ ಕಂಪನಿಗಳಿಗೆ ವಹಿಸುವುದನ್ನು ವಿರೋಧಿಸಿದರು. ಕರ್ನಾಟಕ ಸರಕಾರದ ಮುಂದಿರುವ ವಿದ್ಯುತ್ ದರ ಹೆಚ್ಚಳದ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸಲು ಕರೆ ನೀಡಲಾಯಿತು. ಹಾಗೂ 2 ತಿಂಗಳಿಂದ ಆಂಧ್ರದಲ್ಲಿ ಗಮನಾರ್ಹ ಚಳುವಳಿ ನಡೆಸುತ್ತಿರುವ

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ವಿ.ಜೆ.ಕೆ. ನಾಯರ್, ಎಸ್.ವೈ. ಗುರುಶಾಂತ್, ಪಿ. ಜಗನ್ನಾಥ್, ಕೆ.ಪ್ರಕಾಶ್, ಗೋಪಾಲಗೌಡ ಮೂದಲಾದವರು ಸಿಪಿಐ ಮುಖಂಡರಾದ ಆನಂದ ತೀರ್ಥ, ಶಿವರಾಜ್ ಬಿರಾದಾರ್ ವೆಂಕಟೇಶ್ ಸುರೇಂದ್ರ ಮೊದಲಾದವರು ಭಾಗವಹಿಸಿದ್ದರು.

ಆಂಧ್ರದಲ್ಲಿ ರಕ್ತದೋಕುಳಿ

ಪುಟ 5 ರಿಂದ

ಕಾಂಗ್ರೆ ಪಕ್ಷ ಹಾಗೂ ಸಿಪಿಐ(ಎಂ) ಪಕ್ಷಗಳ ಶಾಸಕರು ಪ್ರತ್ಯೇಕವಾಗಿ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಮಾಡಿ ಅದು 9ನೇ ದಿನಕ್ಕೆ ಸಾಗಿದರೂ ವಿಶ್ವಬ್ಯಾಂಕ್ ನಿರ್ದೇಶಿತ ಚಂದ್ರಬಾಬು ನಾಯ್ಡುವಿನ ಹೃದಯ ಮಿಡಿಯಲಿಲ್ಲ.

ಕೊನೆಗೆ ವಿಧಾನಸಭೆಯ ಮುತ್ತಿಗೆ ಹಾಕಲು ಕಾಂಗ್ರೆಸ್ ಹಾಗೂ 9 ಪಕ್ಷಗಳ ಎಡರಂಗ ನಿರ್ಧರಿಸಿತು. ಈ ಕರೆಗೆ ಓಗೊಟ್ಟು ಲಕ್ಷಾಂತರ ಜನ ಹೈದರಾಬಾದ್‌ಗೆ ಧಾವಿಸಿದಾಗ ಆಂಧ್ರದ ಹೈಟೆಕ್ ಸರ್ಕಾರದ ಚಂದ್ರಬಾಬು ನಾಯುಡು ಸರ್ಕಾರ ತೋರಿಸಿದೆ.

ಈ ಹತ್ಯಾಕಾಂಡವನ್ನು ವಿರೋಧಿಸಿ 29 ರ ಆಗಸ್ಟ್‌ರಂದು ಆಂಧ್ರಪ್ರದೇಶ ಬಂದ್‌ಗೆ ಕರೆ

ಹಾಸ್ಟೆಲ್ ವಾರ್ಡನ್‌ರ ಸರ್ವಾಧಿಕಾರ

ಸಂವಿಧಾನದತ್ತ ಹಕ್ಕನ್ನು ಬುದ್ಧಿಪೂರ್ವಕವಾಗಿ ವಂಚಿಸುವ ಅಧಿಕಾರಿಗಳಿಗೆ ಯಾವಶಿಕ್ಷೆ? ಇದು ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಬಿ.ಸಿ.ಎಂ. ಹಾಸ್ಟೆಲಿನ ಎಲ್ಲಾ ಹುಡುಗರ ಪ್ರಶ್ನೆ. ಇದಕ್ಕೆ ಸೂಕ್ತ ಉತ್ತರವನ್ನು ಅವರು ಸಂಬಂಧ ಪಟ್ಟ ಅಧಿಕಾರಿಗಳಿಂದ ನಿರೀಕ್ಷಿಸುತ್ತಿದ್ದಾರೆ.

ವಿದ್ಯಾರ್ಥಿಗಳ ದೊಡ್ಡ ಚಳುವಳಿ ಸಮುದಾಯದ ಪ್ರಯತ್ನದಿಂದಾಗಿ ಇಂದು ಕೆಲವು ಜನಕ್ಕಾದರೂ ಹಾಸ್ಟೆಲ್ ಸೌಲಭ್ಯ ದೊರೆತಿದೆ. ಅರ್ಧಕ್ಕರ್ಧ ಜನ ಬಡವರೇ ಇರುವ ಈ ದೇಶ ಮತ್ತು ರಾಜ್ಯದಲ್ಲಿ ಬಡವರ ಮಕ್ಕಳು ಓದಬೇಕೆಂದರೆ ಈ ವಸತಿ ನಿಲಯಗಳು ಹೆಚೆಚ್ಚು ಪ್ರಾರಂಭ ಆಗಬೇಕು ಮತ್ತು ಅದು ಮಕ್ಕಳಿಗೆ ಕೈಗೆಟಕುವಂತಿರಬೇಕು. ಇತ್ತೀಚಿಗಿನ ಸರ್ಕಾರದ ನೀತಿಯಿಂದಾಗಿ ವಿದ್ಯಾರ್ಥಿಗಳ ವಸತಿ ನಿಲಯ ಖಾಸಗೀಕರಣದತ್ತ ಸಾಗುತ್ತ ಬಡವರಿಗೆ ಗಗನ ಕುಸುಮ ವಾಗುತ್ತಿದೆ. ಇದ್ದ ಒಂದೆರಡು ಸರ್ಕಾರಿ ವಸತಿ ನಿಲಯಗಳು ಮೂಲಭೂತ ಸೌಕರ್ಯದ ಕೊರತೆಯಿಂದಾಗಿ ವಿದ್ಯಾರ್ಥಿಗಳು ಬದುಕಲು ಅಯೋಗ್ಯವಾಗಿದೆ.

ಈಗ ಇದ್ದ ಸ್ಥಿತಿಯಲ್ಲಿ ಬದುಕಲು ಯೋಗ್ಯವೆ? ಅಯೋಗ್ಯವೆ? ಎನ್ನುವ ಪ್ರಶ್ನೆ ಒಂದೆಡೆಯಾದರೆ ಈ ಅಸ್ತವ್ಯಸ್ತತೆಯ ಕೊಚ್ಚೆ ಯಾಗಿರುವ ಹಾಸ್ಟೆಲಿನಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಾರೆಯೇ? ಎಂದು ನೋಡಿದರೆ ಉತ್ತರ ಕೊಡಲು ನಾಚಿಕೆ ಆಗುತ್ತದೆ. ಸಂವಿಧಾನ ಅಂಗೀಕಾರವಾಗಿ 50 ವರ್ಷಗಳು ಆದ ನಂತರ ಕೂಡ ಅದು ಕೊಡಮಾಡಿದ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕುಗಳನ್ನು ವಂಚಿಸುವಕ್ರಿಯೆ ವಾರ್ಡನ್‌ಗಳಿಂದ ಸಂಬಂಧಿಸಿದ ಮೇಲಾಧಿಕಾರಿಗಳಿಂದ ನಡೆದೇ ಇದೆ. ಇದಕ್ಕೊಂದು ಜೀವಂತ ಉದಾಹರಣೆಯನ್ನು ಎಸ್‌ಎಫ್‌ಐ ಇಂದು ಜಿಲ್ಲೆಯ ಜನಕ್ಕೆ ಪರಿಚಯಿಸಿದೆ.

ಕಾರವಾರದ ವಿದ್ಯಾರ್ಥಿನಿಯರ ಹಾಸ್ಟೆಲಿನ ವಾರ್ಡನ್ ಮಿತ್ರಾ ಐಗಳ್ ತನ್ನ ತಪ್ಪುಗಳನ್ನು ಎತ್ತಿ ತೋರಿಸುವ ವಿದ್ಯಾರ್ಥಿಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದು ಹೇಗೆಂದು ಯೋಚಿಸಿ, ಅಂತಿಮವಾಗಿ ಸ್ಟಾಂಪ್ ಪೇಪರ್ ಮೊರೆಹೋದರು. ವಸತಿನಿಯಕ್ಕೆ ಪ್ರವೇಶಕ್ಕಾಗಿ ಬರುವ ಎಲ್ಲರಿಗೆ 15 ರೂಗಳ ಸ್ಟಾಂಪ್‌ಪೇಪರ್‌ನಲ್ಲಿ ಕೆಲವು ಷರತ್ತುಗಳನ್ನು ಬರೆಯಿಸಿ ಸಹಿ ತೆಗೆದುಕೊಂಡರು. ಇದು ಸರ್ಕಾರ ತಂದ ನಿಯಮ ವಿರಬೇಕೆಂದು ಭಯಗೊಂಡ ಹಲವು ವಿದ್ಯಾರ್ಥಿನಿಯರು ಬರೆದು ಸಹಿಯನ್ನು ಹಾಕಿಕೊಟ್ಟರು

ಈ ವಿದ್ಯಾರ್ಥಿಗಳು ಸಹಿಹಾಕಿದ ಕಾಗದದಲ್ಲಿ

ವಿಠಲಭಂಡಾರಿ

ಒಟ್ಟು 11 ಷರತ್ತುಗಳಿವೆ ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

1. ನಾನು ನಿಲಯದ ವಾರ್ಡನ್ ಹಾಗೂ ನಿಲಯದ ಸಿಬ್ಬಂದಿಯವರ ಹತ್ತಿರ ವಿದೇಯತೆಯಿಂದ ವರ್ತಿಸುತ್ತೇನೆ.

2 ನಾನು ನಿಲಯದಿಂದ ನಾನು ಓದುತ್ತಿರುವ ಕಾಲೇಜಿಗೆ ಮಾತ್ರ ಹೋಗುತ್ತೇನೆ.

3. ನಾನು ಪದೇ ಪದೇ ಊರಿಗೆ ಹೋಗುವುದಿಲ್ಲ

4. ನಾನು ನಿಲಯದ ಹಾಗೂ ಓದುತ್ತಿರುವ ಕಾಲೇಜಿನ ರಾಜಕೀಯ ಕಾರ್ಯಕ್ರಮ ಬಿಟ್ಟು ಬೇರೆ ಯಾವುದೇ ರಾಜಕೀಯ ಚಟುವಟಿಕೆ ಮತ್ತು ಸಂಘ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಭಾಗವಹಿಸುವುದಿಲ್ಲ.


5. ನಾನು ಎಸ್‌ಎಫ್‌ಐ ನಲ್ಲಿ ಭಾಗವಹಿಸುವುದಿಲ್ಲ ಹಾಗೂ ಬೇರೆ ಯಾವುದೇ ರಾಜಕೀಯ ಚಟುವಟಿಕೆಗಳಿಗೆ ಹೋಗುವುದಿಲ್ಲ

6. ನಾನು ನನ್ನ ಪಾಲಕರನ್ನು ಬಿಟ್ಟು ಬೇರೆಯಾವುದೇ ಗುಡು ಮಕ್ಕಳನ್ನು ನಿಲಯದ ಅವರಣದಲ್ಲಿ ಪ್ರವೇಶ ಕೊಡುವುದಿಲ್ಲ ಮತ್ತು ಮಾತನಾಡಿಸುವುದಿಲ್ಲ

.... ನಾನು ಈ ಮೇಲಿನ ಷರತ್ತುಗಳನ್ನು ಕಾಪಾಡಿಕೊಂಡು ಬಾರದಿದ್ದ ಪಕ್ಷದಲ್ಲಿ ನನಗೆ ನಿಲಯದಿಂದ ತೆಗೆದು ಹಾಕಲು ನಾನು ಒಪ್ಪಿಗೆಯನ್ನು ಈ ಮೂಲಕ ಕೊಡುತ್ತೇನೆ.

ಹೀಗೆ ಬರೆಯಿಸಿಕೊಂಡು ಪ್ರವೇಶ ಕೊಟ್ಟಿರುವ ವಾರ್ಡನ್ ಶ್ರೀಮತಿ ಮಿತ್ರಾಐಗಳ್ ಹುಡುಗಿಯ ಕಂಡರೆ ಕೇವಲ ಯಂತ್ರಗಳೆಂದು ತಿಳಿದಿರಬೇಕು ಇಲ್ಲದಿದ್ದರೆ ಷರತ್ತುಗಳಿರುತ್ತಿರಲಿಲ್ಲ.

ಈ ದೇಶದ ಸಂವಿಧಾನವೇ ಪ್ರತಿಯೊಬ್ಬರಿಗೆ ಸಂಘಸಂಸ್ಥೆಗಳನ್ನು ಸೇರುವ ಹಕ್ಕನ್ನು ಮತ್ತು ಅನ್ಯಾಯವಾದಾಗ ಪ್ರತಿಭಟಿಸುವ ಹಕ್ಕನ್ನು ಕೊಟ್ಟಿದೆ. ಆದರೆ ಈ ಪತ್ರ ಅದಕ್ಕೇ ತಿರಸ್ಕರಿಸುತ್ತಿದೆ. ಇಲ್ಲಿ ಕಾಲೇಜಿನ ರಾಜಕೀಯ ಕಾರ್ಯಕ್ರಮ ಎಂದರೆ ಏನು? ಚುನಾವಣೆಯಲ್ಲಿ ಮತವನ್ನು ಹಾಕುವುದು ರಾಜಕೀಯ ಕ್ರಿಯೆಯಲ್ಲವೆ? ನಾನು ಓದುವ ಕಾಲೇಜಿಗೆ ಬಿಟ್ಟು ಬೇರೆ ಎಲ್ಲಿಗೂ ಹೋಗದೇ ಇರಲು ಸಾಧ್ಯವೆ? ಎನ್ನುವ ಪ್ರಶ್ನೆಗಳಿಗೆ ವಾರ್ಡನ್



ಉತ್ತರಿಸಬೇಕು. ಸಂವಿಧಾನವೇ ಸಂಘ ಸಂಸ್ಥೆಗಳಲ್ಲಿ ಸೇರುವ ಮತ್ತು ಕಟ್ಟುವ ಹಕ್ಕನ್ನು ಕೊಟ್ಟಿರುವಾಗ ಎಸ್‌ಎಫ್‌ಐ ನಂತಹ ಸಂಘಟನೆಯನ್ನು ಸೇರುವುದಿಲ್ಲ ಎಂದು ಬರೆಯಿಸಿ ಕೊಳ್ಳುವುದು ಸಂವಿಧಾನದ ವಿರೋಧವಾಗುವುದಿಲ್ಲವೆ?

ಈ ಹಿಂದೆ ಅನೇಕ ಸಲ ಕೆಟ್ಟ ಆಹಾರ ಕೊಟ್ಟಾಗ, ಹಾಸ್ಟೆಲಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸದಿದ್ದಾಗ ಎಸ್‌ಎಫ್‌ಐ ನೇತೃತ್ವದಲ್ಲಿ ಹೋರಾಟ, ಪ್ರತಿಭಟನೆ ನಡೆದಿತ್ತು. ಈ ಹೋರಾಟ ಇನ್ನು ಆಗದಂತೆ ತಡೆಯುವ ಕ್ರಿಯೆಯಾಗಿ ಇವರು ಈ ಸ್ಟಾಂಪ್ ಪೇಪರ್‌ಅನ್ನು ಬಳಸಿಕೊಳ್ಳಲು ನಿರ್ಧರಿಸಿದಂತಿದೆ. ಕೋರ್ಟ್ ಮತ್ತು ಪೋಲಿಸ್ ಸ್ಟೇಷನ್ನಿನಲ್ಲಿ ಮಾತ್ರ ಇಂಥ ಕಾಗದ ನೋಡುವ ಹಳ್ಳಿಯ ವಿದ್ಯಾರ್ಥಿನಿಯರು ಎಸ್‌ಎಫ್‌ಐ ಮುಖಂಡರಿಗೆ ಈ ವಿಷಯ ಹೇಳಲು ಹೆದರುತ್ತಿರುವುದರಲ್ಲಿ ಅಶ್ಚರ್ಯ ವಿಲ್ಲ. ಅದರೂ ಕೆಲವು ವಿದ್ಯಾರ್ಥಿಗಳು ಎಸ್‌ಎಫ್‌ಐನ ಮೊರೆ ಹೋಗಿರುವುದು ಮತ್ತು ವಿದ್ಯಾರ್ಥಿನಿಯರಿಗಾದ ಅನ್ಯಾಯವನ್ನು ಅಧಿಕಾರಿಗಳ ಸರ್ವಾಧಿಕಾರವನ್ನು ಕೊನೆಗೊಳಿಸಲು ಅವರು ಮುಂದಾಗಿರುವುದು ಶ್ಲಾಘನೀಯ.

ತಾಲೂಕು ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿ ಶ್ರೀ ರಾಯ್ಕರ ಅವರಿಗೆ ಈ ವಿಷಯ ತಿಳಿಸಿದರು ಅಂತಹ ಪ್ರಯೋಜನವೇನು ಅಕುಂತಿಲ್ಲ ಯಾಕೆ ಹೀಗೆ?

ಇಂಥಹ ವಿದ್ಯಾರ್ಥಿ ವಿರೋಧಿ ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಸಾರ್ವಜನಿಕರೆಲ್ಲರೂ ಖಂಡಿಸಬೇಕಾಗಿದೆ. ಸಂಬಂಧ ಪಟ್ಟ ಮೇಲಾಧಿಕಾರಿಗಳು ವಾರ್ಡನ್ ಮೇಲೆ ಮತ್ತು ಈ ವರೆಗೆ ಇದನ್ನು ನಿರ್ಲಕ್ಷಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ತಕ್ಷಣ ವಾರ್ಡನ್‌ರನ್ನು ಅಮಾನತು ಗೋಳಿಸಬೇಕು, ಅಥವಾ ವರ್ಗಾಯಿಸಬೇಕು. ಇಲ್ಲದಿದ್ದರೆ ತನ್ನ ಬಂಡವಾಳವನ್ನು ಬಯಲು ಮಾಡಿದ ವಿದ್ಯಾರ್ಥಿನಿಯರ ಮೇಲೆ ಸೇಡಿನ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಯಾವಗ್ಯಾರಂಟಿ ಸಂವಿಧಾನದತ್ತ ಹಕ್ಕನ್ನೇ ಗಾಳಿಗೆ ತೂರಿದ ಸರ್ಕಾರಿ ಅಧಿಕಾರಿಯ ಮೇಲೆ ಯಾವ ಕ್ರಮಕೈಗೊಳ್ಳುತ್ತಾರೆ ಕಾದು ನೋಡೋಣ.

ಕಳಪೆ ಗೊಬ್ಬರದ ಕರ್ಮಕಾಂಡ

ಪುಟ 7 ರಿಂದ

ರಾತ್ರಿ 12.30 ರ ಸುಮಾರಿಗೆ ಅಚಾನಕ್ಕಾಗಿ ಶರಣಬಸವರ ಕಾರು (ಕಾರ್‌ನಂ ಕೆಎ-25, 7007 AMbasodor) ಅಲ್ಲಿಗೆ ಬಂದಿತು. ಡ್ರೈವರ ಮಾತ್ರ ಇದ್ದನು-ಸಿನಿಮಿಯ ರೀತಿಯಲ್ಲಿ ಹಿಂಬಾಗದಿಂದ ನಾಲ್ಕೈದು ಜನ ಮತ್ತು ದ್ವಿಚಕ್ರ ವಾಹನವೊಂದು ಬಂದಿತು ಮಿಂಚಿನೋಪಾಯದಲ್ಲಿ ಆ ತೋಟದ ಮನೆಯಲ್ಲಿದ್ದ ಗೊಬ್ಬರದ ಚೀಲಗಳಿಗೆ ಹಿಂಬಾಗ ದಲ್ಲಿಯೇ ಬೆಂಕಿ ಹಚ್ಚಿರುವುದು ದೂರಕ್ಕೆ ಕಾಣುತ್ತಿರಲಿಲ್ಲ ಮೂತ್ರ ವಿಸರ್ಜನೆಗೆಂದು ಹೋದ ವಿರುಪಾಕ್ಷಪ್ಪನಿಗೆ ಬೆಂಕಿ ಕಾಣಿಸಿತು. ಕೂಡಲೇ ಸಿಬ್ಬಂದಿಗಳನ್ನು ಕರೆದು ಕೊಂಡು ಸ್ಥಳಕ್ಕೆ ದಾವಿಸಿ ಉಸುಕು ಸುರಿವಿ ಬೆಂಕಿ ಆರಿಸಿದ. ಅಷ್ಟರಲ್ಲಿ ಡ್ರೈವರ ಕಾರಿನೊಂದಿಗೆ ಓಡಿ ಹೋಗಿದ್ದ ರಾತ್ರಿ 2.00 ತರುವಾಯ ಜಂಟಿ ಕೃಷಿ ಅಧಿಕಾರಿಗಳು ಮತ್ತು ಪೋಲಿಸರು ಬಂದರು ಸೈಟ್ ಸರ್ವೆ ಮಾಡಿದರು.

ಆದರೆ ಇನ್ನಷ್ಟು ನೂರಾರು ಚೀಲದಷ್ಟು ನಕಲಿ ಗೊಬ್ಬರವನ್ನು ನೆಲದಪ್ಪನ ಮಡಿಲಲ್ಲಿ ಹುದುಗಿಸಿಡಲಾಗಿತ್ತು. ಬೆಳಗು ಮುಂಜಾನೆ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನಪಡೆಯವರು ಪತ್ರಕರ್ತರ ಸಮೇತ ಸ್ಥಳಕ್ಕೆ ದಾವಿಸಿದರು. ನೆಲ ಆಗೆಯುತ್ತಾ ಹೋದಂತೆ ಉದ್ದಕ್ಕೂ ನಕಲಿ ಗೊಬ್ಬರ ಗೋಚರವಾಗ ತೊಡಗಿತು. 2 ಅಡಿ ಅಗಲ 3 ಅಡಿ ಆಳ 150 ಮೀ ಉದ್ದದ ನೆಲದಲ್ಲಿ ನೂರಾರು ಟನ್‌ನಷ್ಟು ನಷ್ಟ ನಕಲಿ ಗೊಬ್ಬರ ಪತ್ತೆ ಯಾಯಿತು ಇಡೀ ಜಿಲ್ಲೆಗೆ ನಕಲಿ ಗೊಬ್ಬರ ಸರಬರಾಜು ಮಾಡುವ ಮೂಲದ ಸಗಟು ವ್ಯಾಪಾರಿ ಪ್ರಾಂತ ರೈತ ಸಂಘದ ರೆಡ್ ಹ್ಯಾಂಡ್‌ಆಗಿ ಹಿಡಿದು ಯಶಸ್ವಿಯಾಯಿತು. ಮಧ್ಯಾಹ್ನದಿಂದ ಸಾಯಂಕಾಲದವರೆಗೆ ಸುದ್ದಿಯು ಕಾಳ್ಗಿಚ್ಚಿನಂತೆ ಹಬ್ಬ ತೊಡಗಿತು ರೈತರು ನೆಮ್ಮದಿಯ ನಿಟ್ಟುಸಿರು ಬಿಟ್ಟರು ಜಿಲ್ಲೆಯ ಪೋಲಿಸ್ ವರಿಷ್ಠಾಧಿಕಾರಿಗಳು ನಿದ್ದೆಗಣ್ಣು ಹೊಸಕಿ ಕೊಂಡರು ತಮ್ಮ ಕೈಯಿಂದ ಮಾಡಲಿಕ್ಕಾಗದ ಕೆಲಸ ರೈತ ಸಂಘದವರು ಮಾಡಿದ್ದು ಅವರಿಗೆ ಒಳಗೊಳಗೇ ಕಸಿವಿಸಿಗೊಳಿಸಿರಬೇಕು. ಅನಿವಾರ್ಯವಾಗಿ ಮಧ್ಯಾಹ್ನಕ್ಕೆ ಅಡಿಷನಲ್ ಎಸ್.ಪಿ ಸಾಹೇಬ ಡಾ। ರಾಜಪ್ಪರನ್ನು ಕಳುಸಿ ಪಂಚನಾಮೆ ಮಾಡಿ ಮಾನ ಮುಚ್ಚಿಕೊಂಡರು. ಸಾಕ್ಷಿ ಕೇಳಿದ ಎಸ್.ಪಿ ಸಾಹೇಬರಿಗೆ ಮುಖಕ್ಕೆ ರಾಚಿ ಉತ್ತರ ಕೊಟ್ಟಿತು ಕರ್ನಾಟಕ ಪ್ರಾಂತ ರೈತ ಸಂಘ. ನಕಲಿಗೊಬ್ಬರ ಜಾಲದ ಮೂಲ ರೈತ ದ್ರೋಹಿ ಶರಣ ಬಸವ ಬಿರಾದಾರ ತಲೆ ಮರೆಸಿಕೊಂಡಿದ್ದಾನೆ ಎರಡು ದಿನಗಳ ತರುವಾಯ.

ಮನವಿ ಪತ್ರ ಮೂಲೆಗಿಟ್ಟಿದ್ದ ಜಿ.ಪ. ಅಧ್ಯಕ್ಷ ಅಲಂ ಪ್ರಭು ಸ್ಥಳಕ್ಕೆ ಭೇಟಿ ಕೊಟ್ಟು ಪೋಲಿಸರ ಕೃಷಿ ಅಧಿಕಾರಿಗಳ ಚುನಾಯಿತ ಜನ ಪ್ರತಿನಿಧಿಗಳು ಮುಖದ ಮೇಲೆ ಈಗ ಎಣ್ಣೆ ಬಸಿಯುತ್ತಿದೆ. ಜಿಲ್ಲೆಯ ರೈತಾಪಿ ಜನ ತಾವು ಖರಿದಿಸಿದ ಗೊಬ್ಬರ ನಕಲಿಯೇ ಅಸಲಿಯೋ ಅಂತ ತಪಾಸಿಸತೊಡಗಿದ್ದಾರೆ. ನಕಲಿ ಕಂಡ ಕೂಡಲೇ ಕೃಷಿ ಇಲಾಖೆಗೆ ಘೇರಾವ್. ಈಗ ನಕಲಿ ಗೊಬ್ಬರ ವ್ಯಾಪಾರಸ್ಥರು ಭಯದ ಗೂಡಾಗಿದ್ದಾರೆ. ಹಲ್ಲು ಕಟಕಟಿಸುತ್ತಿದ್ದಾರೆ. ಬಡ ಒಕ್ಕಲಿಗರು ಮಾತ್ರ ಪ್ರಾಂತ ರೈತ ಸಂಘಕ್ಕೆ ಜಿಂದಾಬಾದ ಹೇಳುತ್ತಿದ್ದಾರೆ.

ರೈತರ ಬದುಕಿನ ಬವಣೆಗಳಿಗೆ ಧ್ವನಿ- ಪ್ರತಿ ಧ್ವನಿಯಾಗಲಿರುವ

ಕರ್ನಾಟಕ ಪ್ರಾಂತ ರೈತ ಸಂಘದ 12 ನೇ ರಾಜ್ಯ ಸಮ್ಮೇಳನ

ಕೃಷಿ ಕ್ಷೇತ್ರವು ಗಂಭೀರ ಬದಲಾವಣೆಗಳಿಗೆ ಒಳಗಾಗುತ್ತಿದೆ. ಬದಲಾಗುತ್ತಿರುವ ಜಗತ್ತಿನ ಶ್ರೀಮಂತ ರಾಷ್ಟಗಳ ಪ್ರತಿನಿಧಿಯಾಗಿರುವ ವಿಶ್ವ ವ್ಯಾಪಾರ ಸಂಘಟನೆಯ ಹಿತಾಸಕ್ತಿಗಳಿಗೆ ಮಣಿದು ನಮ್ಮ ಆಳುವ ವರ್ಗಗಳು ಹೊಸ ಆಮದು ರಪ್ತು ನೀತಿಯನ್ನು ಜಾರಿಗೆ ತಂದಿವೆ. ಇದರಿಂದ ಕೃಷಿ ಮತ್ತು ರೈತನ ಸ್ವಾವಲಂಬಿ ಬದುಕಿನ ಮೇಲೆ ಮತ್ತು ಆ ಮೂಲಕ ದೇಶದ ಸಾರ್ವಭೌಮತೆಯ ಮೇಲೆ ತೀವ್ರ ಪರಿಣಾಮಗಳಾಗುತ್ತಿವೆ.

ಕೃಷಿ ಉತ್ಪನ್ನಗಳ ವಿದೇಶಿ ಪೈಪೋಟಿಯನ್ನು ಎದುರಿಸಲಾಗದೆ ರೈತರು ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ. ತೊಗರಿ, ಹತ್ತಿ, ಶೇಂಗಾ, ರೇಷ್ಮೆ ಅಡಿಕೆ, ತೆಂಗು, ಹಾಲು ಮುಂತಾದವನ್ನು ಉತ್ಪಾದಿಸುವ ರೈತರು ಈಗಾಗಲೇ ಇದರ ವಿರುದ್ಧ ಧ್ವನಿಯೆತ್ತಿದ್ದಾರೆ. ಈ ಮುಕ್ತ ಆಮದು ನೀತಿಯು ಕೇವಲ ಕೃಷಿ ಉತ್ಪನ್ನಗಳ ಬೆಲೆಗಳ ಮೇಲೆ ಮಾತ್ರ ಪರಿಣಾಮ ಬೀರದೆ, ಭೂಮಿಯ ಮೇಲೆ ರೈತನ ಹಕ್ಕನ್ನು ನಾಶ ಮಾಡುವ ಅಪಾಯ ನಿರ್ಮಿಸುತ್ತಿದೆ. ನೀರಾವರಿ, ವಿದ್ಯುತ್, ಖಾಸಗೀಕರಣದ ಪ್ರಯತ್ನಗಳು ನಡೆಯುತ್ತಿವೆ. ಜೊತೆಗೆ ದೇಶೀಯ ಬೀಜ ಮತ್ತು ತಳಿಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಸಂಪೂರ್ಣವಾಗಿ ತಮ್ಮ ಹತೋಟಿಗೆ ತೆಗೆದುಕೊಳ್ಳಲಿವೆ.

ಇಂತಹ ಎಲ್ಲಾ ವಿಚಾರಗಳ ಬಗ್ಗೆ ಗಂಭೀರ ಚರ್ಚೆ ನಡೆಸಿ ತೀರ್ಮಾನಗಳನ್ನು ತೆಗೆದುಕೊಳ್ಳಲು ದೇಶದ ಅತಿದೊಡ್ಡ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾಕೆ ಸೇರ್ಪಡೆಯಾದ ಕರ್ನಾಟಕ ಪ್ರಾಂತ ರೈತ ಸಂಘದ 12ನೇ ರಾಜ್ಯ ಸಮ್ಮೇಳನವು ಸೆಪ್ಟೆಂಬರ್ 18-20 ರವರೆಗೆ ಗುಲ್ಬರ್ಗದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳನ್ನು ರೈತನ ಬದುಕಿನ ಮೇಲಾಗುವ ಪರಿಣಾಮಗಳನ್ನು ತಿಳಿಸುವ ವಿಶಿಷ್ಠ ಮತ್ತು ಮುಖ್ಯವಾದ.....ಹಲವಾರು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

ಮಹತ್ವಪೂರ್ಣವಾದ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ನಾಯಕರಾದ ಪುಟ್ಟಣ್ಣಯ್ಯ ಹಾಗೂ ಹಲವು ಕೃಷಿತಜ್ಞರು ಭಾಗವಹಿಸುವರು.

ಸಹಸ್ರ ಸಹಸ್ರ ರೈತರ ವರ್ಣರಂಜಿತ ಮೆರವಣಿಗೆ ಬಹಿರಂಗ ಸಭೆ ನಡೆಯಲಿದೆ. ದೇಶದ ಹಿರಿಯ ನಾಯಕರಾದ ಸಂಗಾತಿ ಹರ್ಕಿಶನ್ ಸಿಂಗ್ ಸುರ್ಜಿತ್, ಮುಂತಾದವರನ್ನು ಆಹ್ವಾನಿಸಲಾಗಿದೆ. ವೈಚಾರಿಕ ಬರಹಗಳುಳ್ಳ ಆಕರ್ಷಕ ಸ್ಮರಣ ಸಂಚಿಕೆಯೂ ಬಿಡುಗಡೆಗೊಳ್ಳಲಿದೆ.

ಈ ಐತಿಹಾಸಿಕ ಸಮ್ಮೇಳನದ ಯಶಸ್ವಿಗಾಗಿ ವಿಶಾಲವಾದ ಸ್ವಾಗತ ಸಮಿತಿ ರಚನೆಯಾಗಿದೆ. ನಾಡಿನ ಖ್ಯಾತ ಕಲಾವಿದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ವಿ.ಜಿ.ಅಂದಾನಿಯವರು ಅಧ್ಯಕ್ಷರಾಗಿದ್ದಾರೆ.

ಈಗ ಎಲ್ಲಾ ರೈತರ ನಡಿಗೆ ಗುಲಬರ್ಗಾದ ಕಡೆಗೆ.

ಇತಿಹಾಸದ ಪುಟಗಳಿಂದ

ಕಾಂ|| ಸುಂದರಯ್ಯ

ಕ್ರಾಂತಿಯ ಸೂರ್ಯ ತೇಜಸ್ಸು

ಇ.ಕೆ.ರಾಜನ್

ತೆಲಂಗಾಣ ಹೋರಾಟದ ಐತಿಹಾಸಿಕ ನಾಯಕರಾದ ಕಾಂ| ಪಿ. ಸುಂದರಯ್ಯ ನಮ್ಮನ್ನು ಅಗಲಿ 15 ವರ್ಷಗಳಾದವು.

ಸಶಸ್ತ್ರ ಹೋರಾಟ ಸೇರಿದಂತೆ ಕ್ರಾಂತಿಯ ತಂತ್ರಗಳನ್ನು ರೈತ- ಕಾರ್ಮಿಕರ ನಡುವೆ ಹಾಗೂ ಪಾರ್ಲಿಮೆಂಟ್ ಪಕ್ಷಕ್ಕೆ ನಡುವೆ ಏಕರೀತಿಯಲ್ಲಿ ತೆಗೆದುಕೊಂಡು ಹೋದರೆ ಮಾತ್ರ ಒಂದು ಕ್ರಾಂತಿಕಾರಿ ವರ್ಷಕ್ಕೆ ಮುಂದುವರೆಯಲು ಸಾಧ್ಯವೆಂದು ತೋರಿಸಿದವರು, ಮಾರ್ಕ್ಸ್‌ವಾದಿ ಲೆನಿನ್‌ವಾದಿ ತತ್ವಗಳನ್ನು ಪ್ರಾಯೋಗಿಕವಾಗಿ ಅಳವಡಿಸಿದವರು ಪಿ. ಸುಂದರಯ್ಯ. ಸಶಸ್ತ್ರ ಸಮರ ರಂಗದಲ್ಲಿ, ಸಂಘಟನಾ ಹಾಗೂ ಪಾರ್ಲಿಮೆಂಟ್ ರಂಗದಲ್ಲಿಯೂ ತನ್ನ ಅಸಾಧಾರಣ ನೈಪುಣ್ಯ ತೋರಿಸಿದ ಒಬ್ಬ ನಾಯಕರಾಗಿದ್ದರು. ಪ್ರಜಾ ಪ್ರಭುತ್ವವಾದ ಹಾಗೂ ಕ್ರಾಂತಿಕಾರಿ ಚಳುವಳಿಗೆ ಒಂದು ಸ್ಫೂರ್ತಿ ನೀಡುವುದರಲ್ಲಿ ಅವರು ಆದರ್ಶ ಹಾಗೂ ಧೀರತನ ತೋರಿಸಿದವರು ಹಾಗೂ ತಮ್ಮ ಅರ್ಪಣಾ ಮನೋಭಾವ ಹಾಗೂ ಸರಳ ಜೀವನದಿಂದ ಸಮಕಾಲೀನ ಹಾಗೂ ಮುಂದಿನ ಪೀಳಿಗೆಯ ಜನರಿಗೆ ಉತ್ತೇಜನ ಕೊಡುವ ರೀತಿಯಲ್ಲಿ ಜೀವಿಸಿದವರಾಗಿದ್ದರು. ಕಮೂನಿಸ್ಟೇತರರು ಸಹ ಇವರನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಕಾಂ.ಪಿ. ಸುಂದರಯ್ಯನವರು ಅನಾರೋಗ್ಯದಿಂದ ಚೆನ್ನೈನ ಅಪೋಲೋ ಆಸ್ಪತ್ರೆಯಲ್ಲಿ ಮಲಗಿದ್ದಾಗ ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಶ್ರೀ ನೀಲಂ ಸಂಜೀವರೆಡ್ಡಿಯವರು ಸುಂದರಯ್ಯನವರನ್ನು ಕಾಣಲು ಆಸ್ಪತ್ರೆಗೆ ಭೇಟಿ ನೀಡಿದ್ದರು. ನೀಲಂ ಸಂಜೀವ ರೆಡ್ಡಿಯವರು ಪಿ.ಎಸ್. ರವರ ಹತ್ತಿರ ಈ ರೀತಿ ಹೇಳಿದ್ದರು. "ನೀವು ದೇಶಕ್ಕೆ ಅತೀ ಅವಶ್ಯ ವಿರುವ ನಾಯಕರು. ನೀವು ಇನ್ನೂ 30 ವರ್ಷವಾದರೂ ಈ ನಾಡಿನ ಜನರಿಗಾಗಿ ಬದುಕಬೇಕು."

1985 ಮೇ 19 ರಂದು ಕಾಂ| ಸುಂದರಯ್ಯ ನಿಧನರಾದರು. ತದನಂತರ ವಿಜಯವಾಡದಲ್ಲಿ ನಡೆದ ಕಾಂ| ಪಿ.ಎಸ್. ರವರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ ಅಭೂತಪೂರ್ವ ಜನಸಂಖ್ಯೆಯೇ ಪಿ.ಎಸ್. ರವರನ್ನು ಜನ ಗೌರವಿಸುತ್ತಿದ್ದಕ್ಕೆ ಒಂದು ಸಾಕ್ಷಿಯಾಗಿತ್ತು.

"ವಿಪ್ಲವ ದಾರಿಯಲ್ಲಿ ನನ್ನ ಯಾತ್ರೆ" ಎಂಬ ಅವರ ಆತ್ಮ ಕಥನ ಬಿಡುಗಡೆಯಾದ ದಿವಸವೇ ಅವರ 10 ಸಾವಿರ ಪ್ರತಿಗಳು ಒಂದೇ ದಿನದಲ್ಲಿ ಮಾರಾಟವಾದವು. ತೆಲುಗು ಸಾಹಿತ್ಯ ಚರಿತ್ರೆಯಲ್ಲಿಯೇ ಇದು ಹೊಸ ಚರಿತ್ರೆಯಾಯಿತು. ಈ ವರೆಗೂ ಈ ಆತ್ಮ ಕಥನದ 50 ಸಾವಿರ ಪ್ರತಿಗಳು ತೆಲುಗು ನಾಡಿನಲ್ಲಿ ಮಾರಾಟವಾಗಿವೆ.

ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ 'ಅಲಘಾನಿಪಾಡ್ ಗ್ರಾಮದಲ್ಲಿ ಒಂದು ಸಾಮಾನ್ಯ ರೈತ ಕುಟುಂಬದಲ್ಲಿ ಕಾಂ| ಸುಂದರಯ್ಯ ಜನಿಸಿದರು. ದುರ್ಬಲರು, ಕಷ್ಟದಲ್ಲಿರುವ ಜನರ ಒಳಿತಿಗೆ ತನ್ನಿಂದಾಗುವ ಸಹಾಯ ಮಾಡಲು ಅವರು ತಮ್ಮ ಸಣ್ಣ ವಯಸ್ಸಿನಲ್ಲಿಯೇ ದೃಢ ಪ್ರತಿಜ್ಞೆ ಮಾಡಿದವರು.

ಅಧಿಕಾರವನ್ನು ಕನಸಿನಲ್ಲಿಯೂ ಕಾಣಲಾರದಂತಹ 20ನೇ ಶತಮಾನದಲ್ಲಿ ಸ್ವಾತಂತ್ರ್ಯ ಸಮರದ ಘೋಷಣೆ ಕೇಳಿ ಇವರು ರಾಷ್ಟ್ರೀಯ ಚಳುವಳಿಗೆ ದುಮುಕಿದರು. ಗಾಂಧೀಜಿಯ ಶಿಷ್ಯರಾಗಿ ಪಿ.ಎಸ್. ರಾಜಕೀಯ ಜೀವನ ಆರಂಭಿಸಿದರು. 1930 ಜೂನ್‌ನಲ್ಲಿ ಇವರ ಮೊದಲ ಬಂಧನವಾಯಿತು. ಅಪ್ರಾಪ್ತ ವಯಸ್ಸಿನ ಬಾಲಕನಾಗಿದ್ದ ಕಾರಣ ಜೈಲಿಗೆ ಬದಲಾಗಿ ರಿಮ್ಯಾಂಡ್ ಹೋಂ ಗೆ ಕಳುಹಿಸಲಾಯಿತು.

ಪಿ.ಎಸ್. ರವರು ತಮ್ಮ ಕಾರಾಗೃಹ ವಾಸದ ಸಮಯದಲ್ಲಿ ಬಹಳಷ್ಟು ಗ್ರಂಥಗಳನ್ನು ಅಭ್ಯಸಿಸಿದರು. ಮುಖ್ಯವಾಗಿ ಜಗತ್ತಿನ ಕ್ರಾಂತಿಕಾರಿಗಳ ಜೀವನ ಚರಿತ್ರೆಗಳನ್ನು ಆಳವಾಗಿ ಅಭ್ಯಾಸ ಮಾಡಿದರು. " ರಾಜ ಮುಂಡ್ರಿ ಜೈಲಿನಲ್ಲಿರುವಾಗ ಇವರಿಗೆ ಭಗತ್ ಸಿಂಗರ ಸಂಗಾತಿಯಾದ ಶಿವರಾಮ್ ವರ್ಮಾರ ಪರಿಚಯವಾಯಿತು.


ಗಾಂಧಿವಾದದ ಮಾರ್ಗದಲ್ಲಿ ಸ್ವಾತಂತ್ರ್ಯ ಪಡೆಯುವುದು ಪ್ರಯಾಸವೆಂದು ಪಿ.ಎಸ್. ರವರು ಕಂಡುಕೊಳ್ಳಲು ಆರಂಭಿಸಿದರು. ಆದರೆ ಉಗ್ರವಾದದಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಸೋವಿಯತ್ ರಷ್ಯಾದಲ್ಲಿ ನಡೆದ ತರಹ ಕ್ರಾಂತಿ ಭಾರತದಲ್ಲಿಯೂ ಆಗಬೇಕೆಂದು ಬಯಸಿದ ಶಿವ ವರ್ಮಾರ ಅಭಿಪ್ರಾಯದ ಬಗ್ಗೆ ಕಾಂ| ಪಿ.ಎಸ್. ಗೆ ಸಹ ಒಮ್ಮತ ಮೂಡಿತು. ಆದರೆ ಇದಕ್ಕೆ ಅವಲಂಭಿಸಬೇಕಾದ ಮಾರ್ಗದ ಬಗ್ಗೆ ಸ್ಪಷ್ಟ ಚಿತ್ರಣ ಇವರಿಗೆ ಆಗ ಮೂಡಿ ಬಂದಿರ ಲಿಲ್ಲವೆಂದು ಕಾಂ| ಪಿ.ಎಸ್.ತಮ್ಮ ಕಥನದಲ್ಲಿ ಬರೆದಿದ್ದಾರೆ.

1931 ಮಾರ್ಚ್ 23 ರಂದು ಭಗತ್‌ಸಿಂಗ ರನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಗಲ್ಲಿಗೇರಿಸಿದರು. ಅದೇ ಸಮಯಕ್ಕೆ ಗಾಂಧೀಜಿ ಹೋರಾಟ ನಿಲ್ಲಿಸಿದರು. ದಿಢೀರನೇ ಗಾಂಧೀಜಿ ಹೋರಾಟ ನಿಲ್ಲಿಸಿದ್ದು ನನಗೆ ತಡೆದು ಕೊಳ್ಳಲಾಗಲಿಲ್ಲ ಎಂದು " ವಿಪ್ಲಯ ದಾರಿಯಲ್ಲಿ ನನ್ನ ಯಾತ್ರೆ" ಯ ಪುಟ 72 ರಲ್ಲಿ ಕಾ.ಪಿ.ಎಸ್. ಬರೆದಿದ್ದಾರೆ.

ಗಾಂಧೀಜಿಯವರ ಸರಳ ಜೀವನ ಮತ್ತು ಸಮರ್ಪಣ ಮನೋಭಾವ, ಬಡವರ ಬಗ್ಗೆ ಇದ್ದಂತಹ ಅನುಕಂಪ ಕಾಂ| ಸುಂದರಯ್ಯನವರನ್ನು ಬಹಳ ಆಕರ್ಷಿಸಿದವು. ಆದರೆ ಗಾಂದೀಜಿಯವರ ಹೋರಾಟದ ದಾರಿಯ ಬಗ್ಗೆ ದಿನನಿತ್ಯ ನಂಬಿಕೆ ಕಳೆದುಕೊಳ್ಳ ತೊಡಗಿದರು. ಈ ಸಂಧರ್ಭದಲ್ಲಿಯೇ ಕಾಂ| ಅಮೀರ್ ಹೈದರ್ ಖಾನರ ಪರಿಚಯವಾಯಿತು. ಯಾರು ಈ ಅಮೀರ್ ಹೈದರ್‌ಖಾನ್?

ಒಬ್ಬ ಸಾಧಾರಣ ಹಡಗು ಕಾರ್ಮಿಕನಾಗಿ ಜೀವನ ನಡೆಸಿದ, ಕ್ರಾಂತಿಕಾರಿ ಕೆಲಸ ಕಾರ್ಯಗಳಲ್ಲಿ ಸೇರಿ ಕಮ್ಯೂನಿಸ್ಟನಾಗಿ ನಂತರ ಕಮ್ಯೂನಿಸ್ಟ್ ಪಕ್ಷ ಕಟ್ಟಿ ಬೆಳೆಸಲು ಜೀವನವನ್ನು ಮುಡಿಪಾಗಿಟ್ಟ ಅಸಾಧಾರಣ ವ್ಯಕ್ತಿಯಾಗಿದ್ದವರು ಕಾಂ| ಅಮೀರ್ ಹೈದರ್ ಖಾನ್. ಮೀರತ್ ದಂಗೆ ಕೇಸಿನಲ್ಲಿ ಆರೋಪಿಯಾಗಿದ್ದ ಅಮೀರ್ ಹೈದರ್ ಖಾನ್ ಅತೀ ಸೂಕ್ಷ್ಮವಾಗಿ ಪೋಲೀಸರ ಕಣ್ತಪ್ಪಿಸಿ ಹಡಗಿನಲ್ಲಿ ಟಿಕೆಟ್ ರಹಿತ ಯಾತ್ರೆ ಮಾಡಿ ಭಾರತದಿಂದ ಯೂರೋಪಿಗೆ ತೆರಳಿ ಅಂತರಾಷ್ಟ್ರೀಯ ಕಮ್ಯೂನಿಸ್ಟರನ್ನು ಸಂಪರ್ಕಿಸಿ, ಸಂಬಂಧ ಬೆಳೆಸಿ ವಿಷಯ ವಿನಿಮಯ ನಡೆಸಿ, ಇಕ್ಕಟ್ಟಿನ ಪರಿಸ್ಥಿತಿಯ ಕಾಲ ಘಟ್ಟದಲ್ಲಿ ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್ ಭಾರತಕ್ಕೆ ಕಳುಹಿಸಿದ ಪ್ರಮುಖರಲ್ಲಿ ಒಬ್ಬರಾಗಿದ್ದರು ಈ ಕ್ರಾಂತಿಕಾರಿ. ಕಾ| ಅಮೀರ್ ಹೈದರ್ ಖಾನ್ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸಲು ದಕ್ಷಿಣ ಬಾರತದಲ್ಲಿ ಕಂಡುಕೊಂಡ ಒಬ್ಬ ಯುವ ನಾಯಕರಾಗಿದ್ದರು ಕಾಂ| ಪಿ.ಎಸ್. ತಮ್ಮ ಆತ್ಮ ಕಥನದಲ್ಲಿ ಸುಂದರಯ್ಯ ಈ ರೀತಿ ಬರೆಯುತ್ತಾರೆ.

ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುವ ಸಂಧರ್ಭದಲ್ಲಿ ಕಮ್ಮಂಪಟ್ಟಿ ಸತ್ಯನಾರಾಯಣ ಒಂದು ಪತ್ರ ನನಗೆ ಕಳುಹಿಸಿದರು. ಈ ಪತ್ರದಲ್ಲಿ ಅಮೀರ್ ಹೈದರ್ ಖಾನ್ ನನ್ನನ್ನು ನೋಡಲು ಉತ್ಸುಕರಾಗಿದ್ದಾರೆ ಎಂದೂ ಪಕ್ಷದ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕೆಂದು ಈ ಬಗ್ಗೆ ನಿಮ್ಮ ಹತ್ತಿರ ಮಾತನಾಡಬೇಕೆಂದು ತಿಳಿಸಿದ್ದರು, ಕಮ್ಯೂನಿಸ್ಟ್ ರಾಗುವುದರಲ್ಲಿ ಅಭಿಮಾನ ವಿರುವರೆಲ್ಲಾರೂ, ನೀವು ಅಮೀರ್ ಹೈದರ್ ಖಾನರನ್ನು ಕಂಡು ಮಾತನಾಡಿದ ನಂತರ ಒಂದು ನಿರ್ಧಾರ ಕೈಗೊಳ್ಳಿ. ಅನುಭವ ಸಂಪನ್ನನಾದ ನೀನು ಕಮ್ಯೂನಿಸ್ಟ್ ಪಕ್ಷದ ಪೂರ್ಣ ಕಾಲ ಕಾರ್ಯಕರ್ತನಾಗಿ ಕೆಲಸ ಮಾಡಬೇಕು" ಎಂದು ಬರೆಯಲಾಗಿತ್ತು. ಆದರೆ ಅವರು ಬರೆದ ರೀತಿಯಲ್ಲಿ ನಾನು ಕಮ್ಯೂನಿಸ್ಟ್ ಚಳುವಳಿಯಲ್ಲಿ ದೃಢವಾದ ನಂಬಿಕೆಯಿಟ್ಟು ಪಕ್ಷ ಕ್ಕೋಸ್ಕರ ಮಾತ್ರ ಕೆಲಸ ಮಾಡಲು ತೀರ್ಮಾನ ತೆಗೆದು ಕೊಂಡೆ. (ವಿಪ್ಲದ ದಾರಿಯಲ್ಲಿ ನನ್ನ ಯಾತ್ರೆ- ಪುಟ 74).



ಕಮ್ಯೂನಿಸ್ಟ್ ಚಳುವಳಿಯ ಆರಂಭದ ದಿನಗಳು ಅತ್ಯಂತ ಕಷ್ಟದ ಹಾಗೂ ಕಠಿಣ ದಿನಗಳಾಗಿದ್ದವು. ನಿರಂತರವಾಗಿ ದಂಗೆಯ ಮೊಕದ್ದಮೆಗಳನ್ನು ಸೃಷ್ಟಿ ಮಾಡಿ ಕಮ್ಯೂನಿಸ್ಟರನ್ನು ನಿರ್ಮೂಲ ಮಾಡುವ ಕೆಲಸದಲ್ಲಿ ಬ್ರಿಟಿಷ್ ಸರ್ಕಾರ ನಿರತವಾಗಿತ್ತು. ಪೇಷಾವರ್ ದಂಗೆ, ಕಾನ್ಪುರ ದಂಗೆ, ಆನಂತರ ಮೀರತ್ ದಂಗೆ ಇತ್ಯಾದಿ ಮೊಕದ್ದಮೆಗಳನ್ನು ಹಾಕಿ ಎಲ್ಲಾ ಕಮ್ಯೂನಿಸ್ಟ್‌ರನ್ನು ಅವರ ಹಿತೈಷಿಗಳನ್ನು ಕಬ್ಬಿಣದ ಸರಳುಗಳ ಹಿಂದೆ ಬಂಧಿಸಿ ಇನ್ನು ಮುಂದೆ ಕಮ್ಯೂನಿಸ್ಟರು ತಲೆ ಎತ್ತುವುದಿಲ್ಲ ಎಂಬ ಕನಸನ್ನು ಬ್ರಿಟಿಷರು ಅಂದು ಕಂಡಿದ್ದರು. ಉಪ್ಪಿನ ಸತ್ಯಾಗ್ರಹ ತರಹದ ಮಹಾತ್ಮಗಾಂಧಿಯವರ ಹೋರಾಟ ರೀತಿ ಬಗ್ಗೆ ಜೈಲಿನಲ್ಲಿದ್ದ ಹಾಗೂ ಹೊರಗೆ ಇದ್ದ ಸಂಗಾತಿಗಳಲ್ಲಿ ಅಭಿಪ್ರಾಯ ವ್ಯತ್ಯಾಸಗಳು ಬೆಳೆಯತೊಡಗಿತ್ತು. ಈ ಸಂದರ್ಭದಲ್ಲಿ ಅಮೀರ್ ಹೈದರ್ ಖಾನ್ ಹಾಗೂ ಸುಂದರಯ್ಯನವರ ಬೇಟಿಯಾಗಿ ಪಕ್ಷದ ಜವಾಬ್ದಾರಿಯನ್ನು ಸುಂದರಯ್ಯನವರಿಗೆ ವಹಿಸಲಾಯಿತು.

ಶಸ್ತ್ರ ಸಜ್ಜಿತ ತೆಲಂಗಾಣ ರೈತ ವೀರರು



ಗಾಂಧಿಯವರ ಶಿಷ್ಯನಾಗಿ ರಾಷ್ಟ್ರೀಯ ಚಳುವಳಿಗೆ ದುಮುಕಿದ ಪಿ.ಎಸ್. ನಂತರದಲ್ಲಿ ಕಾಂಗ್ರೆಸ್ ಪಕ್ಷ ಕಾಂಗ್ರೆಸ್ ಸೋಷಲಿಷ್ಟ್ ಪಕ್ಷ ಕಮ್ಯೂನಿಸ್ಟ್ ಪಕ್ಷ ಹಾಗೂ ಕೊನೆಯದಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಲ್ಲಿ ರಾಜಕೀಯ ಜೀವನ ಮುಂದುವರೆಸಿದರು. ಭಾರತದಲ್ಲಿ ಕಮ್ಯೂನಿಸ್ಟ್ ಚಳುವಳಿ ಕಟ್ಟಿ ಬೆಳೆಸಲು ಕಾಂ, ಪಿ.ಎಸ್. ರವರ ತ್ಯಾಗಮಯ ಜೀವನ ಮುಖ್ಯ ಶಕ್ತಿಯಾಗಿತ್ತು. ಇವರು ಸಂಘಟನಾ ರಂಗದಲ್ಲಿ ಹಾಗೂ ಪಾರ್ಲಿಮೆಂಟ್ ವೇದಿಕೆಯಲ್ಲಿ ನೀಡಿದಂತಹ ಕೊಡುಗೆಗಳು ಅವಿಸ್ಮರಣೀಯವಾಗಿವೆ. ಅದರಂತೆಯೇ 1964 ರಲ್ಲಿ ಸಿಪಿಐ(ಎಂ) ರೂಪುಗೊಂಡಾಗ ಕಾರ್ಯದರ್ಶಿ ಯಾರು ಆಗಬೇಕು ಎಂಬ ವಿಷಯದಲ್ಲಿ ಎರಡು ಅಭಿಪ್ರಾಯ ಬರುವ ಅಗತ್ಯವೇ ಕಂಡು ಬರಲಿಲ್ಲ. 1977 ರ ವರೆಗೆ ಕಾಂ| ಪಿ.ಎಸ್. ರವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದರು.

ಭಾರತದ ಕಮ್ಯೂನಿಸ್ಟ್ ಚಳುವಳಿಯ ಚರಿತ್ರೆಯಲ್ಲಿ ಅತೀ ಉಜ್ವಲ ಅಧ್ಯಾಯವಾಗಿದೆ ತೆಲಂಗಾಣ ಹೋರಾಟ. ವರ್ಷಾನುಗಟ್ಟಲೆ ಮುಂದುವರೆದ ಹೋರಾಟ, ಬಂದೂಕು ಹಿಡಿದು ಶತ್ರುಗಳಿಗೆದುರಾಗಿ ಹೋರಾಡಿದ ರೈತ ಗೆರಿಲ್ಲಾ ಯೋಧರಿಗೆ ಪ್ರತಿನಿತ್ಯ ಪ್ರಾಯೋಗಿಕ ನಾಯಕತ್ವ ನೀಡಿದವರು ಕಾಂ.ಪಿ. ಸುಂದರಯ್ಯ. ಮುಂದಿಡುವ ಒಂದೊಂದು ಹೆಜ್ಜೆಯಲ್ಲೂ ಚಳುವಳಿಯ ಅಂಗೀಕಾರ ಪಡೆದೇ ಈ ಹೋರಾಟಕ್ಕೆ ನಾಯಕತ್ವ ನೀಡಿದವರು. ಈ ಸಾವಿರಾರು ಹೋರಾಟಗಾರರ ಹಾಗೂ ಲಕ್ಷಾಂತರ ರೈತರ ಅವಿಸ್ಮರಣೀಯ ನಾಯಕನ ಸ್ಥಾನ ಪಡೆದವರಾಗಿದ್ದರು.

ತೆಲಂಗಾಣ ಹೋರಾಟದಲ್ಲಿ 30 ಲಕ್ಷ ಜನರು ವಾಸಿಸುವ 3 ಸಾವಿರ ಗ್ರಾಮಗಳನ್ನು ಒಗ್ಗೂಡಿಸಿ ಗ್ರಾಮ ಸ್ವರಾಜ್ಯ ಸ್ಥಾಪನೆ ಮಾಡುವುದರಲ್ಲಿ ರೈತರನ್ನು ಅಣಿಗೊಳಿಸುವುದರಲ್ಲಿ ಪಿ.ಎಸ್. ರವರ ನಾಯಕತ್ವ ಗುಣ ಹಾಗೂ ಸಂಘಟನಾ ಬದ್ಧತೆ ಮುಖ್ಯವಾಗಿತ್ತು. ಚೀನಾ ಕ್ರಾಂತಿ ರೀತಿಯಲ್ಲಿ ತೆಲಂಗಾಣ ಚಳುವಳಿ ಬೆಳೆದು ಬಂದಿತು. ಈ ಸಮಯದಲ್ಲಿ ಭಾರತದ ಸೈನ್ಯ ಹೈದರಾಬಾದ್ ಪ್ರವೇಶ ಮಾಡಿದಾಗ, ನಿಜಾಂ ಸರ್ಕಾರ ಶರಣಾಯಿತು. ತೆಲಂಗಾಣ ಹೋರಾಟದ ಗತಿ ಬದಲಾಯಿತು. ನಿಜಾಂ ಸರ್ಕಾರಕ್ಕೆ ಎದುರಾಗಿ ಆರಂಭವಾದ ಚಳುವಳಿ ಮುಂದೆ ನೆಹರು ಸರಕಾರಕ್ಕೆ ಎದುರಾಗಿ ನಿಂತಾಗ ಕಮ್ಯೂನಿಸ್ಟ್ ಪಕ್ಷದಲ್ಲಿ ಅಭಿಪ್ರಾಯ ವ್ಯತ್ಯಾಸಗಳು ತಲೆಯೆತ್ತಿದವು; ಸಶಸ್ತ್ರ ಹೋರಾಟದಲ್ಲಿರುವ ಗೆರಿಲ್ಲಾ ಯೋಧರಿಗೆ ಹೋರಾಟ ಹಿಂತೆಗೆದುಕೊಳ್ಳುವ ಸಂದರ್ಭದಲ್ಲಿ ಸರಕಾರದ ಜೊತೆ ಒಂದು ಒಪ್ಪಂದದ ಭರವಸೆಯಲ್ಲಿ ಹೋರಾಟ ಹಿಂತೆಗೆದುಕೊಳ್ಳುವ ನಿಲುವು ಇತ್ತು. ಒಂದು ಒಪ್ಪಂದದಿಂದ ಬರಬೇಕಾದ ಫಲಗಳಿಲ್ಲದೆ ಹೋರಾಟ ಹೇಗೆ ಹಿಂತೆಗೆದು ಕೊಳ್ಳುವುದು, ಎಂಬ ಬಗ್ಗೆ ಪಕ್ಷದಲ್ಲಿ ಅಭಿಪ್ರಾಯ ವ್ಯತ್ಯಾಸಗಳು ತೀವ್ರವಾದವು. ಒಂದು ಪ್ರತ್ಯೇಕ ಪರಿಸ್ಥಿತಿಯಲ್ಲಿ ಅಕ್ಟೋಬರ್ 21, 1951 ರಲ್ಲಿ ಸಶಸ್ತ್ರ ತೆಲಂಗಾಣ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.

ತೆಲಂಗಾಣ ಹೋರಾಟದ ನಂತರ 1952 ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಆಂಧ್ರ ಪ್ರದೇಶದಲ್ಲಿ ಅಭೂತಪೂರ್ವ ಗೆಲುವನ್ನು ಕಮ್ಯೂನಿಸ್ಟ್ ಪಕ್ಷ ಪಡೆಯಿತು. ಕೇವಲ ಆಂಧ್ರ ಪ್ರದೇಶದಿಂದಲೇ 17 ಎಂ.ಪಿ.ಗಳು ಆರಿಸಿ ಬಂದರು. ಭಾರತದ ಲೋಕಸಭೆಯಲ್ಲಿ ಕಾಂ.ಎ.ಕೆ.ಜಿ. ಜೊತೆ ಕಾ.ಪಿ.ಎಸ್. ಕೂಡ ಕಮ್ಯೂನಿಸ್ಟ್ ಗುಂಪಿನ ನಾಯಕರಾದರು. ಲೋಕಸಭೆ ಹಾಗೂ ರಾಜ್ಯ ಸಭೆಯ ಸಂಯುಕ್ತ ನಾಯಕನ್ನಾಗಿ ಪಕ್ಷ ಕಾ.ಪಿ.ಎಸ್. ರವರನ್ನು ಆಯ್ಕೆ ಮಾಡಿತು.

ಕಾ.ಪಿ. ಸುಂದರಯ್ಯ ನಿಧನರಾದಾಗ ಕಾ.ಇ.ಎಂ.ಎಸ್ ಹೀಗೆ ಉದ್ಧರಿಸಿದವರು. " ಕಮ್ಯೂನಿಸ್ಟರು ಅವರನ್ನು ಅಗಲಿದವರ ಬಗ್ಗೆ ಸುಮ್ಮನೆ ತೋರ್ಪಡಿಕೆಗೆ ಅವರನ್ನು ಸ್ಮರಿಸುವುದಿಲ್ಲ. ಅವರು ಜೀವಿಸಿದ ಕಾಲದಲ್ಲಿ ಅವರಿಂದ ಬೆಳೆದು ಬಂದಿರುವ ಕ್ರಾಂತಿಯ ಪಥವನ್ನು ಮುಂದಿನ ಪೀಳಿಗೆ ಮುನ್ನಡೆಸಿಕೊಂಡು ಹೋಗುತ್ತದೆ ಎಂಬ ಪ್ರತಿಜ್ಞೆ ಕೈಗೊಳ್ಳುತ್ತದೆ."

ಪುಸ್ತಕ ಪರಿಚಯ

'ಮಾನವ ಎಚ್ಚೆತ್ತಾಗ'



ಇಂಥಹ ಪುಸ್ತಕವನ್ನು ಕಾದಂಬರಿ ಅಲ್ಲದ್ದರಿಂದ ಆಗಾಗ ಓದಿ ಮುಗಿಸುವುದೆ ರೂಢಿ ಎಂದೇ 'ಮಾನವ ಎಚ್ಚೆತ್ತಾಗ' ಎತ್ತಿಕೊಂಡೆ ಆದರೆ ಗಾಡಿ ನಿಲ್ಲಲೇ ಇಲ್ಲ ಮುಂದಿನ ಒಂದು ಅಧ್ಯಾಯ ಓದಿ ಇಡುವ ಎನ್ನುತ್ತಲೇ ಹೋದೆ. ಕೊನೆಗೆ ಪುಸ್ತಕವನ್ನು ಕೆಳಗಿಟ್ಟಿದ್ದು ಪೂರ್ತಿ ಮುಗಿದ ಮೇಲೆ . ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಆದಿವಾಸಿ ಜನಾಂಗವಾದ ವಾರಲಿಗಳ ಧೀರ ಹೋರಾಟದ ಗುಂಟ ಅವರ ನೇತಾರರಾದ ಶ್ರೀಮತಿ ಗೋದಾವರಿ ಪರುಳೇಕರ ಮತ್ತವರ ಸಂಗಾತಿಗಳ ಸಂಗಡವೆ ಒಬ್ಬನಂತೆ ಸೇರಿ ಹೊದ ಅನುಭವ ನನ್ನದಾಯಿತು. ವಾರಲಿ ಜನಾಂಗ ಅತ್ಯಂತ ಹಿಂದುಳಿದ ಜನಾಂಗ ಅಂಜಿಕೆ, ಅಜ್ಞಾನ, ಗುಲಾಮಗಿರಿಯಲ್ಲಿ ಕರಗಿ ಹೋದ ಸತ್ತಂತಿದ್ದ ಜನಾಂಗದೊಳಗಿನ ಮಾನವ ಎಚ್ಚೆತ್ತಾಗಿನ ವೀರ ಹೋರಾಟದ ಕಥೆಯೇ ಈ ವಿವರ. ಈ ಹೋರಾಟ ಒಂದು ಧೀರ ಹೋರಾಟ ಹೇಗೊ ಹೃದಯದ್ರಾವ ಹೋರಾಟ ಕೂಡ ಹೌದು. ಹಾಗೆಯೇ ಪರುಳೇಕರ ದಂಪತಿಗಳ ಅದ್ಭುತ ಸಾಹಸದ ಕಥೆಯೂ ಹೌದು.

ವಾರಲಿಗಳ ಜೀವನ ಹೇಗೆ ಇತ್ತು?

ವಾರಲಿಗಳು ಅಲ್ಲಿಯ ಜಮಿನುದಾರರ ಗುಲಾಮರಾಗಿದ್ದರು. ಅವರು ಜಮಿನುದಾರರ ಮನೆಯ ಎಲ್ಲ ಕೆಲಸವನ್ನು ಬಿಟ್ಟಿಗಾಗಿಯೇ ಮಾಡಬೇಗಾಗಿತ್ತು. ಜಮಿನುದಾರ ಒಂದು ಕಬ್ಬಿಣದ ಕೋಲನ್ನು ಒಬ್ಬರ ಮನೆಗೆ ಕಳುಹಿಸುತ್ತಿದ್ದ. ಆ ದಿನ ಆ ಮನೆಯ ಎಲ್ಲರೂ ಬಿಟ್ಟಿ ಕೆಲಸಕ್ಕೆ ಹೋಗಬೇಕು. ಆ ಕೋಲನ್ನು ಎರಡನೇ ಮನೆಗೆ ತಲ್ಪಿಸಬೇಕು. ಅವರು ಮಾರನೇ ದಿನ ಕೆಲಸಕ್ಕೆ ಹೋಗಬೇಕು. ಒಮ್ಮೆ ಒರ್ವ ಮಹಿಳೆಗೆ ಜ್ವರ ಬಂದಿತ್ತು ಆದ್ದರಿಂದ ಅವಳು ಹೋಗಿರಲಿಲ್ಲ. ಆಗ ಜಮಿನುದಾರ ಮೊಕದುಂಮೆಯನ್ನು ಕಳಿಸಿದ. ಅವನ ಬಂದು ಮನೆ ಹೊಕ್ಕಿ ಇದ್ದಬಿದ್ದ ಸಾಮಾನುಗಳನ್ನು ಚೆಲ್ಲಾ ಪಿಲ್ಲಿ ಮಾಡಿ ಅವಳನ್ನು ಎಳೆದುಕೊಂಡು ಹೋಗಿ ಜಮಿನುದಾರನ ಎದುರು ನಿಲ್ಲಿಸಿದ. ಆತ ಬಾಯಿಗೆ ಬಂದಂತೆ ಬಯ್ದು ಕೆಲಸಕ್ಕೆ ನೇಮಿಸಿದ. ಅವಳು ಮೂರ್ಛೆ ಹೋದಳು.

ಲೇ॥ ಗೋದಾವರಿ ಪರಳೇಕರ
ಅನು: ಸರಸ್ವತಿ ರಿಸಬುಡ್
ಅಧ್ಯಯನ ಪ್ರಕಾಶನ
ಪಂಡಿತ ಗ್ರಂಥಾಲಯ ಕಟ್ಟಡ, ಶಿರಸಿ
ಉತ್ತರ ಕನ್ನಡ
ವರ್ಷ 2000 ಬೆಲೆ ರೂ 60/-

ಒಂದು ಸಲ ಇಟ್ಟಿಗೆ ಸುಡುವಾಗ ಒಬ್ಬನು ತುಸು ತಪ್ಪಿದ ಎಂದು ಮಾಲಿಕ ಅವನನ್ನೇ ನೆಗೆದು ಸುಡುವ ಇಟ್ಟಿಗೆಯ ಬೆಂಕಿಗೆ ಒಗೆದು ಬಿಟ್ಟ!. ಒಮ್ಮೆ ಮೊಕದಮನಿಗೆ ಉತ್ತರ ಕೊಟ್ಟನೆಂಬಕಾರಣಕ್ಕೆ ನೇಗಿಲಿಗೆ ಒಂದು ಬದಿಗೆ ಕೋಣ ಇನ್ನೊಂದು ಬದಿ ಈ ವ್ಯಕ್ತಿಯನ್ನು ಹೂಡಿ ಕೆಸರುಗದ್ದೆಯಲ್ಲಿ ಚಾಟಿಯಿಂದ ಹೊಡೆದು ಓಡಿಸಲಾಯಿತು.

ಒಮ್ಮೆ ಒಬ್ಬ ಜಮಿನುದಾರ ಜೀತದಾರ ಮಹಿಳೆಗೆ ಬರಲು ಹೇಳಿ ಕಳಿಸಿದನು. ಅವಳ ಗಂಡ ಮನೆಯಲ್ಲಿರಲಿಲ್ಲ. ಅವಳು ಈ ಕರೆಯಾಕೆಂದು ಬಲ್ಲಳು. ಅವಳು ಬರುವುದಿಲ್ಲ ಎಂದುಳು. ಆದರೆ ಅವಳನ್ನು ಎಳೆದೊಯ್ಯಲಾಯಿತು. ಅವಳನ್ನು ಬಿಡಿಸಲು ಯಾರಿಗೂ ಧೈರ್ಯವಿಲ್ಲ. ಅವಳ ಗಂಡ ತುಸು ಬಲವಂತ. ಆತನಿಗೆ ಸುದ್ದಿ ಆದ ಮೇಲೆ ಆತ ಜಗಳಾಡಿದ. ಜಮಿನುದಾರರು ಅವನನ್ನು ಜೀವಂತವಾಗೆ ಹುಳಿದುಹಾಕಿದರು.. ಘಟನೆ ಕರ್ಣಾಕರ್ಣಿಯಾಗಿ ಹಬ್ಬಿತು. ಪೋಲಿಸ್ ತಪಾಸಣೆ ನಡೆಯಿತು. ಕೊನೆಯಲ್ಲಿ ದೊರೆತ ಕೊಳೆತ ಎಲುಬು ಎತ್ತಿನದು ಎಂದು ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟ!

ವಾರಲಿಗಳಲ್ಲಿ ಕದ್ದು ತಂದ ಕೋವಿಗಳಿವೆ ಎಂದು ಸುದ್ದಿ ಹಬ್ಬಿಸಲಾಯಿತು. ನನ್ನುಫರತ್ ಎಂಬವನನ್ನು ಎಳೆದೊಯ್ದರು. ದಾರಿಗುಂಟ ಲಾಠಿಯಿಂದ ಹೊಡೆಯುತ್ತಲೇ ಹೋದರು. ಬಟ್ಟೆಗೆ ಕಲ್ಲು ಕಟ್ಟಿ ಹೊಡೆದರು. ಎರಡೂ ಕಿಯ ಮೇಲೆ ಗುದ್ದಿದರು. ಅವನನ್ನು ಬಾಗಿಸಿ ಲಂಗೋಟಿ ಬಿಚ್ಚಿಹಾಕಿದರು. ಅವನ ಮುಕುಳಿ ಮೇಲೆ ಸೀಮೇ ಎಣ್ಣೆ ಸುರಿದು ಉರಿಯುವ ಕಟ್ಟಿಗೆ ತಂದು ಬೆಂಕಿ ತಾಗಿಸಲು ಪ್ರಯತ್ನಿಸಿದರು. ಜ್ಞಾನತಪ್ಪಿ ಬಿದ್ದ. ಮತ್ತೆ ಹೊಡೆದು. ಜಮಿನುದಾರ ಇಷ್ಟೇ ಹೊಡೆತದಿಂದ ಸರಿ ಹೋಗದ ಈತನ ತಿಕದಲ್ಲಿ ಕೋಲು ತೂರಿದರೆ ಒಂದು ಎರಡು ಕೋವಿ ಸಿಕ್ಕುತ್ತದೆ" ಎಂದ

ಹೊಟ್ಟೆಗಿಲ್ಲದೆ ಸೊಪ್ಪನ್ನು ತಿಂದು ಬದುಕಬೇಕು ಅವರು. ಆದರೂ ಸುಲಿಗೆ. ಇವರ ಬದುಕನ್ನು ತಿದ್ದಲು ಮುಂದಾದವರು ಪರುಳೇಕರ ದಂಪತಿಗಳು. ಆದರಲ್ಲೂ ಗೋದಾವರಿ ಪರುಳೇಕರ ಪಾತ್ರವೇ ಸಿಂಹಪಾಲು.

ಅವರು ಮೇಲು ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದ ಮಹಿಳೆ. ಅವರಿಗಾಗಿ ಪಟ್ಟ ಕಷ್ಟವೇ ಕರುಣಾಜನಕ. ಒಮ್ಮೆ ಅವರು ಚಹಸೊಪ್ಪಿನ ವಾಸನೆ ಅಷ್ಟೇ ಇರುವ ಹಾಲು ಹಾಕದ ಬೆಲ್ಲದ ಚಹವನ್ನು ಕುಡಿಯುತ್ತ ನೆನೆಯುತ್ತಾರೆ."ಲಿಪ್ಟನ್ ಇಲ್ಲವೇ ಆರೆಂಜ್ ಪಿಕೊ ಟಿಯನ್ನು ಬಳಸಿ ತಾಜಾ ಹಾಲನ್ನು ಬೆರಸಿ ಟೀಸೆಟ್ ನಿಂದ ಚಹ ಕುಡಿಯುವ ರೂಢಿ ಇದ್ದ ನನಗೆ ಇಂದು ಇಲ್ಲಿಯ ಆದಿವಾಸಿಯರ ಚಹ ಹೇಗೆ ಹಿಡಿಸೀತು?" ಮುಂದೆ ಅಂದುಕೊಳ್ಳುತ್ತಾರೆ, "ನಿರ್ದಿಷ್ಟ ಉದ್ದಿಶ್ಯ ಸಾಧನೆಗಾಗಿ ಹೋರಾಡುವ ಸಾಧಕನಿಗೆ ಸಾಧನೆಯ ಮಾರ್ಗದಲ್ಲಿ ಬರುವ ಕಷ್ಟಗಳ ಪರಿವೆ ಇರುವುದಿಲ್ಲ. ಆತನಿಗೆ ಒಂದು ಬಗೆಯ ಸಮಾಧಾನವಿರುತ್ತದೆ."

ಗೋದಾವರಿ ವಾರಲಿಗಳ ಊಟವನ್ನೇ ಮಾಡುತ್ತಾರೆ, ಆದರಿಂದ ವಾರಲಿಗಳ ಸ್ನೇಹ ಹೆಚ್ಚುತ್ತದೆ. ಮನೆಯಲ್ಲಿ ತುಪ್ಪ, ಬೆಣ್ಣೆ ಐದಾರು ಬಗೆಯ ಪಲ್ಯ- ಪದಾರ್ಥಗಳ ಊಟ ಸವಿಯುತ್ತಿದ್ದ ಅವರು ವಾರಲಿಗಳೊಡನೆ ಅಕ್ಕಿಧೂಳಿನ ರೊಟ್ಟಿ ತಿನ್ನತೊಡಗಿಬರು. ಅವರಲ್ಲಿ ಬತ್ತದ ಹೊಟ್ಟುಸೇರಿ ನಾಲಿಗೆ ಚುಚ್ಚುತ್ತಿದ್ದುದರ ತಿನಸು ಮಾಡಿದ್ದಾರೆ. ಒಮ್ಮೆಯಂತೂ ಜಮಿನುದಾರರಿಗೆ ಹೆದರಿ ಆ ಹಳ್ಳಿಯ ಹೊಟೆಲ್ ಮಾಲಿಕ ಅವರನ್ನು ರಾತ್ರಿ ಮಲಗಲು ಜಾಗ ಕೊಡದೆ ಹೊರಹಾಕಿದಾಗ ಹೊಟೆಲ್ ಮುಂದಿನ ಮರದ ಅಡಿಯಲ್ಲೇ ರಾತಿಯಿಡಿ ಕುಳಿತು ಕಳೆಯುತ್ತಾರೆ! ಊಟ ವಿಲ್ಲದೆ 8-9 ತಾಸು ನಡೆಯುತ್ತಾರೆ. ಕುದರೆ ಲಾಯದಲ್ಲಿ ಮಲಗುತ್ತಾರೆ. ಇಂಥ ಕಷ್ಟಗಳನ್ನು ಸಹಿಸುತ್ತ ಎಲ್ಲ ವಾರಲಿಗಳನ್ನು ಕೆಂಬಾವುಟ-ಕಮ್ಯುನಿಸ್ಟ ಪಕ್ಷ-ದ ಅಡಿಯಲ್ಲಿ ತರುತ್ತಾರೆ. ವಾರಲಿಗಳಿಗೆ ಕೆಂಬಾವುಟ ಆತ್ಮಸ್ಥೈರ್ಯದ ಸಂಕೇತವಾಗುತ್ತದೆ. ಹೋರಾಟ, ಪಾಠ ಪ್ರವಚನದಿಂದ ವಾರಲಿಯವರ ಹೃದಯದಲ್ಲಿ ಸತ್ತು ಬಿದ್ದಿದ್ದ ಮಾನವ ಎಚ್ಚರಗೊಳ್ಳುತ್ತಾನೆ.

ಸುಳ್ಳು ಆರೋಪಕ್ಕೆ ಗುರಿಯಾಗಿ ಜೈಲಿನಲ್ಲಿದ್ದ ವಾರಲಿಗಳ ಬಳಿಗೆ ಒಮ್ಮೆ ಅಲ್ಲಿಯ ಮ್ಯಾಜಿಸ್ಟ್ರೇಟ್ ಹೋಗಿ ನಿಮ್ಮನ್ನು ಬಿಡುತ್ತೇನೆ. ನೌಕರಿಕೊಡಿಸುತ್ತೇನೆ ಆ ಕೆಂಪುಬಾವುಟದಿಂದ ದೂರಸರಿಯಿರಿ ಎಂದು ಹೇಳಿದಾಗ ಆ ಎಚ್ಚೆತ್ತ ಮಾನವ ಹೀಗೆ ಉತ್ತರಿಸುತ್ತಾನೆ "ಎಷ್ಟು ಕಾಲದ ವರೆಗೆ ಸರಕಾರ ನಮ್ಮನ್ನು ಸೆರೆಯಲ್ಲಿ ಇಟ್ಟೀತು? ವರುಷ ತಪ್ಪಿದರೆ ಎರಡು ವರುಷ. ಒಂದಲ್ಲಾ ಒಂದು ಸಾರೆ ಬಿಡುಗಡೆ ಮಾಡಬೇಕಲ್ಲವೇ? ನಮ್ಮ ರಾಜ್ಯ ಬಂದಿತೆಂದರೆ ಆ ಕಾಲಕ್ಕೆ ಇದೇ ಕೊಠಡಿಗಳನ್ನು ನಿಮಗಾಗಿ ಕಾದಿಡುವುದಿದೆ"

ವಾರಲಿಗಳಿಗೆ ಕಮ್ಯುನಿಸ್ಟ್ ಪಕ್ಷದಲ್ಲಿ ಅಚಲ ನಂಬಿಕೆ ಬರುತ್ತದೆ. ಅವರ ಒಗ್ಗಟ್ಟನ್ನು ಮುರಿಯಲು ಜಮೀನುದಾರರು, ಸಾಹುಕಾರರು ಮತ್ತು ಸರಕಾರ ಕೂಡ ಸಾಕಷ್ಟು ಪ್ರಯತ್ನ ಮಾಡಿತು. ಪರುಳೇಕರ ದಂಪತಿಗಳನ್ನು ಜಿಲ್ಲೆ ಪ್ರವೇಶಸದಂತೆ ಸರಕಾರ ಬಹಿಷ್ಕಾರ ಹಾಕಿತು.

ವಾರಲಿಗಳ ಮೇಲೆ ಮತ್ತು ಪರುಳೇಕರರ ಮೇಲೆ ಸುಳ್ಳು ಆರೋಪ ಹೋರಸಲಾಯಿತು. ರಶ್ಯಾ ಏಜೆಂಟ್‌ರೆಂದು ಸುದ್ದಿ ಹಬ್ಬಿಸಲಾಯಿತು. ಎಂದೂ ಹಿಂಸೆಗಿಳಿಯದ ವಾರಲಿಗಳ ಮೇಲೆ ಗೋಲಿಬಾರು ಕೂಡ ನಡೆಯಿತು. ಹತ್ತು ಮಂದಿ ಸತ್ತರು. ಏನೇ ಆದರೂ ವಾರಲಿಗಳ ಒಗ್ಗಟ್ಟು ಮುರಿಯಲಿಲ್ಲ ಮೊದಲನೆಯದಾಗಿ ಜೀತ ಪದ್ಧತಿಯನ್ನು ಮುರಿಯಲಾಯಿತು. ಹುಲ್ಲು ಕತ್ತರಿಸುವ ಕೂಲಿಗೆ ತಕ್ಕ ದರ ಪಡೆಯಲಾಯಿತು. ಹಾಗೆಯೇ ಇತರ ಕೂಲಿಯನ್ನು ಹೆಚ್ಚಿಸಿಕೊಳ್ಳಲಾಯಿತು. ವಾರಲಿಗಳ ಮಾತಿನಲ್ಲೇ ಹೇಳುವುದಾದರೆ "ಮೊದ್ಲು ನಾವು ಹೇಗಿದ್ವಮ್ಮ ದಿನ ಬೆಳಗಾದ್ರೆ, ಸಾಹುಕಾರ ವದಿಕೆ, ಲತ್ತೆ, ಸಾಲ ಮದುವೆ, ಹುಟ್ಟು, ಸಾವು , ಗದ್ದೆ ಬಿಟ್ರೆ ಜಗತ್ತೇ ಗೊತ್ತಿರಲಿಲ್ಲ, ಆದ್ರೆ ಈಗ ಕಮ್ಯುನಿಸ್ಟ್ ಪಕ್ಷದ ಕೆಂಪುಬಾವುಟದ ಸಭೆ, ಪಾರ್ಟಿಯ ಮೀಟಿಂಗು, ಕಾಂಗ್ರೆಸ್ ಏನು ಮಾಡುತ್ತೆ, ಕೆಂಪುಬಾವುಟದವರು ಮಾಡಿದ್ದಾರೆ ಕಾಂಗ್ರೆಸ್ ಯಾವ ಮುಖಂಡನ ಹೇಳಿಕೆ; ತಮ್ಮ ಧ್ಯೇಯ ಹೇಗೆ ಸಾಧಿಸೋದು ತರಭೇತಿ ಕೇಂದ್ರ ಎಲ್ಲಿ ಯಾವಾಗ ನಡೆಯುವುದು, ಬೇರೆಯವರಿಗೆ ಯಾವ ರೀತಿ ಹೇಳುವುದು ಇವೇ ಮುಂತಾದ ಸಂಗಾತಿಗಳ ಬಗ್ಗೆ ನಮಗೆ ತಿಳಿವಳಿಕೆಯಾಗಿದೆ. ಈಗ ನಾವು ಮಾತಾಡುತ್ತೇವೆ. ಪಟ್ಟಣಕ್ಕೆ ಹೋದರೆ ಅಲ್ಲಿಯ ಸಾಹುಕಾರ ಅಂಗಡಿಕಾರ ನಮ್ಮನ್ನು ಕಂಡು ಬನ್ನಿ ಕೂತುಕೊಳ್ಳಿ ಎಂದು ಆದರಿಸುತ್ತಾನೆ. ರಷ್ಯಾ ಚೀನಾ, ಅಮೇರಿಕಾಗಳ ಸುದ್ದಿ ನಡೆಯುತ್ತವೆ. ಇಂದು ಪ್ರಪಂಚದ ಬಾಗಿಲು ತೆರೆಯಿತು"

ಈ ಹೋರಾಟ ಬ್ರಿಟಿಶ್ ಸರಕಾರ ಇದ್ದಾಗ ಎಷ್ಟು ಕಷ್ಟದಾಯಕವಾಗಿತ್ತು ಕಾಂಗ್ರೆಸ್ ಸರಕಾರದ ಕಾಲದಲ್ಲೂ ಅಷ್ಟೆ ಕಷ್ಟಕಾರಕವಾಗಿತ್ತು. ಎಂತಲೇ ಬಹಳ ಸ್ವಾತಂತ್ರ್ಯದ ದಿನ ಅನ್ಯಾಯವಾಗಿ ಸೆರೆಗೆ ಹಾಕಲ್ಪಟ್ಟು ವಾರಲಿಗಳು ತಮಗೆ ಕೊಟ್ಟ ಕೇಸರಿಬಾತ್‌ಗಳನ್ನು ತಿರಸ್ಕರಿಸಿದರು ತಮಗೆ ಸ್ವಾತಂತ್ರ್ಯ ಬರಲಿಲ್ಲ ಎಂದರು. ಇಂಥವರ ಪಾಲಿಗೆ ಈಗಲೂ ಸ್ವಾತಂತ್ರ್ಯ ಎಲ್ಲಿ ಬಂದಿದೆ. ಇಂಥವರಿಗೆ ಸ್ವಾತಂತ್ರ್ಯ ಬರುವ ತನಕವೂ ಇಂಥ ಹೋರಾಟ ನಡೆಯಬೇಕಾಗಿದೆ.

ಇಂಥ ಧೀರ ಹೋರಾಟವನ್ನು ದಂಗೆ, ಕಮ್ಯುನಿಸ್ಟರ ಪಿತೂರಿ ಎಂದೆಲ್ಲ ಹೇಳಿದವರು, ಪತ್ರಿಕೆಯಲ್ಲಿ ಬರೆದವರೂ ಇದ್ದಾರೆ. ಆದರೆ ಅದೆಲ್ಲ ಅಸತ್ಯವನ್ನು ಅಲ್ಲಗಳೆದು ಸಾಧನೆಯ ಸತ್ಯದರ್ಶನ ಮಾಡುವ ಪರುಳೇಕರರಿಗೆ ಯಾವ ಸಂಬಂಧವೂ ಇರದ ಮಹಾತ್ಮಾಗಾಂಧೀಜಿಯ ಅನುಯಾಯಿ ಶ್ರೀ ನರಹರಿ ಪಾರೇಖ ಅವರು ಗಾಂಧೀಜಿಯದೇ ಪತ್ರಿಕೆಯಾದ 'ಹರಿಜನ ದ 19-1-1942 ರ ಸಂಚಿಕೆಯಲ್ಲಿ ಹೀಗೆ ಬರೆದಿದ್ದಾರೆ.

"ಡಹಾಣು ತಾಲೂಕಿನ ಆದಿವಾಸಿಯರ ಚಳುವಳಿಯಿಂದ ನಮ್ಮ ಕಣ್ಣು ತೆರೆಯಬೇಕು. ಪೋಲಿಸಿನವರು ಮತ್ತು ಸೈನ್ಯದವರು ಈ ಚಳುವಳಿಯನ್ನು ಹತ್ತಿಕ್ಕಬಹುದು; ಶಾಂತಿಯ ಪುನಃ ಸ್ಥಾಪನೆಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇದರಿಂದ ಸಮಸ್ಯೆಯ ನಿವಾರಣೆ ಯಾಯಿತೆಂಬರ್ಥ ವಲ್ಲ ಇಂಥ ಚಳುವಳಿಗಳು ರಾಜಕೀಯದಲ್ಲಿಯ ಗಂಭೀರ ರೋಗದ ಬಾಹ್ಯ ಲಕ್ಷಣಗಳು, ರೋಗದ ಮೂಲವು ನಷ್ಟವಾಗದಿರುವವರೆಗೆ ಬಾಹ್ಯ ಉಪಚಾರಗಳಿಂದ ಲಾಭವೂ ಆಗಲಾರದು ಈ ಚಳುವಳಿಗಾರರು ಅತಿಶಯ ಅಂಜುಬುರುಕ ಜನರೆಂಬುದು ವಿಧಿತವಿದೆ. ಅವರ ಬಡತನ, ಅಜ್ಞಾನಗಳು ವರ್ಣನಾತೀತವಿದೆ. ಆಯಾ ಕಾಲದ ಅಧಿಕಾರಿಗಳು ಜಮೀನುದಾರರು ಸಾಹುಕಾರರು ಇಂಥ ಅನೇಕ ಸುಲಿಗೆ ಗಾರರು ಇವರನ್ನು ವರ್ಷಾನು ವರ್ಷದಿಂದ ಹೀರಿ ಹಿಪ್ಪೆ ಮಾಡಿದ್ದಾರೆ. ಸತ್ಯಾಂಶದಲ್ಲಿ ಇವರೇ ಭೂಮಿ ಒಡೆಯರಿದ್ದರು. ಆದರೆ ಅವರು ಇಂದು ಅದೇ ಭೂಮಿಯಲ್ಲಿ ಗುಲಾಮರಾಗಿ ಬಾಳುವ ಸ್ಥಿತಿಯಾಗಿದೆ. ಹೊಸ ಜಮೀನುದಾರರಿಗೆ ಮತ್ತು ಸಾಹುಕಾರರಿಗೆ ಇವರ ದುಡಿಮೆಯಿಂದ ಸಾಕಷ್ಟು ಲಾಭವಿದೆ. ಭೀಕರ ಅನ್ಯಾಯ ಮತ್ತು ದಬ್ಬಾಳಿಕೆ ಇವೇ ಈ ಶೋಷಣೆಯ ಮೂಲ. ಇಂಥ ಶೋಷಣೆ, ದಬ್ಬಾಳಿಕೆ, ನಿರಾಸೆ ಮತ್ತು ವಿಫಲತೆ ಮೂಲಕ ಅವರು ಹಿಂಸಾಕೃತ್ಯದಲ್ಲಿ ತೊಡಗಿದರೆ ಅದು ಯಾವ ಆಶ್ಚರ್ಯ? ಇಂಥ ಶೋಷಣೆಗೆ ಒಳಗಾದ ದಲಿತ ಆದಿವಾಸಿಯರ ಆತ್ಮ ಎಚ್ಚೆತ್ತಿದೆ ಅವರ ಸಂಪೂರ್ಣ ವಿಮೋಚನೆಯಾಗುವ ಸಮಯ ಬಂದೊದಗಿದೆ, ಇವರು ಇಟ್ಟ ಹೆಜ್ಜೆಯನ್ನು ಎಂದೂ ಹಿಂದೆಗೆಯಲಾರರು."

ಇದು ಸಾಕಲ್ಲವೇ ಪರುಳೇಕರರ ಮತ್ತು ವಾರಲಿಗಳ ಧೀರ ಹೋರಾಟದ ಸಾರ್ಥಕ್ಯಕ್ಕೆ ಪ್ರಮಾಣ ಪತ್ರ? ಈ ಪುಸ್ತಕ ಸಂಘಟಕರಿಗೂ ಕಾರ್ಯಕರ್ತರಿಗೂ ಶೋಷಿತರಿಗೆ ಮಾತ್ರ ಪಾಠ ಹೇಳುವುದಲ್ಲ, ಶೋಷಕರನ್ನು ಎಚ್ಚರಿಸುತ್ತದೆ. ಚರಿತ್ರೆಯ ಅಂತರಂಗವನ್ನು ತಿಳಿಸಿಕೊಡುತ್ತದೆ.

ಮುಖ ಪುಟದ ವಿನ್ಯಾಸ ಚೆನ್ನಾಗಿದ್ದರೂ ಬಣ್ಣದ ಹೊಂದಾಣಿಕೆ ಸರಿಯಲ್ಲಿ. ಒಳಗೊಂದಿದ್ದರೆ ಸಾಕು ಹೊರಗೆ ಹೇಗಿದ್ದರೇನು ಎನ್ನುವ ಅಸಡ್ಡೆ ಸರಿಯಲ್ಲ.

- ಡಾ॥ ಆರ್.ವಿ. ಭಂಡಾರಿ



ಆಸ್ಟ್ರೇಲಿಯಾದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯುವ ಸಿಡ್ನಿ ಒಲಂಪಿಕ್ಸ್ ಜ್ಯೋತಿಯನ್ನು ಕೊಂಡೊಯ್ಯಲು ಗ್ರೀಸ್ ದೇಶದಲ್ಲಿ ಆರಂಭವಾದ ಒಲಿಂಪಿಕ್ ಕ್ರೀಡೆಗಳ ಪರಂಪರೆ ಅನುಸರಿಸಿ ಜ್ಯೋತಿಯನ್ನು ಬೆಳಗುತ್ತಿರುವುದು. ಈ ಜ್ಯೋತಿಯನ್ನು ಸಾವಿರಾರು ಕಿ.ಮಿ.ಗಳ ದೂರ ನೆಲ, ಸಾಗರಗಳನ್ನು ಕ್ರಮಿಸಿ ವಿಶ್ವದ ಪ್ರಸಿದ್ಧ ಆಟಗಾರರು ಸಿಡ್ನಿಗೆ ತಲುಪಿಸಿದ್ದಾರೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ